Mr. SPEAKER.—I am not permitting that. Since the Hon'ble member has not given me any notice about that at all, he cannot raise it on the floor of the House. The Leader of the Opposition was very wise in not yielding.

DISCUSSION ON MATTERS OF URGENT PUBLIC IMPORTANCE FOR SHORT DURATION UNDER RULE 59.

Re: **Protest of students against enhancement in College fees in the various Colleges in the State.**

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಅಧ್ಯಕ್ಷರೆ, ನಾನು ಕಳುಹಿಸಿರುವ ಸೂಚನೆ ಇತ್ತೀಚೆಗೆ ಮೈಸೂರು ಸರ್ಕಾರದವರು ತಮ್ಮ ವಶದಲ್ಲಿರುವ ಕಾಲೇಜುಗಳಲ್ಲಿ ಫೀಜನ್ನು ಇದ್ದಕ್ಕಿದ್ದ ಹಾಗೆ ಬಹಳ ಮಟ್ಟಿಗೆ ದುಬಾರಿಯಾಗಿ ಏರಿಸುವುದಕ್ಕೆ ಸಂಬಂಧಪಟ್ಟಿದೆ. ಇಡೀ ಸಂಸ್ಥಾನದಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಆಗಿರುವ ತೊಂದರೆಯನ್ನು ಸುಮಾರು ಒಂದು ವಾರಕಾಲದಿಂದ ವಿದ್ಯಾರ್ಥಿಗಳು ಮನವಿಯ ಮುಖಾಂತರವೂ ಮತ್ತು ಚಳವಳಿಯ ಮುಖಾಂತರವೂ ಸರ್ಕಾರಕ್ಕೆ ತಿಳಿಯಪಡಿಸಿದ್ದಾರೆ. ಕಾಲೇಜುಗಳಲ್ಲಿ ಫೀಜನ್ನು ಹೆಚ್ಚಿಸಿರುವುದರ ಬಗ್ಗೆ ಮಾನ್ಯ ಮಂತ್ರಿಗಳು ಈ ಸಭೆಯಮುಂದೆ ಒಂದು ಹೇಳಿಕೆಯನ್ನು ಆಗಲೇ ನೀಡಿದ್ದಾರೆ. ಅವರು ಬಹಳ ಚಾಣಕ್ಯತನದಿಂದ ತಾವು ಮಾಡಿರುವುದು ಸರಿಯಾಗಿದೆಯೆಂದು ತೋರಿಸುವಂತೆ ಹೇಳಿಕೆ ನೀಡಿದ್ದಾರೆ. ಅವನ್ನು ಅವರೇ ಸ್ವತಃ ಬರೆದು ಓದಿದರೋ ಅಥವಾ ಯಾರಾದರೂ ಬರೆದು ಕೊಟ್ಟರೋ ಗೊತ್ತಿಲ್ಲ. ನಮ್ಮ ವಿದ್ಯಾ ಮಂತ್ರಿಗಳು ಸಹಜವಾಗಿ ತಾವು ವಿದ್ಯಮಾನಗಳನ್ನು ಸ್ವತಃ ಚೆನ್ನಾಗಿ ತಿಳಿದುಕೊಳ್ಳಬೇಕು ಎಂಬ ಉದ್ದೇಶದಿಂದ ನಾನು ಒತ್ತಿ ಒತ್ತಿ ಹೇಳುತ್ತಿದ್ದೇನೆ. ಈ ವಿಚಾರವನ್ನು ಅವರು ವಿಮರ್ಶೆ ಮಾಡುವ ಶಕ್ತಿ ಪಡೆಯಲಿ ಎಂಬ ಉದ್ದೇಶದಿಂದ ಒತ್ತಿ ಹೇಳುತ್ತಿದ್ದೇನೆ. ಈ ದಿವಸ ಮೈಸೂರು ಸಂಸ್ಥಾನದಲ್ಲಿ ವಿದ್ಯಾರ್ಥಿಗಳಿಗೆ ಫೀಜನ್ನು ಏರಿಸುವ ಮೂಲಕ ದೇಶದಲ್ಲಿ ದೊಡ್ಡಗಲಭೆ ಏಳುವ ಪರಿಸ್ಥಿತಿಯನ್ನುಂಟು ಮಾಡಿದ್ದಾರೆ. ಅವರ ಹೇಳಿಕೆ ಪ್ರಕಾರ ಫೀಜಿನ ದರದ ಏರಿಕೆಯಿಂದ ನಮ್ಮ ದೇಶವನ್ನು ಎರಡು ಭಾಗ ಮಾಡಿದ್ದಾರೆ, ಹಳೆಯ ಮೈಸೂರು ಮತ್ತು ಇಂಟಿಗ್ರೇಟ್ ಆಗಿರುವ ಪ್ರದೇಶಗಳು. ಹೊಸದಾಗಿ ವಿಲೀನೀಕರಣವಾಗಿರುವ ಪ್ರದೇಶಗಳಲ್ಲಿ ಕಾಲೇಜ್ ಫೀಜಿನ ದರ ಜಾಸ್ತಿಯಿದೆ, ಆದುದರಿಂದ ಹಳೆಯ ಮೈಸೂರಿನದನ್ನೂ ಆ ಮಟ್ಟಕ್ಕೆ ಏರಿಸುತ್ತೇವೆ ಎಂದು ವಾದಮಾಡಿದ್ದಾರೆ. ಹಳೆಯ ಮೈಸೂರಿಗೆ ರಿಯಾಯಿತಿ ಕೊಡಲಿಲ್ಲ. ಈ ದಿವಸ ಕನ್ನಡ ರಾಜ್ಯವಾಯಿತು, ಕರ್ಣಾಟಕವಾಯಿತು, ಭಾವೈಕ್ಯತೆ ಆಗಬೇಕು ಎಂದು ಹೇಳುತ್ತಿರುವಾಗ ತಾರತಮ್ಯ ಭಾವನೆ ವ್ಯಕ್ತವಾಗಿದೆ; ಹಿಂದಿದ್ದ ರಿಯಾಯಿತಿ ತೆಗೆದುಹಾಕಿದ್ದಾರೆ. ಇದರಿಂದ ಭಾವೈಕ್ಯತೆ ಆಗುತ್ತದೆಯೇ ಎಂದು ಮಂತ್ರಿಗಳಿಗೆ ಪ್ರಶ್ನೆ ಹಾಕುತ್ತಿದ್ದೇನೆ. ಇವತ್ತು ದೇಶದಲ್ಲಿ ಭಾವೈಕ್ಯತೆಯನ್ನುಂಟು ಮಾಡುತ್ತಿಲ್ಲ, ಭಾವೋದ್ರೇಕವನ್ನು ಹರಡುತ್ತಿದ್ದೀರೆ. ಇದಕ್ಕೆ ಮುಂದೆ ಉತ್ತರ ಕೊಡಬೇಕಾದೀತು ಎಂದು ಎಚ್ಚರಿಸುತ್ತೇನೆ.

ಹಳೆಯ ಮೈಸೂರಿನಲ್ಲಿರುವ ಬಹುಶಃ ಶೇಕಡ 80 ಕಾಲೇಜುಗಳು ಸರ್ಕಾರದಿಂದ ಸ್ಥಾಪಿತವಾಗಿವೆ. ವಿಶ್ವವಿದ್ಯಾನಿಲಯವು ದಿವಂಗತ ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಸ್ಥಾಪಿತವಾಯಿತು. ಆಗ ಅದಷ್ಟು ಸುಗಮವಾಗಿ ನಡೆಯಲಿ, ಶುದ್ಧವಾದ ವಿದ್ಯಾಭ್ಯಾಸ ಹರಡಲಿ ಎಂಬ ಉದ್ದೇಶದಿಂದ ಮೈಸೂರು ಸಂಸ್ಥಾನದಲ್ಲಿದ್ದ ಕಾಲೇಜುಗಳಲ್ಲಿ ಬಹುಭಾಗವನ್ನು ಸರ್ಕಾರಕ್ಕೆ ಸೇರಿಸಿಕೊಂಡಿದ್ದರು. ಆ ದಿವಸ ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜುಗಳ ಮೇಲ್ವಿಚಾರಣೆ ಮಾಡುವ ಜವಾಬ್ದಾರಿ ವಿಶ್ವವಿದ್ಯಾನಿಲಯಕ್ಕೆ ಸೇರಿತ್ತು. ಕ್ರಮೇಣ ಎರಡು ವರ್ಷಗಳ ಹಿಂದೆ ವಿಶ್ವವಿದ್ಯಾನಿಲಯದವರು ಕಾಲೇಜುಗಳನ್ನು ಸರ್ಕಾರಕ್ಕೆ ವಹಿಸಿ ಈಗ ರಿಸರ್ಚ್ ಮತ್ತು ಪೋಸ್ಟ್ ಗ್ರಾಜುಯೇಟ್ ಕೋರ್ಸನ್ನು ತಮ್ಮ ಕೈಲಿ ಇಟ್ಟುಕೊಂಡಿದ್ದಾರೆ. ಈ ದಿವಸ ಮದ್ರಾಸ್ ಕಾಲೇಜನ್ನೂ, ಕರ್ಣಾಟಕ ಕಾಲೇಜನ್ನೂ ಉದಾಹರಣೆಗೆ ತೆಗೆದುಕೊಂಡಿದ್ದಾರೆ. ಅಲ್ಲಿ ಫೀಜಿನ ದರ ಜಾಸ್ತಿ, ಹಳೇ ಮೈಸೂರಿನಲ್ಲಿ ಕಡಮೆ ಇತ್ತು. ಮೈಸೂರು ದೇಶದಲ್ಲಿ ಸರ್ಕಾರದವರು ಕಾಲೇಜುಗಳನ್ನು ಕಾರ್ಖಾನೆಗಳಾಗಿ ಪರಿವರ್ತನೆ ಮಾಡಿಲ್ಲ. ವಿದ್ಯಾಭ್ಯಾಸವೆಂಬುದು ಒಂದು ಬಂಡವಾಳವಿದ್ದ ಹಾಗೆ. ಈ ದಿವಸ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳೇ ದೇಶದ ಸಂಪತ್ತು. ಇದನ್ನು ಉತ್ತಮ ಪಡಿಸಲು ಬಂಡವಾಳ ಹಾಕುತ್ತಿದ್ದೇವೆಯೇ ಹೊರತು ಕೈಗಾರಿಕೆಗಳಲ್ಲಿರುವ ಆರ್ಥಿಕ ನೀತಿಯನ್ನನುಸರಿಸುತ್ತಿಲ್ಲ. ಕೈಗಾರಿಕೆಗಳಲ್ಲಿ ತಯಾರಾದ ಸಾಮಾನುಗಳಿಗೆ ಖರ್ಚು ಜಾಸ್ತಿಯಾಗಿದೆಯೆಂದು ಕೊಳ್ಳುವವರ ತಲೆಯ ಮೇಲೆ ಅದನ್ನು ಹಾಕುವಂತೆ ವಿದ್ಯಾಭ್ಯಾಸದ ವಿಚಾರದಲ್ಲಿ ಮಾಡಬಾರದು. ವಿದ್ಯಾರ್ಥಿಗಳಿಗೆ ಖರ್ಚು ಮಾಡುವುದಕ್ಕೆ ಹಣ ಸಾಲದು ಆದುದರಿಂದ ನಾಲ್ಕು ಲಕ್ಷ ರೂಪಾಯಿಗಳನ್ನು ಅವರ ಮೇಲೆ ಹಾಕುತ್ತೇವೆ ಎಂದು ವಾದಮಾಡಿರುವುದು ಸರಿಯಾದ ಆರ್ಥಿಕ ನೀತಿಯಲ್ಲ, ದೇಶದ ಅಭಿವೃದ್ಧಿಗೆ ಖಂಡಿತ ಸರಿಯಾದ ನೀತಿಯಲ್ಲ. ಎಜ್ಯುಕೇಷನ್ ಸಿಸ್ಟಂ ವಿಚಾರಲ್ಲಿ ಅಮೇರಿಕಾದ ಗಾಲ್‌ಬ್ರೇತ್‌ರವರು ವಿದ್ಯಾಭ್ಯಾಸವೆನ್ನುವುದು a form of investment for future production ಎಂದು ಹೇಳಿದ್ದಾರೆ. ವಿದ್ಯೆಗಾಗಿ ಹಾಕುವ ಹಣವೆಲ್ಲಾ ಒಂದು ಬಂಡವಾಳವಿದ್ದಂತೆ. ಇದು ಮುಂದೆ ದೇಶದ ಸಂಪತ್ತನ್ನು ಹೆಚ್ಚಿಸುವುದು. ಆದುದರಿಂದ ಖರ್ಚು ಹೆಚ್ಚು, ಅದಕ್ಕಾಗಿ ಏರಿಸಬೇಕಾಯಿತೆಂದು ಹೇಳುವುದು ಸರಿಯಲ್ಲ. ಈ ದಿವಸ ಕಾಲೇಜುಗಳಲ್ಲಿ ಅಧ್ಯಾಪಕರ ಸಂಬಳ ಹೆಚ್ಚಾಗಿದೆ, ಖರ್ಚು ಜಾಸ್ತಿಯಾಗಿದೆ, ಆದುದರಿಂದ ಫೀಜನ್ನು ಹೆಚ್ಚಿಸಬೇಕಾಯಿತೆಂದೂ, ಅದನ್ನು ಗಮನಿಸಬೇಕೆಂದೂ ಹೇಳಿಕೆ ಕೊಟ್ಟಿದ್ದಾರೆ.

ಆದ್ದರಿಂದ ನಾನು ಹೇಳುವುದು, ವಿಶ್ವವಿದ್ಯಾನಿಲಯವೆನ್ನುವುದು ಒಂದು ಕಾರ್ಖಾನೆಯಲ್ಲ. ದೇಶದಲ್ಲಿ ವಿದ್ವತ್ ಸಂಪತ್ತನ್ನು ನಿರ್ಮಾಣ ಮಾಡುವ ಒಂದು ಶಕ್ತಿ. ಆ ಶಕ್ತಿ ಸ್ವರೂಪವಾದ ಸರಸ್ವತಿಯನ್ನು ನಿರ್ಣಯಿಸಲು ತಾವು ಹಳೆಯಕಾಲದ ಆರ್ಥಿಕ ನೀತಿಯನ್ನು ತಂದೊಡ್ಡಬೇಡಿ. ತಾವು ಮದ್ರಾಸನ್ನು, ಆಂಧ್ರ ಪ್ರಾಂತ್ಯ ಮುಂತಾದವುಗಳ ಉದಾಹರಣೆ ತೆಗೆದುಕೊಂಡಿರಿ. ಮದ್ರಾಸ್ ಸರ್ಕಾರದಲ್ಲಿರುವ ಕಾಲೇಜುಗಳು ಯೂನಿವರ್ಸಿಟಿಗೆ ಅಫಿಲಿಯೇಟೆಡ್ ಮಾತ್ರವಾಗಿದ್ದುವು. ಸರ್ಕಾರದವರೇ ಅವನ್ನು ಸ್ಥಾಪನೆ ಮಾಡಿರಲಿಲ್ಲ. ಪ್ರೈವೇಟ್ ಏಜನ್ಸಿಗಳು...

Mr. SPEAKER.—There are Government colleges in the Madras State......

Sri S. SIVAPPA.—Madras University is only an affiliating University.

Sri S. R. KANTHI (Minister for Education).—Mysore University is also an affiliating University.

ಶ್ರೀ ಎಸ್. ಶಿವಪ್ಪ.--ಪ್ರೈವೇಟ್ ಏಜೆನ್ಸಿಗಳು ಸರ್ಕಾರದಿಂದ ಬರುವ ಹಣ ಕಡಮೆ ಇರುವುದರಿಂದ ಅವು ಕಾಲೇಜ್ ಫೀಜನ್ನು ಜಾಸ್ತಿ ಮಾಡಬೇಕಾಗಿರುತ್ತದೆ. ಏಕೆಂದರೆ ಅವರಿಗೆ ಫೀಜ್ ಕೂಡ ಒಂದು ಆದಾಯದ ಭಾಗವಾಗಿದೆ. ಆದರೆ ಇಲ್ಲಿ ಸರ್ಕಾರದವರೇ ನೇರವಾಗಿ ಸ್ಥಾಪನೆ ಮಾಡಿರುವಾಗ ಇದನ್ನು Commercialise ಮಾಡುವುದು ಸರಿಯಲ್ಲ. ಈ ದೃಷ್ಟಿಯಿಂದಲೇ ಇದನ್ನೊಂದು ವ್ಯಾಪಾರ ಸಂಸ್ಥೆಯಾಗಿ ಮಾಡದೆ. ವಿದ್ಯಾಭ್ಯಾಸಕ್ಕೆ ನಮ್ಮ ದೇಶದಲ್ಲಿ ತಕ್ಕಷ್ಟು ಪ್ರೋತ್ಸಾಹ ಕೊಡಬೇಕೆಂದು ಹೇಳಿ ಇಲ್ಲಿನ ಫೀಜಿನ ರಚನೆಯನ್ನು ಒಂದು ಮಟ್ಟದಲ್ಲಿ ಇಟ್ಟಿದ್ದರು. ಅಂಥದ್ರಲ್ಲಿ ಈ ಹೊತ್ತು ನೀವು ಫೀಜಿನ ಏರಿಕೆಯಿಂದ ನಾಲ್ಕು ಲಕ್ಷ ರೂಪಾಯಿಗಳು ಬರುತ್ತದೆಂದು ಹೇಳಿ ನೀವು ಶೇಕಡ 60ರಷ್ಟು ಜಾಸ್ತಿ ಮಾಡಿದ್ದೀರಲ್ಲಾ, ಇದಕ್ಕೆ ನೀವು ಇಟ್ಟಿರುವ ವಾದವಾದರೂ ಏನು? ಕಾಲೇಜಿನ ಖರ್ಚು ಹೆಚ್ಚಾಗುತ್ತಿದೆ, ಅಧ್ಯಾಪಕರುಗಳಿಗೆ ಜಾಸ್ತಿ ಕೊಡುತ್ತಿದ್ದೇವೆ ಎಂದು ಹೇಳಿದ್ದೀರಿ. ಆದರೆ ವಾಸ್ತವವಾಗಿ ನೋಡಿದರೆ, ತಾವು ಅಧಿಕಾರ ವಹಿಸಿಕೊಂಡಮೇಲೆ ವಿದ್ಯಾರ್ಥಿಗಳಿಗೆ ಫೀಜನ್ನು ಅರ್ಧಕ್ಕಿಂತ ಜಾಸ್ತಿಯಾಗಿ ಒಂದೇ ಏಟಿಗೆ ಜಾಸ್ತಿ ಮಾಡಿದಿರಿ; ಅತ್ತ ಸರ್ಕಾರಿ ಕಾಲೇಜಿನಲ್ಲಿ ೧೧೧ ಜನ ಲೆಕ್ಚರರುಗಳಾಗಿದ್ದವರನ್ನು demote ಮಾಡಿ ಟ್ಯೂಟರ್‌ಗಳು, ಡೆಮಾನ್‌ಸ್ಟ್ರೇಟರ್ಸ್‌ಗಳಾಗಿ ಕೆಳಕ್ಕಿಳಿಸಿ ೧೫೦ ರೂಪಾಯಿನಷ್ಟು ಕಮ್ಮಿ ಸಂಬಳ,—ಒಬ್ಬ ಹೈಸ್ಕೂಲು ಉಪಾಧ್ಯಾಯರ ಸಂಬಳ—ಕೊಟ್ಟಿರಿ! ನೀವು ಹೇಳುವುದೊಂದು ಮಾಡುವುದೊಂದು. ಇದೇ ಶಾಸನ ಸಭೆಯಲ್ಲಿ ಆ ಲೆಕ್ಚರರುಗಳನ್ನು ಖಾಯಂ ರೀತಿಯಲ್ಲಿ ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಟ್ಟು—ಅದೂ ಅಂದಿನ ಅರ್ಥಿಕ ಸಚಿವರಾಗಿ ತಾವು ಕೊಟ್ಟಂಥಾ ಭರವಸೆಯನ್ನೇ ಇಂದು ಈಡೇರಿಸುವುದಿಲ್ಲವೆಂದರೆ ಏನು ಹೇಳೋಣ! ಆ ಭರವಸೆಗಳನ್ನು ಈಡೇರಿಸದಿರುವುದು ಹೋಗಲಿ, ಅವರನ್ನು ಇನ್ನೂ ಹಿಂದಕ್ಕೆ ಹಾಕಿದ್ದೀರಲ್ಲಾ! ಹೀಗೆ ಯಾವ ರೀತಿಯಿಂದ ಯಾವ ಆಶಯದಿಂದ ತಮ್ಮ ಜೀವಮಾನವನ್ನೇ ತೇದರೋ ಅವರನ್ನು ಹತಾಶರನ್ನಾಗಿ ಮಾಡಿ ಕೆಳಗಿಳಿಸಿ ಟ್ಯೂಟರಾಗಿ ನೇಮಿಸಿದ್ದೀರಲ್ಲಾ! ಏನು ಒಂದಕ್ಕೊಂದು ವಿರುದ್ಧವಾಗಿ ಹೇಳುವುದೇ! ಈ ರೀತಿ ಫೀಜು ಜಾಸ್ತಿ ಮಾಡಿ ಇನ್ನೂ ಒಂದು ಕೆಲಸ ಮಾಡಿದ್ದೀರಿ. ಅತ್ತ ಕರ್ನಾಟಕದಲ್ಲಿ ..

ಒಬ್ಬ ಮಾನ್ಯಸದಸ್ಯರು.—On a point of order, Sir. ಕರ್ನಾಟಕ ಎನ್ನುವ ಹೆಸರನ್ನು ಯಾರು ಕೊಟ್ಟರು ? ಯಾವಾಗ ಕೊಟ್ಟರು ? ಈ ದೇಶ ಮೈಸೂರು ದೇಶ. ಅದನ್ನು ಬಿಟ್ಟು 'ಕರ್ನಾಟಕ' ಎಂದು ಪದೇ ಪದೇ ಉಪಯೋಗಿಸುವುದು ಸರಿಯಲ್ಲ. 'ಮೈಸೂರು' ಎಂದೇ ಉಪಯೋಗಿಸಬೇಕೆಂದು ಮಾನ್ಯ ಸದಸ್ಯರಿಗೆ ಹೇಳಬೇಕು.

Mr. SPEAKER.—A point of order should not be so lightly raised and particularly when the Leader of the Opposition is tackling a very serious topic.

I would like to apprise the House of certain aspect of which, may be, all the members are fully aware. This is a thing under Chapter 9, which refers to discussion on matters of urgent public importance for short duration. It says that the entire duration is to be short. The Leader of the Opposition will have to be terse. I will refer to rule 61 which says :

> "There shall be no formal motion before the Assembly nor voting. The Member who has given notice may make a short statement and the Minister shall reply shortly. Any member who has previously intimated to the Speaker may be permitted to take part in the discussion."

I will see that as many members as possible participate in the debate.

ಶ್ರೀ ಎಸ್. ಶಿವಪ್ಪ.—ಸಭಾಪತಿಯವರೇ, ತಾವು ಹೇಳಿದ ಹಾಗೆ ಬಹಳ ಹೊತ್ತು ಈ ಸಭೆಯ ಕಾಲ ತೆಗೆದುಕೊಳ್ಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ಆದರೂ ಕೂಡ, ದೇಶದಲ್ಲಿ ಇಂದು ಬಹಳ ಪ್ರಾಮುಖ್ಯವಾದ ವಿಚಾರ ಇದು. ಆದ್ದರಿಂದ ಸ್ವಲ್ಪ ಕಾಲ ತೆಗೆದ ಕೊಳ್ಳಬೇಕಾದ ಅಗತ್ಯ ಬಂದಿದೆಯೆಂದು ಹೇಳುತ್ತೇನೆ. ಈ ಸಂಬಂಧದಲ್ಲಿ ವಿದ್ಯಾರ್ಥಿಗಳು ತಮ್ಮ ಸಂಕಷ್ಟಗಳೇನಿತ್ತು ಅದನ್ನು ಯಾವ ರೂಪದಲ್ಲಿ ನಮ್ಮ ಮುಂದೆ ತಂದಿದ್ದಾರೆ ಎಂಬುದನ್ನು ಪರಿಗಣನೆಗೆ ತೆಗೆದುಕೊಳ್ಳಲೇಬೇಕು. 'ದೊರೆಯತನಕ ದೂರು ಹೋಗುವತನಕ ಓಟ' ಎಂಬಂತೆ, ವಿದ್ಯಾರ್ಥಿಗಳು ದೈನ್ಯವಾಗಿ ತಮ್ಮ ಮುಂದೆ ಬಂದು ಹೇಳಿಕೊಂಡಿರುವುದಕ್ಕಾಗಿ ಮಕ್ಕಳು ಅಭಿನಂದನಾರ್ಹರು. ಇಂಥ ಸನ್ನಿವೇಶದಲ್ಲಿ ಉದ್ವೇಗ ಬರುವ ರೀತಿಯಲ್ಲಿ ನೀವು ಹೋದರೆ ಪ್ರಜಾಪ್ರಭುತ್ವವೇ ಅಳಿಸಿಹೋದಂತಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಸಾರ್ವಜನಿಕ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಆದನ್ನು ವಿಮರ್ಶೆ ಮಾಡಿ ಅದಕ್ಕೆ ಸರಿಯಾದ, ಯೋಗ್ಯರೀತಿಯ ಜವಾಬು ಕೊಡುವುದು ಅದರ ಸುಲಕ್ಷಣ. ಅದನ್ನು ಮಾಡದೆ ಇದ್ದರೆ ಪ್ರಜಾಪ್ರಭುತ್ವ ಯಶಸ್ವಿಯಾಗುವುದಿಲ್ಲವೆಂದು ನಾನು ತಮ್ಮ ಮುಖಾಂತರ ವಿದ್ಯಾಮಂತ್ರಿಗಳಿಗೆ ಭಿನ್ನವಿಸಿಕೊಳ್ಳುತ್ತೇನೆ. ವಿದ್ಯಾರ್ಥಿಗಳು ತಾವು ಚಳವಳಿ ಹೂಡುವುದಕ್ಕೆ ಮುಂಚೆ ನಾನು ಪತ್ರಿಕೆಯಲ್ಲಿ ನೋಡಿದ ಹಾಗೆ 13ನೆಯ ತಾರೀಖು ಒಂದು ಮನವಿಯನ್ನು ಸಲ್ಲಿಸಿದರು. ಅವರು ತಮ್ಮ ಸಂಕಷ್ಟಗಳೇನೆಂಬದನ್ನು ದೀರ್ಘವಾಗಿ ಮನವಿಯ ಮುಖಾಂತರ ತಮಗೂ ಮುಖ್ಯ ಮಂತ್ರಿಗಳಿಗೂ ಅರಿಕೆ ಮಾಡಿಕೊಂಡಿದ್ದಾರೆ. ಆದ್ದರಿಂದ ಈ ಹೊತ್ತು ಅವರಿಗೆ ಸಾಕಷ್ಟು ರಿಯಾಯಿತಿ ಕೊಟ್ಟು ಅವರಿಗಿರುವ ಕಷ್ಟಗಳೇನೆಂಬದನ್ನು ನ್ಯಾಯವಾಗಿ ಪರಿಶೀಲನೆ ಮಾಡಿ ಸಕಾಲದಲ್ಲಿ ಸಹಾನುಭೂತಿಯನ್ನು ತೋರಿಸಿದ್ದರೆ, ಇಂದು ದೇಶದಲ್ಲಿ ನಮ್ಮ ಮಕ್ಕಳು ತಮ್ಮ ಕಷ್ಟವನ್ನು

(ಶ್ರೀ ಎಸ್. ಶಿವಪ್ಪ)

ಯಾರೂ ಕೇಳುವವರೇ ಇಲ್ಲವಲ್ಲಾ ಎಂಬ ಶಂಕೆಯಿಂದ ಕಾಲೇಜನ್ನು ಬಿಟ್ಟು ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸುವುದಕ್ಕೆ ಮಹಾತ್ಮಗಾಂಧಿ, ದೇಶದ ತಂದೆ ಹಾಕಿಕೊಟ್ಟ ದಾರಿಯಾದ ಸತ್ಯಾಗ್ರಹವನ್ನು ತಳೆದಿದ್ದಾರೆ. ಮಹಾತ್ಮಾಗಾಂಧಿ ನಮಗೂ ತಂದೆ. ಅವನು ಹೇಳಿಕೊಟ್ಟ ಅಹಿಂಸಾ ಅಸ್ತ್ರವನ್ನು ಇಂದು ಪ್ರಯೋಗಿಸಿ ದೇಶದ ಎಲ್ಲಾ ಕಡೆಯಲ್ಲೂ ಹೆಚ್ಚಿನ ಶಿಸ್ತಿನಿಂದ ನಡೆಸಿ ತಮ್ಮ ಅದ್ಭುತ ಶಕ್ತಿಯನ್ನು ಪ್ರದರ್ಶಿಸಿದ್ದಾರೆಂದರೆ, ಅವಕ್ಕಿಂತಲೂ ಅಚ್ಚರಿಯಾದ ಸಂಗತಿ ಮತ್ತೊಂದಿಲ್ಲ. ವಿದ್ಯಾರ್ಥಿಗಳು ತೋರ್ಪಡಿಸಿದ ಸಂಯಮತ್ತು ಶಿಸ್ತುಗಳಿಗೆ ಈ ಹೊತ್ತು ನಮ್ಮ ಹೃತ್ಪೂರ್ವಕ ವಂದನೆಗಳು. ಈ ಹೊತ್ತು ತಾವು ಏಕಾಏಕಿ 99 ರೂಪಾಯಿ ಇದ್ದಂತಹ ಫೀಜನ್ನು 144 ರೂಪಾಯಿಗಳಿಗೆ ಒಂದೇ ಸಾರಿ ಏರಿಸಿದಿರಲ್ಲಾ, ಏಕಏಕಿ ಶೇಕಡ, 50 ಶೇಕಡ 60ರಷ್ಟು ಜಾಸ್ತಿ ಮಾಡಿದಿರಲ್ಲಾ, ಇದನ್ನು ಹೊರುವುದಕ್ಕೆ ನಮ್ಮ ದೇಶದಲ್ಲಿರತಕ್ಕ ಮಧ್ಯಮ ವರ್ಗದ ಜನತೆಗೆ ಶಕ್ತಿಯಿದೆಯೇ ಇಲ್ಲವೇ ಎಂಬುದನ್ನು ನೋಡಿದಿರಾ ? ಅಲ್ಲದೆ ಈ ಫೀಸ್ ಏರಿಕೆ ಮಾಡುವುದರಲ್ಲಿ ಏನಾದರೂ ತತ್ವವಿದೆಯೇ ಎಂದು ಕೇಳುತ್ತೇನೆ. ಯಾವ ತತ್ವವೂ ಇದರಲ್ಲಿಲ್ಲ. ನಿಮಗೆ ಈ ಹೊತ್ತು ಮನಸ್ಸು ಬಂತೆಂದು ಶೇಕಡ 25ರಷ್ಟು ಜಾಸ್ತಿ ಮಾಡುತ್ತೀರಿ ! ನಾಳೆ ಇನ್ನೊಮ್ಮೆ ಮನಸ್ಸು ಬಂತೆಂದು ಶೇಕಡ 60ರಷ್ಟು ಜಾಸ್ತಿಮಾಡುವುದು. ಈ ರೀತಿಯಾದರೆ ಜನತೆ ಸುಧಾರಿಸಿಕೊಳ್ಳುವುದೆಂತು ? ಏನಾದರೂ ಶಾಸ್ತ್ರೀಯವಾಗಿ ಕಾಲೇಜಿಗೆ ಆಗುವ ಖರ್ಚೆಷ್ಟು, ಅದರಲ್ಲಿ ಇಷ್ಟು ಶೇಕಡಾವಾರು ಭಾಗವನ್ನು ಸರ್ಕಾರದವರು ಕೊಡುತ್ತಾರೆ, ಮಿಕ್ಕ ಭಾಗವನ್ನು ವಿದ್ಯಾರ್ಥಿಗಳು ಕೊಡಬೇಕೆಂದು ಒಂದು ನೀತಿಯನ್ನಾದರೂ ಪ್ರತಿಪಾದಿಸಿದ್ದೀರಾ ? ಏನೂ ಇಲ್ಲ. ಅಲ್ಲದೆ, ಇಂದು ವಿದ್ಯಾಭ್ಯಾಸ ಮತ್ತು ಆರೋಗ್ಯ ಇವೆರಡೂ ದೇಶದಲ್ಲಿ, ಸರ್ಕಾರದ ಆದ್ಯಕರ್ತವ್ಯ ಕಾರ್ಯಗಳು. ದೇಶದಲ್ಲಿ ಇಂದು ಎಲ್ಲ ತಾಯಿ ತಂದೆಗಳ ಮೇಲೆ ಏನೇನು ತೆರಿಗೆಯನ್ನು ಹಾಕಿದ್ದೀರೋ, ಅವುಗಳನ್ನು ಕೊಡುವುದೇಕೆ ! ತಮ್ಮ ಮಕ್ಕಳಿಗೆ ಉಚಿತ ಆರೋಗ್ಯ, ಉಚಿತ ವಿದ್ಯಾಭ್ಯಾಸ ದೊರಕೀತು ಎಂಬ ಆಸೆಯಿಂದಲ್ಲವೆ ? ಮುಂದಿನ ಪೀಳಿಗೆಯನ್ನು ತಾವು ಸರಿಯಾದ ರೀತಿಯಲ್ಲಿ ತರಬೇತು ಮಾಡದೇ ಇದ್ದರೆ ತಾವು ತೆಗೆದುಕೊಳ್ಳುತ್ತಿರುವ ತೆರಿಗೆ ಯೇಕೆ ? ಇದರಲ್ಲಿ ತತ್ವವಿದೆಯೇ, ನೀತಿಯಿದೆಯೇ ಎಂದು ನಾನು ಕೇಳಬಯಸುತ್ತೇನೆ. ತಾವು ಸುಖೀರಾಜ್ಯವನ್ನು ಸ್ಥಾಪನೆ ಮಾಡುತ್ತಿದ್ದೀರೆಂದು ಹೇಳುತ್ತಿದ್ದೀರಿ. ಸುಖೀರಾಜ್ಯದ ಆಧಾರಸ್ತಂಭ ಯಾವುದು ? ಉಚಿತ ವಿದ್ಯಾಭ್ಯಾಸ ಅದರ ಪ್ರಥಮ ಸೋಪಾನವಲ್ಲವೆ ? ಈಹೊತ್ತು ದೇಶದಲ್ಲಿ ನಾವು ಉಚಿತ ವಿದ್ಯಾಭ್ಯಾಸ ಕೊಡುತ್ತೇವೆಂದು ಹೇಳುತ್ತಾ, ಉಚಿತ ಪ್ರಾಥಮಿಕ ವಿದ್ಯಾಭ್ಯಾಸವನ್ನೂ ಹೈಸ್ಕೂಲಿನಲ್ಲಿ 2,400 ರೂಪಾಯಿಗಳ ವರಮಾನದ ಒಳಗಿರುವವರಿಗೆಲ್ಲಾ ಮಾಫಿ ಫೀಜು ಮಾಡುವ ಒಂದು ನೀತಿಯನ್ನು ಅಳವಡಿಸಿಕೊಂಡು ಬಂದಿದ್ದೀರಿ. ಹಾಗಿದ್ದ ಮೇಲೆ ಕಾಲೇಜು ಶಿಕ್ಷಣವನ್ನು ಕ್ರಮೇಣ ಕ್ರಮೇಣ ಕಡಮೆ ಮಾಡಬೇಕೆಂದು ತಮ್ಮ ಅಭಿಪ್ರಾಯವೇ ? ಅದನ್ನು ಚೆನ್ನಾಗಿ ವಿಚಾರಮಾಡಿ ಸರ್ಕಾರದವರು ನೋಡಬೇಕಾಗಿದೆ. ದೇಶದಲ್ಲಿ ಪ್ರೈಮರಿ ಶಿಕ್ಷಣದಿಂದ ಕಾಲೇಜು ಶಿಕ್ಷಣದವರೆಗೆ ಉಚಿತವಾಗಿ ಶಿಕ್ಷಣ ಕೊಡುವುದಾಗಿ ಯಾವ ದೇಶದ ಸರ್ಕಾರ ಮುಂದೆ ಬರುತ್ತದೋ ಆ ಸರ್ಕಾರ ಒಂದು ಒಳ್ಳೆಯ ಹೆಸರನ್ನು ಪಡೆಯುತ್ತದೆಂದು ನಾನು ಧೈರ್ಯವಾಗಿ ಹೇಳುತ್ತೇನೆ. ಇವತ್ತಿನ ದಿವಸ ನಿಮ್ಮ ಸರ್ಕಾರ ನಿಜವಾಗಿ ಆ ಕಾರ್ಯ ಕ್ಷೇತ್ರಕ್ಕೆ ಇಳಿದಿದೆಯೇ ಎಂಬ ಪರೀಕ್ಷೆ ಕಾಲ ಮುಂದೆ ಸದ್ಯದಲ್ಲೇ ಬಂದೀತು ಎಂದು ನಾನು ಸರ್ಕಾರಕ್ಕೆ ಈಗಲೇ ಎಚ್ಚರಿಕೆ ಕೊಡುತ್ತಿದ್ದೇನೆ. ಇವತ್ತು ತಾವು ಏನು ಸಹಾಯವನ್ನು ಮಾಡಿದರೂ ಕಾಲೇಜಿನ ಶಿಕ್ಷಣವನ್ನು ಕೂಡ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಆದಷ್ಟು ಸುಲಭದಲ್ಲಿ ಕೊಡಬೇಕು ಎಂಬುದಾಗಿ ಒಂದು ನೀತಿಯನ್ನು ಕೂಡಲೇ ಹಾಕಿಕೊಳ್ಳಬೇಕೆಂದು ನಾನು ಹೇಳುತ್ತೇನೆ.

Sri S. R. KANTHI.—I want a clarification from you. The Hon'ble Member says that the University education should be made as much free as possible, or fees should be reduced. May I know whether the reduction of fees should be only in one University or made applicable to other the university also ?

ಶ್ರೀ ಎಸ್. ಶಿವಪ್ಪ.—ಸ್ವಾಮಿ, ನಾನು ಮೊದಲೇ ಹೇಳಿದಹಾಗೆ ಮಾನ್ಯ ವಿದ್ಯಾ ಮಂತ್ರಿಗಳು ಅವರ ಹೇಳಿಕೆ ಗಳೆಲ್ಲವನ್ನೂ ಅಸಂಬದ್ಧವಾಗಿ ತಪ್ಪುದಾರಿಯಲ್ಲಿ ಮಾಡುತ್ತಿದ್ದಾರೆಂದು ನಾನು ಹೇಳುತ್ತೇನೆ.

ಶ್ರೀ ಎಸ್. ಆರ್. ಕಂಠಿ.—ನಾನು ಅದಕ್ಕೆ ಉತ್ತರ ಕೊಡಬೇಕಾಗಿದೆ. ಶ್ರೀ ಮಾನ್ ಶಿವಪ್ಪನವರು ಮಾತನಾಡುತ್ತಾ, ವಿಶ್ವವಿದ್ಯಾನಿಲಯದ ಶಿಕ್ಷಣ ಸಾಧ್ಯವಾದಷ್ಟು ಸುಲಭವಾಗಿರಬೇಕು ಎಂಬುದಾಗಿ ಹೇಳಿದರು. ಅದನ್ನು ನಾನು ವೈಯಕ್ತಿಕವಾಗಿ ಒಪ್ಪುತ್ತೇನೆ. ಆದರೆ ಅವರನ್ನು ಈ ಕಾಲಕ್ಕೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಅದಕ್ಕೆ ಮಾನ್ಯ ಸದಸ್ಯರು ಉತ್ತರ ಕೊಡಬೇಕಾಗಿದೆ. ಹಳೆಯ ಮೈಸೂರಿನ ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳ ಫೀಜುದರದಷ್ಟೇ ಇರಬೇಕೇ ಅಥವಾ ಹೊಸ ಮೈಸೂರಿಗೆ ಸೇರಿದಂತಹ ಇತರ ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳ ಫೀಜುದರದಷ್ಟೇ ಇರಬೇಕೇ ಇವೆರಡರಲ್ಲಿ ಯಾವುದನ್ನು ಪರ್ಯಾಲೋಚನೆ ಮಾಡಬೇಕೋ ಹೇಳಿ.

ಶ್ರೀ ಎಸ್. ಶಿವಪ್ಪ.—ಅದೇ ಪ್ರಶ್ನೆಯನ್ನು ನಾನು ಈಗ ಕೇಳಬೇಕೆಂದಿದ್ದೆ. ಇವತ್ತಿನ ದಿವಸ ವಿದ್ಯಾಮಂತ್ರಿಗಳು ಕಾಲೇಜಿನ ಶುಲ್ಕವನ್ನು ಕ್ರಮೇಣ ಆದಷ್ಟು ಮಟ್ಟಿಗೆ ರಿಯಾಯಿತಿ ಕೊಡುವುದಕ್ಕೆ ಬದಲು ಹೆಚ್ಚು ಮಾಡಬೇಕೆಂದು ಹೇಳಿರುವ ಸಲಹೆಯನ್ನು ನಾನು ಒಪ್ಪುವುದಿಲ್ಲ. ಕಾಲೇಜು ಶಿಕ್ಷಣವೂ ಸಹ ಉಚಿತ ವಿದ್ಯಾಭ್ಯಾಸವಾಗಬೇಕೆಂಬ ಧೋರಣೆ ನನ್ನದು.

Sri S. R. KANTHI.—I appreciate that it is for the entire state.

Sri S. SIVAPPA.—Let him hear me. ಮಾನ್ಯ ವಿದ್ಯಾಮಂತ್ರಿಗಳು ಇವತ್ತಿನ ದಿವಸ ಒಂದು ವಿವರಣೆಯನ್ನು ಹೇಳುತ್ತಿದ್ದಾರೆ. ಅವರು ಹೇಳುವುದು ಇಷ್ಟೇ. ಮೈಸೂರು ದೇಶದಲ್ಲಿರತಕ್ಕ ವಿಶ್ವವಿದ್ಯಾನಿಲಯಗಳಲ್ಲಿ ಒಂದೊಂದು ಕಾಲೇಜಿನಲ್ಲಿ ಒಂದೊಂದು ತರಹ ಫೀಜು ಇದೆ. ಅದು ಸರಿಯಲ್ಲ ಎಂದು ಹೇಳಿದ್ದಾರೆ. ನಾನು ಈ ಬಗ್ಗೆ ಅವರ ವಾದವನ್ನು ಇತ್ತೀಚೆಗೆ ನೋಡುತ್ತಿದ್ದೇನೆ. ಅವರು ಮಾಡಿರುವುದು ತುಂಬಾ ತಪ್ಪು. ಇಂತಹ ತಪ್ಪನ್ನ ಸಿಫಾರಿಸು ವುದಕ್ಕೆ ಹೋಗಿ ಇನ್ನೊಂದು ದೊಡ್ಡ ತಪ್ಪನ್ನು ಮಾಡಿದ್ದಾರೆ ಎಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳು

ತ್ತೇನೆ. ಈ ತಪ್ಪನ್ನು ಸರಿಮಾಡಬೇಕಾಗಿದ್ದರೆ ಅವರು ಇವತ್ತು ಮೈಸೂರಿನ ಒಂದು ಪ್ರೋಗ್ರೆಸಿವ್‌ನೇಚರನ್ನು ಇತರರಿಗೆ ತೋರಿಸಬೇಕಾಗಿದ್ದರೆ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲು ಏನು ಕಾಲೇಜು ಶುಲ್ಕವಿತ್ತೋ ಅದನ್ನೇ ಆ ವಿದ್ಯಾರ್ಥಿಗಳಿಗೂ ವಿಧಿಸಿದ್ದರೆ ಮಾನ್ಯ ಮಂತ್ರಿಗಳನ್ನು ಹೆಚ್ಚು ಅಭಿನಂದಿಸುತ್ತಿದ್ದೆವು. ಈಗ ಏನಾಗಿದೆಯೆಂದರೆ ಬೆಕ್ಕುಗಳು ಕೋತಿ ಕೈಲಿ ಕಜ್ಜಾಯ ಕೊಟ್ಟು ತಕ್ಕಡಿ ನ್ಯಾಯ ಮಾಡಿದಂತಾಗಿದೆ. ಮಾನ್ಯ ವಿದ್ಯಾ ಮಂತ್ರಿಗಳು ಕಾಲೇಜಿನ ಶುಲ್ಕವನ್ನು ಹೆಚ್ಚಿಸಿರುವುದೂ ಆ ರೀತಿಯಾಗಿದೆ. ಉತ್ತರ ಕರ್ಣಾಟಕದಲ್ಲಿ ಮಾರಾಟ ತೆರಿಗೆ ಜಾಸ್ತಿ ಇದೆಯೆಂದು ಹಿಂದೆ ಆರ್ಥಿಕ ಮಂತ್ರಿಯಾಗಿದ್ದ ಶ್ರೀಮಾನ್ ಟಿ. ಮರಿಯಪ್ಪನವರು ಮೈಸೂರಿನಲ್ಲಿಯೂ ಮಾರಾಟ ತೆರಿಗೆಯನ್ನು ಜಾಸ್ತಿ ಮಾಡಿದರು. ಇವತ್ತು ಮಾನ್ಯ ವಿದ್ಯಾ ಮಂತ್ರಿಗಳಾದ ಶ್ರೀಮಾನ್ ಕಂಠಿಯವರು ಆಕಡೆಗಳಲ್ಲಿ ಕಾಲೇಜ್ ಶಿಕ್ಷಣದ ಶುಲ್ಕ ಜಾಸ್ತಿ ಇದೆಯೆಂದು ಮೈಸೂರಿನಲ್ಲಿಯೂ ಆ ಶುಲ್ಕವನ್ನು ಜಾಸ್ತಿ ಮಾಡಿದ್ದಾರೆ. ನಾವೇನು ಪಾಪ ಮಾಡಿದ್ದೆವು, ಸ್ವಾಮಿ ?

ಸಭಾಧ್ಯಕ್ಷರೇ, ನಾನು ವಿದ್ಯಾ ಮಂತ್ರಿಗಳಿಗೆ ಹೇಳತಕ್ಕದ್ದು ಇಷ್ಟೇ. ದೇಶದಲ್ಲಿರತಕ್ಕ ಎಲ್ಲಾ ಕಾಲೇಜು ವಿದ್ಯಾರ್ಥಿಗಳಿಗೆ ಒಂದೇ ತರಹ ರಿಯಾಯಿತಿ ಶುಲ್ಕವನ್ನು ವಿಧಿಸಿಯೆನ್ನುವುದೇ ನಮ್ಮ ಆಶೆ. ಇತರ ವಿಶ್ವವಿದ್ಯಾನಿಲಯಗಳಲ್ಲಿ ಈ ರೀತಿ ಇದೆ, ಆ ರೀತಿ ಇದೆಯೆಂದು ಆತರಹ ಶುಲ್ಕವನ್ನು ಇಲ್ಲಿನ ಕಾಲೇಜು ವಿದ್ಯಾರ್ಥಿಗಳಿಂದ ವಸೂಲುಮಾಡಿ ಎಂದು ನಾನು ಹೇಳುವುದಿಲ್ಲ. ಅವರದನ್ನು ಕೂಡ ನಮ್ಮ ಹಿಂದಿನ ಮೈಸೂರು ಕಾಲೇಜಿನ ಶುಲ್ಕದ ದರ್ಜೆಗೆ ಇಳಿಸಿ ಎಲ್ಲರಿಗೂ ಒಂದೇ ಮಟ್ಟದಲ್ಲಿ ಏಕರೂಪವಾದ ಕಾಲೇಜು ಶಿಕ್ಷಣವನ್ನು ವಿಧಿಸಬೇಕೆಂಬುದೇ ನಮ್ಮೆಲ್ಲರ ಅಭಿಲಾಷೆ. ಹಿಂದೆ ಏನು ಆ ಶಿಕ್ಷಣ ಶುಲ್ಕವನ್ನು ಇಟ್ಟಿದ್ದರೋ ಅದನ್ನು ಹೆಚ್ಚು ಮಾಡಬೇಕೆಂದು ಇವತ್ತು ವಿದ್ಯಾ ಮಂತ್ರಿಗಳು ಹೇಳುತ್ತಿರುವುದು ತುಂಬಾ ತಪ್ಪುವಾದವೆಂದು ನಾನು ಹೇಳುತ್ತೇನೆ. ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸವನ್ನು ಉತ್ತಮ ಮಟ್ಟದಲ್ಲಿ ನೆರವೇರಿಸಿಕೊಂಡು ಬಡ ಮಕ್ಕಳು ಸರಳವಾಗಿ, ಸರಾಗವಾಗಿ ಶಿಕ್ಷಣ ಪಡೆಯಬೇಕೆಂಬ ನೀತಿ ಈ ಸರ್ಕಾರದವರಲ್ಲಿದ್ದರೆ ಇವತ್ತಿನ ದಿವಸ ಬೇರೆಕಡೆಯ ಕಾಲೇಜಿನ ಫೀಸನ್ನೂ ಸಹ ನಮ್ಮ ಮಟ್ಟಕ್ಕೇತಂದು ಅವರಿಗೂ ಉಪಕಾರ ಮಾಡಿ ಎಂದು ನಾನು ಹೇಳುತ್ತೇನೆ. ಸುಮ್ಮನೆ ಈ ರೀತಿ ತೊಂದರೆ ಮಾಡುವ ಮುಖಾಂತರ ಸಮಾನತೆ ತರುವುದು ಒಳ್ಳೆಯದಲ್ಲವೆಂದು ನಾನು ಸರ್ಕಾರದವರಲ್ಲಿ ಮತ್ತೊಮ್ಮೆ ಮನವಿ ಮಾಡುತ್ತೇನೆ. ಈ ಒಂದು ವಿಷಯದಲ್ಲಿ ಸರ್ಕಾರದವರು ಮಾಡಿರುವ ತಪ್ಪನ್ನು ಜಾಗ್ರತೆಯಾಗಿ ತಿದ್ದಿಕೊಳ್ಳಬೇಕು. ಈಗ ಸರ್ಕಾರದವರು ಭಾರಿ ಅಪರಾಧವನ್ನು ಮಾಡಿರುವುದರಿಂದ ಈ ವಿಷಯ ಬಹಳ ತುರ್ತು ವಿಷಯವೆಂದು ಗಣನೆಗೆ ತೆಗೆದುಕೊಂಡು ಈಗಿನ ಕಾಲೇಜ್ ಫೀಸ್ ಏರಿಕೆಯನ್ನು ಆದಷ್ಟು ಜಾಗ್ರತೆ ರದು ಮಾಡಬೇಕೆಂದು ನಾನು ವಿದ್ಯಾ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಈಗ ದೇಶದಲ್ಲಿ ಎದ್ದಿರತಕ್ಕ ಗಡಿಬಿಡಿಗೆ, ಗದ್ದಲಕ್ಕೆ ಮುಖ್ಯ ಕಾರಣವಾಗಿರತಕ್ಕ ವಿದ್ಯಾ ಮಂತ್ರಿಗಳು ಈಗಲಾದರೂ ಒಳ್ಳೆಯ ಹೆಸರನ್ನು ತೆಗೆದುಕೊಂಡು ಅವರ ವಿದ್ಯಾ ಇಲಾಖೆಗೂ ಒಳ್ಳೆಯ ಹೆಸರು ಬರಬೇಕೆಂಬ ಆಶೆ ಇದ್ದ ಪಕ್ಷದಲ್ಲಿ ಕೂಡಲೆ ಈಗ ಕಾಲೇಜು ಶಿಕ್ಷಣದ ಶುಲ್ಕ ಏರಿಕೆಯ ಸರ್ಕಾರೀ ಆಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿ ಪೋಷಕ ಪರವಾಗಿ ನಾನು ಮಾನ್ಯ ವಿದ್ಯಾ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಮೊನ್ನೆ ಕಾಂಗ್ರೆಸ್‌ಭವನದಲ್ಲಿ ವಿದ್ಯಾರ್ಥಿಗಳ ಪೋಷಕರಸಭೆಯೊಂದು ಸೇರಿತ್ತು ಎಂಬ ಸಮಾಚಾರ ನನಗೆ ತಿಳಿಯಿತು. ಬಹುಶಃ ಅವರೇ ಕರೆಸಿದ್ದರೋ ಏನೋ ಗೊತ್ತಾಗಲಿಲ್ಲ. ಆ ಸಭೆಗೆ ಬಂದಿದ್ದವರು ಮಾತ್ರ ಇಡೀ ದೇಶದ ಪೋಷಕರು ಆಗುವುದಿಲ್ಲ; ಪೋಷಕರೆಂದರೆ ರಾಜಕೀಯ ಪಟುಗಳಲ್ಲ. ಇವತ್ತು ಸಹಸ್ರ, ಸಹಸ್ರ ಕೋಟಿಯಲ್ಲಿ ವಿದ್ಯಾರ್ಥಿಗಳು ಶಾಂತಿಯಿಂದ ಶಿಸ್ತಿನಿಂದ ತಮ್ಮ ಮುಷ್ಕರದ ಚಳುವಳಿಯನ್ನು ದೇಶದ ಮುಂದೆ ಇಟ್ಟಿದ್ದಾರೆ. ಆದ್ದರಿಂದ ಸರ್ಕಾರದವರು ವಿದ್ಯಾರ್ಥಿಗಳ ಶಾಂತಿವಾತವರಣದ ಮುಷ್ಕರಕ್ಕೆ ಮನ್ನಣೆಕೊಡಬೇಕೆಂದು ನಾನು ವಿದ್ಯಾ ಮಂತ್ರಿಗಳಿಗೆ ಹೇಳುತ್ತೇನೆ. ನಾನು ಹೇಳಿದ ಹಾಗೆ ಅವರು ಈ ಕಾರ್ಯಕ್ಕೆ ಸರ್ವಮಾನ್ಯತೆ ಕೊಟ್ಟು ಅವರಿಗೆ ಈಗಿನ ಕಾಲೇಜು ಶಿಕ್ಷಣದ ದರ ಏರಿಕೆಯಿಂದ ಉಂಟಾಗಿರತಕ್ಕ ಕಷ್ಟಗಳನ್ನು ಪರಿಹರಿಸಬೇಕೆಂದು ನಾನು ಅರಿಕೆ ಮಾಡುತ್ತೇನೆ. ವಿದ್ಯಾರ್ಥಿಗಳ ಈ ಒಂದು ಶಕ್ತಿ ಬೇರೆ ಕಡೆಗೆ ಹೋಗುವುದಕ್ಕೆ ಆಸ್ಪದವನ್ನು ಖಂಡಿತವಾಗಿ ಸರ್ಕಾರದವರು ಕಲ್ಪಿಸಿ ಕೊಡಬಾರದೆಂದು ಹೇಳಿ, ಆದಷ್ಟು ಜಾಗ್ರತೆ ಈಗ ಜಾರಿಮಾಡಿರುವ ಕಾಲೇಜು ಶಿಕ್ಷಣದ ದರ ಏರಿಕೆಯ ಸರ್ಕಾರಿ ಆಜ್ಞೆಯನ್ನು ವಾಪಸ್ಸು ತೆಗೆದುಕೊಳ್ಳುವ ಮೂಲಕ ಎಲ್ಲಾ ಕಾಲೇಜು ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಸಹಾಯ ಮಾಡಬೇಕೆಂಬ ನನ್ನ ಈ ಬೇಡಿಕೆಯನ್ನು ಈ ಸಭೆಯ ಮುಂದೆ ಇಡುತ್ತೇನೆ.

Mr. SPEAKER.—May I know what time the Hon'ble Minister would like to take ?

Sri S. R. KANTHI.—I may require forty five minutes.

Mr. SPEAKER.—We have to remember that today it is the non-official day. We are eating into the time of the non-official day to the extent we discuss this subject. If members desire to have a fuller discussion, I am against it. Fuller discussion is not contemplated and the rule requires a short discussion. The rule says that a maximum of 2½ hours can be allowed. So, upto 4-45 P.M. the debate will go on and from 4-45 to 5-30 P.M. the Minister will reply.

The House will now adjourn and meet after an half hour.

The House adjourned for recess at Three of the Clock and re-assembled at Thirty Minutes past Three of the Clock.

[MR. SPEAKER in the Chair.]

Mr. SPEAKER.—I have got a number of requests. The time that is available is only two hours. Besides the Hon'ble Minister requires forty-five minutes and the time available for the Hon'ble Members is seventy-five minutes. Shall I put down fifteen minutes for each and give chance for five members? That, I think, will be the best arrangement. I leave it to the House.

Sri V. M. DEO.—You may make it ten minutes, Sir.

Mr. SPEAKER.—Hon. Sri Gopala Gowda should complete his speech within fifteen minutes.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಮೈಸೂರು ಸರ್ಕಾರದವರು ಇತ್ತೀಚೆಗೆ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳ ಶುಲ್ಕವನ್ನು ಏರಿಸಿರುವ ವಿಷಯದಲ್ಲಿ ಮಾನ್ಯ ಶಿವಪ್ಪನವರು ಈಗ ತಾನೆ ಸಭೆಯ ಮುಂದೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದರು. ಅದನ್ನು ಸಮರ್ಥಿಸುತ್ತಾ ನಾನು ಕೆಲವು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಇದೇ ಸಂದರ್ಭದಲ್ಲಿ ಮಾನ್ಯ ವಿದ್ಯಾಸಚಿವರು ೨೬-೭-೧೯೬೨ನೇ ದಿವಸ ಈ ಸದನದಲ್ಲಿ ಒಂದು ಹೇಳಿಕೆಯನ್ನು ಕೊಟ್ಟು ಸರ್ಕಾರದವರು ಈ ಶುಲ್ಕವನ್ನು ಏರಿಸುವುದಕ್ಕೆ ಎರಡು ಮುಖ್ಯವಾದ ಕಾರಣಗಳನ್ನು ಈ ಸಭೆಯ ಮುಂದಿಟ್ಟು ಶುಲ್ಕವನ್ನು ಏರಿಸುವುದು ನ್ಯಾಯಸಮ್ಮತವಾಗಿದೆ ಎಂದು ಅವರು ಪ್ರತಿಪಾದನೆ ಮಾಡಿದರು. ಹೊಸ ಮೈಸೂರು ಸಂಸ್ಥಾನಕ್ಕೆ ಹೊರಗಡೆಯಿಂದ ಬಂದಿರುವ ಮದ್ರಾಸ್, ಕೂರ್ಗ್ ಮತ್ತು ಮುಂಬೈ ಕರ್ನಾಟಕದ ಸ್ಥಳಗಳಲ್ಲಿರುವ ಕಾಲೇಜುಗಳಲ್ಲಿ ಶುಲ್ಕ ಹೆಚ್ಚಾಗಿದೆ, ಅದಕ್ಕೋಸ್ಕರ ನಾವೂ ಇಲ್ಲಿರುವ ಕಾಲೇಜುಗಳಲ್ಲಿ ಶುಲ್ಕವನ್ನು ಹೆಚ್ಚಿಸಬೇಕು ಎಂದು ಹೇಳಿದ್ದು ಒಂದು ವಿಷಯ.

ಎರಡನೆಯದಾಗಿ, ಈ ಕಾಲೇಜುಗಳನ್ನು ನಡೆಸಿಕೊಂಡು ಹೋಗುವುದರ ಬಗ್ಗೆ ಖರ್ಚು ಹೆಚ್ಚಾಗಿದೆ. ಆ ಖರ್ಚನ್ನು ಸರಿದೂಗಿಸುವುದರ ದೃಷ್ಟಿಯಿಂದ ಕೂಡ ನಾವು ಶುಲ್ಕವನ್ನು ಹೆಚ್ಚಿಸಬೇಕು ಎಂದು ಹೇಳಿದ್ದಾರೆ. ಈ ವಿಷಯವನ್ನು ನಾವು ಸ್ವಲ್ಪ ಚೆನ್ನಾಗಿ ಪರಿಶೀಲನೆ ಮಾಡಿ ನೋಡಿದರೆ ಇದು ಅಷ್ಟು ಸಮಂಜಸವಾದ ಮತ್ತು ಸಮರ್ಥನೀಯವಾದ ಹೇಳಿಕೆಯೆಂದು ನಮಗೆ ಕಂಡುಬರುವುದಿಲ್ಲ. ಅವರು ಹೇಳುತ್ತಾರೆ ಕಾಲೇಜಿನಲ್ಲಿ ಒಂದು ದಶಕದಿಂದ ನಾವು ಶುಲ್ಕವನ್ನು ಪುನರ್‌ವಿಮರ್ಶೆ ಮಾಡಿಲ್ಲ, ಅದು ಹಾಗೆಯೇ ಉಳಿದುಕೊಂಡು ಬಂದಿದೆ ಎಂದು. ಇದು ಒಂದು ಮಾತು.

ಇನ್ನು ಮೂರನೆಯದಾಗಿ ಆಂಧ್ರ ಮತ್ತು ಮದರಾಸು ಮುಂತಾದ ಇತರ ರಾಜ್ಯಗಳ ಕಾಲೇಜುಗಳಲ್ಲಿರತಕ್ಕ ಫೀಜಿನ ದರದ ಪ್ರಕಾರ ನಾವೂ ಸಹ ಏರಿಸಬೇಕಾಗಿದೆ ಎಂದು ಹೇಳುತ್ತಾರೆ; ಮುಖ್ಯವಾಗಿ ಇವೊತ್ತು ಆ ಹೇಳಿಕೆಯ ಪ್ರಕಾರ ನಾವು ನೋಡುವುದಾದರೆ ಈಗ ಸರ್ಕಾರದವರು ಕಾಲೇಜಿನ ಶುಲ್ಕದ ದರವನ್ನು ಏರಿಸಿರುವುದರಿಂದ ಬರತಕ್ಕ ಉತ್ಪತ್ತಿ ನಾಲ್ಕುಲಕ್ಷ ಚಿಲ್ಲರೆ ರೂಪಾಯಿಗಳು ಎಂದು ಕಂಡುಬರುತ್ತದೆ. ಈ ನಾಲ್ಕು ಲಕ್ಷ ರೂಪಾಯಿಗಳಿಂದ ಅವರ ಕೊರತೆಯೆಲ್ಲಾ ತುಂಬಿಬರುವುದಿಲ್ಲವೆಂದು ನಾವು ಕಾಣಬಹುದು.

ಇನ್ನು ನಾಲ್ಕನೆಯದಾಗಿ, ಎಲ್ಲಾ ಕಾಲೇಜುಗಳಲ್ಲಿಯೂ ಈ ಶುಲ್ಕದ ದರಗಳ ಏರಿಕೆಯಿಂದ ಒಂದೇ ಸಮನಾದ ಶುಲ್ಕ ಬರುತ್ತದೆ ಎಂದು ನನಗೆ ಕಂಡುಬರುವುದಿಲ್ಲ. ಅಲ್ಪಸ್ವಲ್ಪ ಏರಿಸಿರುವ ಮತ್ತು ಇನ್ನೂ ಹೆಚ್ಚು ಶುಲ್ಕವನ್ನು ತೆರತಕ್ಕ ವಿದ್ಯಾರ್ಥಿಗಳ ಬೇರೆ ಕಾಲೇಜುಗಳನ್ನೂ ನಾವು ನೋಡಬಹುದು. ಈ ರೀತಿ ಸರ್ಕಾರದವರು ಕಾಲೇಜುಗಳ ಶುಲ್ಕವನ್ನು ಏರಿಸುವುದಕ್ಕೆ ನನಗೆ ಇನ್ನೊಂದು ಕಾರಣ ಏನು ಕಂಡುಬಂತು ಎಂದರೆ, ಶ್ರೀಮಾನ್ ಎ. ಜಿ. ರಾಮಚಂದ್ರರಾಯರ ನೇತೃತ್ವದಲ್ಲಿ ರಚನೆಯಾಗಿದ್ದ ಸಮಿತಿಯವರು ಕೂಡಾ ಈ ಕಾಲೇಜುಗಳ ಶುಲ್ಕವನ್ನು ಏರಿಸಬೇಕು ಎಂದು ಸಲಹೆ ಮಾಡಿದ್ದಾರೆ. ಈ ವಿಷಯ ಅವರ ವರದಿಯಲ್ಲಿದೆ. ಶ್ರೀಮಾನ್ ಶಿವಪ್ಪನವರು ಹೇಳಿದ ಹಾಗೆ ವಿದ್ಯೆಯನ್ನು ಆದಷ್ಟು ಹೆಚ್ಚು ಜನಗಳಿಗೆ ಕೊಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ನಮ್ಮ ದೇಶ ಆರ್ಥಿಕವಾಗಿ ಬಹಳ ಹಿಂದುಳಿದುದು, ಮತ್ತು ಜನಗಳಿಗೆ ಸಾಕಷ್ಟು ವಿದ್ಯಾ ಸೌಕರ್ಯವಿಲ್ಲದ ಬಹಳ ಜನಗಳು ಅವಿದ್ಯಾವಂತರಾಗಿದ್ದಾರೆ.

ಸರ್ಕಾರದವರು ಈಗತಾನೆ ಕಡ್ಡಾಯ ಮತ್ತು ಉಚಿತ ಪ್ರಾಥಮಿಕ ಶಿಕ್ಷಣವನ್ನು ಕೊಡಬೇಕೆಂದು ಹೇಳಿ ಪ್ರಯತ್ನ ಮಾಡುತ್ತಾ ಇದ್ದಾರೆ. ಜೊತೆಗೆ ಸೆಕೆಂಡರಿ ಶಿಕ್ಷಣವನ್ನು ಕೊಡತಕ್ಕ ಭಾಗಕ್ಕೂ ಕೂಡ ಹೆಚ್ಚು ಖರ್ಚು ಇನ್ನು ಮುಂದೆ ಬರುತ್ತದೆ. ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಸರ್ಕಾರದವರು ಇಂಥಾ ಕೆಲವು ಮಾತುಗಳಿಂದ ಕಾಲೇಜು ವಿದ್ಯಾಭ್ಯಾಸವನ್ನು ನಮ್ಮ ದೇಶದಲ್ಲಿ ಹೆಚ್ಚು ಜನರಿಗೆ ಕೊಡಬಾರದು ಎನ್ನುವ ಉದ್ದೇಶವಿರುವುದಾದರೆ ಆಗ ಇಂಥಾ ಒಂದು ಹೆಜ್ಜೆಯನ್ನು ಇಡುವುದು ಸಮರ್ಥನೀಯ ಎಂದು ಕಾಣುತ್ತದೆ. ಕೇವಲ 100 ಕ್ಕೆ 20 ಜನರಿಗೆ ಮಾತ್ರ ಕಾಲೇಜು ವಿದ್ಯಾಭ್ಯಾಸ ಸಿಕ್ಕಿದರೆ ಸಾಕು ಎಂಬ ಅಭಿಪ್ರಾಯವಾದರೆ ಈ ರೀತಿ ಶುಲ್ಕದನ್ನು ಹೆಚ್ಚಿಸಬಹುದು ಮತ್ತು ಕಾಲೇಜುಗಳ ಸಂಖ್ಯೆಯನ್ನು ಕಡಿಮೆ ಮಾಡಬಹುದು, ಹಾಗೆಯೇ ಪಾಸ್ ಆಗತಕ್ಕವರ ಸಂಖ್ಯೆಯನ್ನು ನೂರಕ್ಕೆ ಇಪ್ಪತ್ತು ಇಟ್ಟುಕೊಳ್ಳಬಹುದು. ಆದರೆ ಹೆಚ್ಚು ಜನ ವಿದ್ಯಾವಂತರಾಗಬೇಕು. ಹೆಚ್ಚಿನ ಜನಕ್ಕೆ ಹೆಚ್ಚಿನ ಉತ್ತಮ ಮಟ್ಟದ ಒಳ್ಳೆಯ ವಿದ್ಯಾಭ್ಯಾಸ ದೊರೆಯಬೇಕೆಂಬುದು ಸರ್ಕಾರದ ಉದ್ದೇಶವಾದರೆ ಕಾಲೇಜುಗಳಿಗೆ ಹೆಚ್ಚು ಹೆಚ್ಚು ಜನರು ಹೋಗುವುದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕಾಗುತ್ತದೆ. ಆದ್ದರಿಂದ ಇವತ್ತು ಈ ಸಂದರ್ಭದಲ್ಲಿ ನಾವು ಸರ್ಕಾರದವರಿಗೆ ಒತ್ತಾಯ ಪಡಿಸುವುದಾದರೂ ಇಷ್ಟೇ. ಅವರು ತತ್ವವನ್ನು ಒಪ್ಪಿಕೊಳ್ಳಿ ಎಂದು ಹೇಳಿ ಒಂದು ಕಡೆ ಒತ್ತಾಯ ಮಾಡುತ್ತಾ ಇದ್ದಾರೆ. ಎಲ್ಲಾ ಕಡೆಯೂ ಶುಲ್ಕ ಒಂದೇ ರೀತಿಯಲ್ಲಿ ಇರಬೇಕು ಮತ್ತು ಅದನ್ನು ಏರಿಸತಕ್ಕ ತತ್ವವನ್ನು ಒಪ್ಪಿಕೊಳ್ಳಿ ಎನ್ನುತ್ತಾರೆ. ಸಾಮಾನ್ಯವಾಗಿ ಶುಲ್ಕವನ್ನು ಏರಿಸುವುದು ಸರಿ ಎಂದರೆ ಆ ತತ್ವವನ್ನು ಒಪ್ಪಿಕೊಳ್ಳಬಹುದು. ಆದರೆ ಶುಲ್ಕವನ್ನು ಏರಿಸಬೇಕು ಎನ್ನುವುದೇ ಒಂದು ಭಿನ್ನಾಭಿಪ್ರಾಯಕ್ಕೆ ಆಸ್ಪದವಾದ ವಿಷಯವಾಗಿದೆ. ಆದ್ದರಿಂದ ಈ ಶುಲ್ಕವನ್ನು ಏರಿಸತಕ್ಕ ವಿಷಯದಲ್ಲಿ ಕೆಲವರು ಅದನ್ನು ಸಮರ್ಥನೆ ಮಾಡಬಹುದು, ಕೆಲವರು ಮಾಡದೇ ಇರಬಹುದು. ಆದರೆ ಇವತ್ತು ಸರ್ಕಾರ

ತನ್ನ ಒಂದು ಗೌರವ ಅಥವಾ ಪ್ರತಿಷ್ಠೆಯನ್ನು ಮುಂದು ಮಾಡಿ ಒಂದಕ್ಕೆ ಒಂದೂವರೆಯಷ್ಟು ಎಂದರೆ, 90 ರೂಪಾಯಿಗೆ 144 ರೂಪಾಯಿ ಕೊಡಬೇಕೆಂದು ಮಾಡಿದ್ದಾರೆ. ಅದು ಅನ್ಯಾಯ ಮತ್ತು ಒಮ್ಮೆಗೇ ಏರಿಸುವುದು ಬಹಳ ದೊಡ್ಡ ತಪ್ಪಾಗುತ್ತದೆ. ಅದರಿಂದ ಸಹಸ್ರಾರು ಜನ ಮಧ್ಯಮ ತರಗತಿಯವರು ಮತ್ತು ಕೆಳವರ್ಗ ಮಧ್ಯಮ ತರಗತಿಯ ಜನರು ಮತ್ತು ಇನ್ನೂ ಬಡವರು ಕಾಲೇಜು ವಿದ್ಯಾಭ್ಯಾಸಕ್ಕೆ ತಮ್ಮ ಮಕ್ಕಳನ್ನು ಕಳುಹಿಸಬೇಕೆಂದು ಇರುತ್ತಾರೋ ಅವರನ್ನು ಒತ್ತಾಯಪೂರ್ವಕವಾಗಿ ಕಳುಹಿಸದಂತೆ ತಡೆಹಿಡಿದಂತಾಗುತ್ತದೆ. ಅದನ್ನು ಗಮನಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದ್ದರಿಂದ ಸರ್ಕಾರದವರು ಈ ಶುಲ್ಕವನ್ನು ಕೂಡಲೇ ಪುನರ್ವಿಮರ್ಶೆ ಮಾಡಿ ಕಳೆದ ವರ್ಷ ಯಾವ ರೀತಿ ಶುಲ್ಕ ವಸೂಲು ಮಾಡುತ್ತಾ ಇದ್ದರೋ ಈ ವರ್ಷ ಅದೇ ರೀತಿ ವಸೂಲು ಮಾಡಿ, ಹೆಚ್ಚಿಸಿರುವುದನ್ನು ತಕ್ಷಣ ಕಡಿಮೆ ಮಾಡಿದ್ದೇವೆ ಎಂದು ಒಂದು ಆಜ್ಞೆಯನ್ನು ಹೊರಡಿಸಬೇಕೆಂದು ಸರ್ಕಾರದವರನ್ನು ವಿದ್ಯಾರ್ಥಿಗಳ ಹಾಗೂ ಅವರ ಪೋಷಕರ ಪರವಾಗಿ ಒತ್ತಾಯಪೂರ್ವಕವಾಗಿ ಕೇಳಿಕೊಳುತ್ತೇನೆ. ಈ ಶುಲ್ಕ ಏರಿಸುವ ಆಜ್ಞೆ ಬಹಳ ಹಿಂದೆ ಹೊರಟಿತು. ಇದರ ಬಗ್ಗೆ ಅನೇಕ ವರ್ತುಲಗಳಲ್ಲಿ ಸಾಕಾದಷ್ಟು ಪ್ರತಿಭಟನೆಯೂ ಕೂಡ ಬಂದಿದೆ. ಮುಖ್ಯವಾಗಿ ಸಂಬಂಧಪಟ್ಟ ಕಾಲೇಜುಗಳಲ್ಲಿ ಓದುವುದಕ್ಕೆ ಹೊಸದಾಗಿ ಬಂದಿರತಕ್ಕ ವಿದ್ಯಾರ್ಥಿಗಳು ಸಾಕಾದಷ್ಟು ತಮ್ಮ ಪ್ರತಿಭಟನೆಯನ್ನು ಈ ವಿಷಯದಲ್ಲಿ ತೋರಿಸಿದ್ದಾರೆ. ಅವರು ಬಹಳ ಸಂಯಮದಿಂದ, ಶಾಂತಿಯುತವಾದ ಪ್ರತಿಭಟನೆಯನ್ನು ಆಚರಿಸಿಕೊಂಡು ಹೋಗಿದ್ದಾರೆ. ಆದುದರಿಂದ ವಿದ್ಯಾರ್ಥಿಗಳು ಮುಷ್ಕರವನ್ನು ವಾಪಸು ತೆಗೆದುಕೊಳ್ಳುವರೆಂದು ಭಾವಿಸಿ ಸರ್ಕಾರದವರು ಈ ಶುಲ್ಕದ ಏರಿಕೆಯನ್ನು ಕೈಬಿಟ್ಟು ಈ ಒಂದು ಆದಾಯವನ್ನು ಬೇರೆ ಯಾವುದರಿಂದ ಆದರೂ ಹೊಂದಿಸಿಕೊಳ್ಳಬೇಕು. ನಾನು ಅನೇಕ ಸಲಹೆಗಳನ್ನು ಮಾಡಬಲ್ಲೆ. ಇವತ್ತು ಕಾಲೇಜುಗಳಲ್ಲಿ ಎಷ್ಟೋ ವೇಳೆ ಅನಾವಶ್ಯಕವಾದ ಖರ್ಚು ನಡೆಯುತ್ತದೆ. ಲಕ್ಷಾಂತರ ರೂಪಾಯಿ ಖರ್ಚಾಗುವುದನ್ನು ನೋಡುತ್ತಾ ಇದ್ದೇವೆ. ಕಾರ್ಪೊರೇಷನ್‌ಗೆ ಸಹಸ್ರಾರು ರೂಪಾಯಿಗಳನ್ನು ಖರ್ಚು ಮಾಡುವುದನ್ನು ನೋಡುತ್ತಾ ಇದ್ದೇವೆ. ಹಾಗೆಯೇ ಇವತ್ತು ಮಂತ್ರಿಮಂಡಲದ ವಿಸ್ತರಣೆ ಕೂಡ ಗಮನಕ್ಕೆ ತೆಗೆದುಕೊಳ್ಳಬಹುದು. ಖರ್ಚು ನಿಮಗೆ ಬಾಧಿಸುವುದಾದರೆ, ಖರ್ಚು ಹೆಚ್ಚಾಗುತ್ತಾ ಇದೆ. ಆದ್ದರಿಂದ ಶುಲ್ಕ ಹೆಚ್ಚಿಸಬೇಕು ಎನ್ನುವುದಾದರೆ ಹತ್ತು ಜನ ಮಂತ್ರಿಗಳನ್ನು ಕಡಿಮೆ ಮಾಡಿದರೆ ಅವರಿಂದ ನಾಲ್ಕು ಲಕ್ಷ ರೂಪಾಯಿಗಳನ್ನು ಉಳಿಸಿಕೊಳ್ಳುವುದಕ್ಕೆ ಆಗುತ್ತದೆ. ಇನ್ನು ಸಹಸ್ರಾರು ಸಲಹೆಗಳನ್ನು ಮಾಡಬಹುದು. ಆದ್ದರಿಂದ ಖರ್ಚನ್ನು ಇದರಿಂದ ತುಂಬಿಕೊಳ್ಳುತ್ತೇವೆ ಎನ್ನುವ ಮಾತು. ಇದು ಬರೀ ವಾದದ ಮಾತೇ ಹೊರತು ಬೇರೆಯಲ್ಲ. ಸರ್ಕಾರ ಆದಾಯವನ್ನು ಹೆಚ್ಚುಮಾಡಿಕೊಳ್ಳುವುದಕ್ಕೆ ಹೊರಟಿಲ್ಲ ಎನ್ನುವುದು ಕಂಡುಬರುತ್ತದೆ. ಎರಡನೆಯದಾಗಿ ಹೊರಗಡೆ ಕಾಲೇಜುಗಳಲ್ಲಿರತಕ್ಕವರಿಗೆ ತಾರತಮ್ಯ ಮಾಡಿದಂತಾಗುತ್ತದೆ ಎನ್ನುವ ವಿಷಯದಲ್ಲಿ ಹೇಳುವುದಾದರೆ ಇನ್ನೂ ಅನೇಕ ವಿಷಯಗಳಲ್ಲಿ ಸಮಾನತೆಯನ್ನು ಕಂಡುಕೊಂಡಿಲ್ಲ. ಆ ಪ್ರಯೋಗವನ್ನು ವಿದ್ಯಾಕ್ಷೇತ್ರದಲ್ಲಿ ಮಾಡಿ ವಿದ್ಯಾರ್ಥಿಗಳಿಂದ ಶುಲ್ಕ ಪಡೆಯುವುದರ ಮೂಲಕ ಪ್ರಾರಂಭ ಮಾಡದೇ, ಸಂಬಳ ಕೊಡುವುದರಲ್ಲಿ ತಾರತಮ್ಯ ಇದೆ; ಕಾನೂನು ಕಾಯಿದೆಗಳಲ್ಲಿ ತಾರತಮ್ಯ ಇದೆ; ಇದನ್ನೆಲ್ಲಾ ಹೋಗಲಾಡಿಸಲು ಸರ್ಕಾರ ಹೆಚ್ಚು ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಈ ವಿಷಯದಲ್ಲಿ ಸರ್ಕಾರದವರು ತಮ್ಮ ಪ್ರತಿಷ್ಠೆಯನ್ನು ಮುಂದು ಮಾಡದೆ ವಿದ್ಯಾರ್ಥಿಗಳ ಬೇಡಿಕೆಯನ್ನು ಮನ್ನಿಸಿ ಶುಲ್ಕದ ದರ ಇಳಿಸಬೇಕು. ಹಿಂದಿನಂತೆ ಇಡಬೇಕು ಎಂಬ ಬೇಡಿಕೆ ಏನಿದೆ ಅದನ್ನು ಮಾಡಬೇಕು ಎಂದು ಸರ್ಕಾರದವರನ್ನು ಪ್ರಾರ್ಥನೆ ಮಾಡುತ್ತೇನೆ. ಮತ್ತು ಮಂತ್ರಿಗಳು ಇದನ್ನು ತಮ್ಮ ವೈಯಕ್ತಿಕ ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಯಾವತ್ತು ಮಾಡಬಾರದು ಎಂದು ಹೇಳುತ್ತೇನೆ.

ಇನ್ನೊಂದು ವಿಷಯ. ಶ್ರೀಮಾನ್ ಕಂಠಿಯವರು ಈಗತಾನೆ ಬರುತ್ತಾ ಇದ್ದಾರೆ. ದೇಶ ಸ್ವತಂತ್ರವಾದ ನಂತರ, ಬಹಳ ಸಂಕಟಕ್ಕೆ ಒಳಗಾಗಿರತಕ್ಕ ಒಂದು ವಿಷಯ ಎಂದರೆ ಈ ವಿದ್ಯಾಭ್ಯಾಸದ ವಿಷಯ. ಇದು ಬಹಳ ದೊಡ್ಡ ಇಕ್ಕಟ್ಟಿಗೆ ತುತ್ತಾಗಿರತಕ್ಕ ವಿಷಯವಾಗಿದೆ. ಇಂಥಾ ಒಂದು ವಿಷಯದ ಪೋರ್ಟ್‌ಫೋಲಿಯೋವನ್ನು ಅವರು ಹೊಂದಿದ್ದಾರೆ. ಈಗಾಗಲೇ ಅವರು ಮುಖ್ಯಮಂತ್ರಿಗಳಾಗಿದ್ದರು, ಹಣಕಾಸಿನ ಮಂತ್ರಿಗಳಾಗಿದ್ದರು, ಈಗ ವಿದ್ಯಾಮಂತ್ರಿಗಳಾಗಿದ್ದಾರೆ. ನಾನು ಅವರಿಗೆ ಬಹಳ ನಮ್ರತೆಯಿಂದ ಸಲಹೆ ಮಾಡುವುದು ಏನೆಂದರೆ, ವಿದ್ಯಾಮಂತ್ರಿ ಪದವಿಯನ್ನೂ ಕೈಬಿಟ್ಟು ಹೊರಗೆ ಇರುವುದು ಒಳ್ಳೆಯದು ಎಂದು ನನಗನ್ನಿಸುತ್ತದೆ. ಆದರೆ ಒಳಗಡೆ ಏನೇನು ಒತ್ತಾಯ ಇದೆಯೋ ಏನೋ! ಮಂತ್ರಿ ಆಗಿರಲೇಬೇಕೆಂದು ಹೇಳುತ್ತಾ ಇರಬಹುದು .....

ಶ್ರೀ ಎಸ್. ಆರ್. ಕಂಠಿ.—ನೀವು ಹೇಳುವುದು ಯಾವುದನ್ನೂ ಒಪ್ಪಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ ನನಗೂ ಗೊತ್ತಿದೆ. ನಾನು ನಿಮಗಿಂತಲೂ ವಯಸ್ಸಿನಲ್ಲಿ ಹಿರಿಯ, ಬೇಕಾದಷ್ಟು ಕಷ್ಟಪಟ್ಟಿದ್ದೇನೆ, ಬಡಿಸಿಕೊಂಡಿದ್ದೇನೆ, ಜೈಲಿಗೆ ಹೋಗಿದ್ದೇನೆ. ಕಷ್ಟನಷ್ಟ ಎಷ್ಟೇ ಬಂದರೂ ನಿಮ್ಮಲ್ಲಿ ಎಷ್ಟು ಶಕ್ತಿ ಇದೆಯೋ ಅಷ್ಟೇ ಶಕ್ತಿ ನನ್ನಲ್ಲೂ ಇದೆ.

ಶ್ರೀ ಎಸ್. ಗೋಪಾಲಗೌಡ.—ಈಚೆಗೆ ತಾವು ಮಂತ್ರಿಯಾದ ಮೇಲೆ ನಾವು ಕಂಡುಕೊಂಡಿರತಕ್ಕ ಕೆಲವು ವಿಷಯಗಳಲ್ಲಿ ನಾನು ಸಲಹೆ ಮಾಡುವುದು ಏನೆಂದರೆ ತಮಗೇನೋ ಇದರಲ್ಲಿ ಬಹಳ ಆಸಕ್ತಿ ಇದೆ, ಕುತೂಹಲವಿದೆ, ಎಂಬುದು ಚೆನ್ನಾಗಿ ಗೊತ್ತಿದೆ. ಕೆಲಸ ಮಾಡಬೇಕೆಂಬ ಉತ್ಸಾಹ ತಮ್ಮಲ್ಲಿ ಕಂಡುಬರುತ್ತಾ ಇದೆ. ಆದರೆ ಈ ಉತ್ಸಾಹದ ಭರದಲ್ಲಿ ಕೆಲವು ವೇಳೆ ಎಡವುವುದು, ತಪ್ಪಾಗುವುದು ಬಹಳ ಸಹಜ. ಆದ್ದರಿಂದ ವಿದ್ಯಾಭ್ಯಾಸದ ಆಡಳಿತದಲ್ಲಿ,—ಬಹಳ ಚೆನ್ನಾಗಿದೆ ಎನ್ನುವುದರ ಅಥವಾ ದಕ್ಷತೆಯ ಪ್ರಶ್ನೆಯಲ್ಲ-ಇದರಲ್ಲಿ ಸಾಮಾನ್ಯವಾಗಿ ತಪ್ಪದೇ ನಡೆದುಕೊಂಡು ಹೋಗಬೇಕು. ಏಕೆಂದರೆ ಮಕ್ಕಳ ಮೇಲೆ ನಾವು ಪ್ರಯೋಗ ಮಾಡುತ್ತಾ ಇರುತ್ತೇವೆ. ಮಣ್ಣಿನ ಮೇಲೆ ಮಾಡುವುದಾದರೆ ಪರವಾಗಿಲ್ಲ. ಪಿ.ಡಬ್ಲ್ಯು.ಡಿ. ಮಿನಿಸ್ಟರು ಇದ್ದಾರೆ ಮಣ್ಣಿನಿಂದ ಕಟ್ಟುತ್ತಾರೆ, ಬಿದ್ದುಹೋಗುತ್ತದೆ. ಅದರಿಂದ ದೇಶಕ್ಕೆ ಲುಕ್ಸಾನಾದರೂ ಮತ್ತೆ ಕಟ್ಟಬಹುದು. ಆದರೆ ಮಕ್ಕಳನ್ನು ನಡೆಸಿಕೊಂಡು ಹೋಗುವಾಗ ಈ ರೀತಿ ಪ್ರಯೋಗ ಮಾಡುತ್ತಾ ಹೋದರೆ ಬಹಳ ತಪ್ಪಾಗುತ್ತದೆ. ತಮ್ಮ ಇಲಾಖೆಗೆ ಸಂಬಂಧಪಟ್ಟಹಾಗೆ ಈಚೆಗೆ ಅನೇಕ ದೊಡ್ಡ ದೊಡ್ಡ ದೂರುಗಳು ಬರುತ್ತಾ ಇವೆ. ಅವನ್ನು ಕೇಳುತ್ತಾ

(ಶ್ರೀ ಎಸ್. ಗೋಪಾಲಗೌಡ)

ಇದ್ದೇವೆ. ನಮ್ಮ ಸಭೆಯ ಕಾಲವನ್ನು ಈ ವಿದ್ಯಾಶಾಖೆಯಲ್ಲಾಗತಕ್ಕ ತಪ್ಪುಗಳೇನು ಎಂಬುದರಮೇಲೆ ವಿಚಾರಮಾಡುವುದಕ್ಕೇ, ವಿನಿಯೋಗಿಸುವುದು ಸಾಧ್ಯವಿಲ್ಲ. ಬೇರೆ ಕಡೆ ಹೇಳಿದರೆ ಅದನ್ನು ವಿದ್ಯಾಶಾಖೆಯವರು ಸರಿಪಡಿಸಿಕೊಳ್ಳುತ್ತಾರೆ ಎಂದು ಹೇಳುವುದಕ್ಕೂ ಸಾಧ್ಯವಿಲ್ಲ. ಶ್ರೀಮಾನ್ ಶಿವಪ್ಪನವರು ಹೇಳಿದ ಹಾಗೆ ಲೆಕ್ಚರರುಗಳನ್ನು ಡೆಮಾನ್‌ಸ್ಟ್ರೇಟರುಗಳಾಗಿ ಡಿಮೋಟ್ ಮಾಡಿರತಕ್ಕ ನಿದರ್ಶನ ಇದೆ. ಚರ್ಚೆ ಮಾಡುವುದಕ್ಕೆ ಅಧ್ಯಕ್ಷರು ಅವಕಾಶ ಕೊಡುವುದಿಲ್ಲ. ಷಾರ್ಟ್ ನೋಟೀಸ್ question ಕಳುಹಿಸಿ ಎಂದು ಹೇಳಬಹುದು. ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಅನೇಕ ಬೇರೆ ವಿಷಯಗಳು ಇರುತ್ತವೆ. ಆದ್ದರಿಂದ ಶ್ರೀಮಾನ್ ಕರಿಯವರಲ್ಲಿ ಬಹಳ ನಮ್ರತೆಯಿಂದ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ತಮ್ಮ ಶಾಖೆಯಲ್ಲಿ ದಕ್ಷತೆ ಮತ್ತು ನ್ಯಾಯವಾದ ರೀತಿಯಲ್ಲಿ ಆಡಳಿತ ನಡೆಸಿಕೊಂಡು ಹೋಗಬೇಕಾದರೆ ಈ ಶುಲ್ಕ ಏರಿಸಬಾರದು, ತಮಗೆ ಇದರಲ್ಲಿ ಒಂದು ಪ್ರತಿಷ್ಠೆಯ ಪ್ರಶ್ನೆ ಇರುವುದಾದರೆ ನೀವು ಮೇಸ್ ಪಾರ್ಲಿಮೆಂಟರಿ ಪ್ರಾಕ್ಟೀಸ್‌ನ್ನು ಅನುಸರಿಸಿ, ಅದು ನಿಮ್ಮಿಂದಲೇ ಪ್ರಾರಂಭವಾಗಲೀ, ತಾವು ರಾಜೀನಾಮೆಯನ್ನು ಬಹಳ ಸಂತೋಷದಿಂದ ಕೊಡಲು ಈ ವಿಷಯದಲ್ಲಿ ಹಿಂತೆಗೆಯಬಾರದು. ಮಂತ್ರಿಮಂಡಲದಲ್ಲಿ ಹೊಸದಾಗಿ ಇನ್ನೂ ಅನೇಕರು ಬಂದಿದ್ದಾರೆ ಪುನರ್ವಿಮರ್ಶೆ ಮಾಡುತ್ತಾರೆ. ದೇಶದಲ್ಲಿ ಒಳ್ಳೆಯ ವಾತಾವರಣ ಉಂಟಾಗುತ್ತದೆ. ವಿದ್ಯಾರ್ಥಿಗಳು ಸಂತೋಷ ಪಡುತ್ತಾರೆ. ಆದ್ದರಿಂದ ಈ ಸಭೆಯ ಮಾನ್ಯ ಸದಸ್ಯರೆಲ್ಲರೂ ತಮ್ಮ ನಿವೃತ್ತಿಗೆ ಒತ್ತಾಯಪಡಿಸುತ್ತಾರೆ ಎಂದು ತಿಳಿದುಕೊಂಡಿದ್ದೇನೆ.

ಅಧ್ಯಕ್ಷರು.—ಸದಸ್ಯರೆಲ್ಲರ ಬೆಂಬಲ ಇದೆ ಎಂದು ಹೇಗೆ ಹೇಳುತ್ತೀರಿ? ನಾನೂ ಒಬ್ಬ ಸದಸ್ಯ.

ಶ್ರೀ ಎಸ್. ಗೋಪಾಲಗೌಡ.—ಹೀಗೆಯೇ ತಾವು ಮುಂದುವರಿಯುವುದಾದರೆ......

Mr. SPEAKER.—Has the Hon. Member any authority to speak on behalf of all the Members? I am also a member.

ಶ್ರೀ ಎಸ್. ಗೋಪಾಲಗೌಡ.—ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅವರ ಹಿತದೃಷ್ಟಿಯಿಂದ, ನಾಡಿನ ಹಿತದೃಷ್ಟಿಯಿಂದ ಅವರು ಹೇಗೆ ಮಾಡುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ ಹೇಳುತ್ತಿದ್ದೇನೆ. ಹಾಗೂ ಅವರು ಶುಲ್ಕವನ್ನಿಳಿಸುತ್ತಾರೆ, ಪ್ರತಿಷ್ಠೆಯನ್ನು ಮುಂದೆ ಮಾಡದೆ ಸಾವಿರಾರು ಜನ ಮಕ್ಕಳ ತಂದೆ ತಾಯಿಗಳಿಗೆ ಸಹಾಯ ಮಾಡುತ್ತಾರೆಂದು ಆಶಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ

†Sri ANNA RAO GANAMUKHI.—Mr. Speaker, Sir, while speaking on this motion, I should like to give a few suggestions to the Education Minister because the fee increase has attracted the attention of many districts and the student population which is an explosive substance is trying to boycott the colleges. Here in this House we have to think coolly and give helpful suggestions so that no ugly situation may be created in our State and especially among the student population.

I do not think that the Education Minister has suddenly increased the fees because it has got some history behind it. The fee increase was there in 1957 and again from time to time the Finance Department as also some committees have suggested fee increase in the fee structure of our colleges in the Ex-Mysore Area. It is, no doubt, true that a large number of poor students are going to the colleges and, if I may say so, many of the sons and daughters of primary school teachers are going to the colleges. We are giving free instructions at the primary school level. Even if they do not pay fee, we have to give them instructions. We have given so many concessions to them at the high school level also and recently we have raised the ceiling limit to Rs. 2,400 and this is giving considerable benefit to these people who are in the lower strata so far as income is concerned. I should like to say that the very people who enjoy these benefits at the primary level and high school level are again going to the colleges. If it is contended that we are incurring some expenditure on college education, then I may say that we are equally incurring some expenditure on primary and secondary education also. So, this contention cannot hold good because we are spending a lot of money by borrowing money from the market and from the Government of India. In so many ways we are spending money under the Plans. Therefore, I think that the fee increase should be related to the ability of the students and the parents to pay the fees. When acknowledged that many of the students cannot pay fees at the primary and high school level and therefore we have raised the income limit of the parents to Rs. 2,400, by the same logic why the same limit of Rs. 2,400 be not applied to the college students also? If this concession is extended to the college students, I think nobody should have any grouse to pay the full fees which has now been increased.

In many cases there is no uniformity. Take for instance, the irrigation cess, the sugar cess and so on. In the integrated areas it is very high and in this area it is very low. We have not brought them to the level of the integrated areas. So, bringing about uniformity does not mean raising it; it may also mean bringing it down. Even in imposing taxes, fees, cesses, etc. we always rely upon the principle of 'ability to pay'.

Sri S. R. KANTHI.—May I ask for a clarification from the Hon'ble Member? When he was himself the Education Minister, the fees in the colleges in Gulbarga were raised 100 per cent. Why was it done?

Sri ANNA RAO GANAMUKHI.—I myself wanted to raise that point.

I was speaking about the general principles. To those who say that the fee increase is unjustified I would like to say that the fee increase is bound to come; it should be increased but without creating any bad blood. It should not impinge upon the parents. So, I suggest that let this increase be spread over a period of five years so that it may not create any bad blood. In the colleges in Gulbarga there was fee increase. But what we did was we increased the fees but at the same time we staggered it *i.e.* spread over a period of 3 or 5 years so that it may not harm the students.

Therefore, Sir, I suggest in this connection also that we should by, way of relief, stagger this increase and spread it over a period of five years so that the parents also may get much relief and also much desired uniformity may come soon.

4-00 P.M.

†ಶ್ರೀ ಎ. ಕೃಷ್ಣಶೆಟ್ಟಿ (ಮಂಗಳೂರು).—ಅಧ್ಯಕ್ಷರೆ. ಇಲ್ಲಿ ಬಂದಿರುವ ಚರ್ಚೆಯು ವಿಷಯದಲ್ಲಿ ವಿರೋಧಪಕ್ಷದ ನಾಯಕರಾದ ಶ್ರೀ ಶಿವಪ್ಪನವರು ಹೇಳಿದ್ದನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಶುಲ್ಕ ಏರಿಸಲಿಕ್ಕೆ ಕೆಲವು ಆಧಾರಗಳನ್ನು ಸರ್ಕಾರ ಕೊಟ್ಟಿದೆ. ಮದ್ರಾಸಿನಲ್ಲಿ ಏರಿಸಿದ್ದಾರೆ, ಆಂಧ್ರದಲ್ಲಿ ಏರಿಸಿದ್ದಾರೆ ಎಂದು ತಿಳಿಸಲಾಗಿದೆ. ಮದ್ರಾಸಿನಲ್ಲಿ ಅಕ್ಷರಸ್ಥರ ಸಂಖ್ಯೆ ಶೇಕಡ ೩೦, ಕೇರಳದಲ್ಲಿ ಶೇಕಡ ೪೫ ಇದ್ದರೆ ನಮ್ಮಲ್ಲಿ ಕೇವಲ ಶೇಕಡ ೩೫ ಇದೆ. ಇದಕ್ಕೇನು ಕಾರಣ? ಆಂಧ್ರದಲ್ಲಿ, ಮದರಾಸಿನಲ್ಲಿ ಕೆಲವು ವಿಚಾರಗಳಲ್ಲಿ ನಿಯಮಿತ ಕಾಲದಲ್ಲಿ ಬಹಳ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿದ್ದಾರೆ; ವಿದ್ಯುಚ್ಛಕ್ತಿ ಮತ್ತು ಇತರ ಕೆಲವು ವಿಷಯಗಳನ್ನು ನೋಡಬಹುದು. ಅಲ್ಲಿ ನಮ್ಮ ದೇಶದಲ್ಲಿ ನಡೆಯುವಂತೆ ಆಗಿಲ್ಲ. ಬೇರೆ ಕಡೆ ಮಾಡಿದೆ ಎಂದು ಅದನ್ನು ಆಧಾರವಾಗಿಟ್ಟುಕೊಂಡು ಮಾಡುವುದಾದರೆ ಬೇರೆ ರೀತಿಯಲ್ಲಿ ಅಲ್ಲಾದ ಇತರ ಕೆಲಸಗಳನ್ನು ಕೂಡ ಮಾಡಿ ಜನರಿಗೆ ಸರಿಯಾಗಿ ಸಮಾಧಾನ ಮಾಡಬೇಕಾಗಿತ್ತು. ಅದನ್ನು ನೀವು ಮಾಡಲಿಲ್ಲ.

ಮದ್ರಾಸ್ ಪ್ರದೇಶದಿಂದ ಮೈಸೂರಿಗೆ ಸೇರಿದ ಭಾಗಗಳಲ್ಲಿ ಈಗ ಶುಲ್ಕ ಹೆಚ್ಚಾಗಿದೆ ಎಂದು ಹೇಳಿದರು. ಈಗ ಅವರು ಶುಲ್ಕ ಕೊಡಲು ತಾವು ತಯಾರಿಲ್ಲ ಎಂದು ಹೇಳಿ ಅದರಿಂದ ಸ್ಥಿತಿಗತಿಯೇನಾದರೂ ಕೆಟ್ಟಿದ್ದುಂಟೆ? ಮೈಸೂರು ಪ್ರದೇಶದಲ್ಲಿ ಹೆಚ್ಚು ಮಾಡದಿದ್ದರೆ ನಾವು ಕೊಡುವುದಿಲ್ಲ ಎಂದು ದಕ್ಷಿಣ ಕನ್ನಡ ಜಿಲ್ಲೆಯವರಾಗಲಿ ಅಥವಾ ಇತರ ಪ್ರದೇಶದವರಾಗಲಿ ಹೇಳಿದ್ದುಂಟೆ?

ಶ್ರೀ ಎಸ್. ಆರ್. ಕಂಠಿ.—ಈ ವಿಚಾರದಲ್ಲಿ ಒಂದು ಸಮಿತಿ ಮಾಡಿತ್ತು. ಯೂನಿಫಾರಂ ಆಗಿ ಹೆಚ್ಚಿಸುವಂತೆ ಅದು ತಿಳಿಸಿದೆ. ನನ್ನ ಕಡೆ ಬೇಕಾದಷ್ಟು ಕಾಗದಗಳು ಬಂದಿವೆ; ಮಾನ್ಯ ಸದಸ್ಯರಿರುವ ಜಾಗದಿಂದಲೂ ಬಂದಿವೆ.

ಶ್ರೀ ಎ. ಕೃಷ್ಣಶೆಟ್ಟಿ.—ಕೆಲವು ಕೆಲಸ ಒಳ್ಳೆಯ ರೀತಿಯಿಂದ ನಡೆದಿವೆ. ಆದರೆ ಈಗ ಉಂಟು ಮಾಡಿರುವ ಪರಿಸ್ಥಿತಿ ಬಹಳ ವಿಷಾದಕರವಾಗಿದೆ. ತಂದೆ ತಾಯಿಗಳ ಮೇಲೆ ಭಾರಹಾಕಿ ಒಂದು ಕಲುಷಿತ ವಾತಾವರಣವನ್ನುಂಟು ಮಾಡಲು ಪ್ರಯತ್ನ ನಡೆದಿದೆ. ಇದೇಕೆ? ಕಾಂಗ್ರೆಸ್ ಪಕ್ಷ ಒಂದು ಹೊಸ ರಾಜಕೀಯವನ್ನುಂಟುಮಾಡಿರುವುದು ಬಹಳ ವಿಷಾದಕರ. ತಂದೆ ತಾಯಿಗಳ ಸಭೆಯನ್ನು ಕರೆದು ಮಕ್ಕಳು ಮತ್ತು ಪೋಷಕರ ನಡುವೆ ಇರುವ ಮಧುರ ಬಾಂಧವ್ಯವನ್ನು ಹಾಳು ಮಾಡಲು ಪ್ರಯತ್ನಿಸಿದ್ದಾರೆ. ಹೀಗೇಕೆ ಮಾಡಬೇಕು?

ಇನ್ನೊಂದು ವಿಷಯ. ಹಳೇ ಮೈಸೂರಿನಲ್ಲಿ ಸರ್ಕಾರ ನಡೆಸುವ ಕಾಲೇಜುಗಳು ಹೆಚ್ಚಾಗಿವೆ. ಅವುಗಳಲ್ಲೇ ಫೀಜನ್ನು ಹೆಚ್ಚಾಗಿ ಏರಿಸುವುದು. ವಿದ್ಯಾಭ್ಯಾಸದಲ್ಲಿ ಮೈಸೂರು ಹಿಂದೆ ಬಿದ್ದಿರುವಾಗ, ಜೀವನ ವೆಚ್ಚ ಎಲ್ಲಾ ಭಾಗಗಳಲ್ಲೂ ಏರಿರುವಾಗ ಮತ್ತು ಎಲ್ಲರಿಗೂ ವಿದ್ಯಾಭ್ಯಾಸವನ್ನು ಕೊಡಲು ಕಷ್ಟವಾಗಿರುವಾಗ ಈ ರೀತಿ ಶುಲ್ಕವನ್ನು ಒಮ್ಮೆಗೇ ಹೆಚ್ಚಿಸಿರುವುದು ಮೂಲಭೂತವಾಗಿ ಸರಿಯಲ್ಲ. ಇದನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಮದ್ರಾಸು ಭಾಗದಲ್ಲಿ, ಮಂಗಳೂರಿನಲ್ಲಿ ಫೀಜನ್ನು ಕಡಮೆಮಾಡಿ ಪ್ರಶಾಂತ ವಾತಾವರಣ ಉಂಟ ಮಾಡಿ ನಷ್ಟವಾಗಿರುವ ವಿದ್ಯಾಭ್ಯಾಸವನ್ನು ಭರ್ತಿಮಾಡಲು ಪ್ರಯತ್ನ ಮಾಡಬೇಕಾಗಿ ಕೋರುತ್ತೇನೆ.

ಈ ಸಂಬಂಧದಲ್ಲಿ ಬಂದೋಬಸ್ತಿಗೆ ಮತ್ತು ಇನ್ನಿತರ ಕೆಲಸಗಳಿಗೆ ನಾಲ್ಕು ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಖರ್ಚಾಗಿದೆಯೆಂದು ಕೇಳಿಬರುತ್ತಿದೆ. ಹಾಗಿರುವಾಗ ನಾಲ್ಕು ಲಕ್ಷ ರೂಪಾಯಿಗಳನ್ನು ಶುಲ್ಕ ಏರಿಸಿ ಮಕ್ಕಳಿಂದ ವಸೂಲು ಮಾಡುವುದು ಒಂದು ಪ್ರತಿಷ್ಠೆಯ ಕೆಲಸ. ಮೆಡಿಕಲ್, ಇಂಜಿನಿಯರಿಂಗ್, ಸೈನ್ಸ್ ಮುಂತಾದ ಬಾಬುಗಳಲ್ಲಿ ಬೇಕಾದಷ್ಟು ಜನರಿಗೆ ವಿದ್ಯೆ ಕೊಡಲು ಸಾಧ್ಯವಿಲ್ಲದಿರುವಾಗ, ಬೇಕಾದ ವಿದ್ಯೆ ಕೊಡಲು ಕಷ್ಟವಿರುವಾಗ ಫೀಜನ್ನು ಹೆಚ್ಚಿಸಿರುವುದು ಉಚಿತವಲ್ಲ. ಈ ದೃಷ್ಟಿಯಿಂದ ಮೊದಲು ಏರಿಸಿರುವ ಶುಲ್ಕವನ್ನು ಇಳಿಸಬೇಕೆಂದು ಹೇಳಿ ನಮ್ಮ ಮುಂದಿರುವ ಸೂಚನೆಗೆ ಸಂಪೂರ್ಣ ಬೆಂಬಲಕೊಡುತ್ತೇನೆ.

†ಶ್ರೀ ಎ. ಪಿ. ಅಪ್ಪಣ್ಣ (ವಿರಾಜಪೇಟೆ).—ಮಾನ್ಯ ಅಧ್ಯಕ್ಷರೆ, ಇವತ್ತು ಫೀಜು ಹೆಚ್ಚಿಸಿರುವುದನ್ನು ಕಡಮೆ ಮಾಡಬೇಕೆಂದು ತಂದಿರುವ ಸೂಚನೆಯನ್ನು ಸಮರ್ಥಿಸಿ ಕೆಲವರು ಮಾತನಾಡಿದರು. ಇವತ್ತು ಹಳೇ ಮೈಸೂರು ಪ್ರದೇಶದಲ್ಲಿದ್ದ ಫೀಜನ್ನು ಅಧಿಕಮಾಡಿದೆ. ಅದಕ್ಕಾಗಿ ವಿದ್ಯಾರ್ಥಿಗಳು ಹೋರಾಟ ಮಾಡುತ್ತಿದ್ದಾರೆ, ಫೀಜನ್ನು ಕಡಮೆಮಾಡಿ ಎಂದು ಈಗ ವಾದ ಮಾಡಿರುವುದು ಸರಿಯಲ್ಲ. ಫೀಜನ್ನು ಕಡಮೆ ಮಾಡಬೇಕಾದರೆ ವಿದ್ಯಾಭ್ಯಾಸವನ್ನು ಕಡಮೆ ಖರ್ಚಿನಲ್ಲಿ ಒದಗಿಸಲು ಪ್ರಯತ್ನಪಡಬೇಕಾಗುತ್ತದೆ. ಆದರೆ ಒಂದು ಭಾಗದಲ್ಲಿರುವ ವಿದ್ಯಾರ್ಥಿಗಳು ಅಲ್ಲಿಯ ಫೀಜನ್ನು ಅಧಿಕಮಾಡಿದೆ, ಅದನ್ನು ಕಡಮೆ ಮಾಡಬೇಕೆಂದರೆ ಆ ದೃಷ್ಟಿಯಿಂದ ಮಾನ್ಯ ಮಂತ್ರಿಗಳು ಫೀಜನ್ನು ಕಡಮೆಮಾಡುವುದಾದರೆ ಯಾವ ಭಾಗದಲ್ಲಿ ಫೀಜು ಈಗಾಗಲೆ ಹೆಚ್ಚಾಗಿದೆಯೋ ಅಲ್ಲಿ ಅಜಿಟೇಷನ್ ಮಾಡಬೇಕೆಂದು ಪ್ರಚೋದನೆ ಮಾಡಿದಂತಾಗುತ್ತದೆ ಎಂಬುದು ನನ್ನ ಭಾವನೆ. ದಕ್ಷಿಣ ಕನ್ನಡ ಮತ್ತು ಕೊಡಗು ಪ್ರದೇಶಗಳಲ್ಲೂ ಈ ರೀತಿ ಹೋರಾಟ ಮಾಡುತ್ತಾರೆಂದು ಶ್ರೀಮಾನ್ ಕೃಷ್ಣಶೆಟ್ಟರು ಹೇಳಿದರು. ಇದನ್ನು ನೋಡಿದರೆ ಅತ್ತಮಗುವಿಗೇ ಹಾಲು, ಅಳದವರಿಗೆ ಹಾಲೇ ಇಲ್ಲ ಎಂಬುದು ನೆನಪಿಗೆ ಬರುತ್ತದೆ. ಇಡೀ ಮೈಸೂರು ದೇಶದಲ್ಲಿ ಒಂದೇ ರೀತಿಯಾದ ಫೀಜನ್ನು ಗೊತ್ತು ಮಾಡುವಾಗ ಹಳೆಯ ಮೈಸೂರು ಮತ್ತು ಹೊಸದಾಗಿ ಸೇರಿದ ಭಾಗಗಳು ಎಂದು ವ್ಯತ್ಯಾಸ ಮಾಡುವುದು, ವಿದ್ಯಾರ್ಥಿಗಳು ಹೋರಾಡುತ್ತಿದ್ದಾರೆ ಎಂದು ಹಳೇ ಮೈಸೂರಿನಲ್ಲಿ ಇಳಿಸಬೇಕೆಂದರೆ ಹೋರಾಟ ಇಂಥ ಸಂದರ್ಭಗಳಲ್ಲಿ ನಡೆಸಬೇಕೆಂದು ಪ್ರೋತ್ಸಾಹ ನೀಡಿದಂತಾಗುತ್ತದೆ. ಇಡೀ ರಾಜ್ಯಕ್ಕೆ ಒಂದೇ ರೀತಿಯಲ್ಲಿ ನಿಗದಿ ಮಾಡಬೇಕು. ಹಾಗಿಲ್ಲದೆ ಒಂದು ಕಡೆ ಹೋರಾಟ ಮಾಡಿದರೆಂದು ಕಡಮೆ ಮಾಡಿದರೆ ಇತರ ಕಡೆಗಳವರೆಗೂ ಹೋರಾಟ ನಡೆಸಿದರೆ ಅನುಕೂಲನಾಗುವುದೆಂಬ ಭಾವನೆ ಬಂದು ಅವರೂ ಗಲಭೆ ಏಳುವ ಸಂದರ್ಭ ಬರಬಹುದು. ಈ ದೃಷ್ಟಿಯಿಂದ ಈ ವಿಚಾರವನ್ನು ವಿನಿಮಯ ಮಾಡುವ ಸಂದರ್ಭದಲ್ಲಿ ಎಲ್ಲಾ ಪ್ರದೇಶಗಳಿಗೂ ಒಂದೇ ರೀತಿಯಾದ ಫೀಜಿರುವಂತೆ ಮಾಡುವುದು ಅಗತ್ಯ. ಈ ದಿವಸ ಹಳೇ ಮೈಸೂರಿನಲ್ಲಿ ಅಥವಾ ಇತರ ಕಡೆ ಕಾಲೇಜುಗಳಲ್ಲಿ ಶಿಕ್ಷಣ ಮತ್ತು ಸಲಕರಣೆ ಒಂದೇ ರೀತಿಯಿದೆಯೇ ವಿನಾ ಅಲ್ಲಿ ಕಡಮೆ, ಇಲ್ಲಿ ಜಾಸ್ತಿ ಎಂದು ಕಂಡುಬಂದಿಲ್ಲ.

ಆದ್ದರಿಂದ ಫೀಜು ಎಲ್ಲಾ ಕಡೆಯಲ್ಲೂ ಒಂದೇ ಆಗಿರಬೇಕಾದ್ದು ಅಗತ್ಯ. ಆ ದೃಷ್ಟಿಯಿಂದ ಹೋರಾಟ ಮಾಡಿದ್ದರೆ ಸರಿ. ಅದಿಲ್ಲದೆ, ಇಲ್ಲಿ ಶಾಂತ ರೀತಿಯಿಂದ ಹೋರಾಟವಾಗಿದೆ, ಆದ್ದರಿಂದ ಅದಕ್ಕೆ ಮನ್ನಣೆಸಿಕ್ಕಬೇಕೆಂದು ಹೊರಟು ಫೀಜನ್ನು ಕಡಮೆ ಮಾಡಿದಲ್ಲಿ ಬೇರೆ ಕಡೆಯಲ್ಲಿಯೂ ಫೀಜು ಕಡಮೆ ಮಾಡಿಯೇ ಮಾಡಬೇಕಾಗುತ್ತದೆ. ಆದ್ದರಿಂದ ಸರ್ಕಾರದ ಆರ್ಥಿಕ ದೃಷ್ಟಿಯಿಂದ ಆ ರೀತಿ ಎಲ್ಲ ಕಡೆಯಲ್ಲಿಯೂ ಕಡಿಮೆ ಮಾಡುವುದಕ್ಕೆ ಸಾಧ್ಯವಿದ್ದರೆ ಈ ಪ್ರಯತ್ನಕೆ ಗಮನಕೊಡಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಶಿರಾ).—ಅಧ್ಯಕ್ಷರೇ, ಈಗನಾಲ್ಕು ಜನ ನನ್ನ ಮಾನ್ಯ ಸ್ನೇಹಿತರುಗಳು ಮಾತನಾಡಿದ್ದಾರೆ. ನಾನು ಒಂದು ವಿಷಯವನ್ನು ಮಾತ್ರ ಬಹಳ ದುಃಖದಿಂದ ಹೇಳಬೇಕಾಗಿದೆ. ಫೀಜು ಹೆಚ್ಚಾಯಿತು-ಕಡಮೆಯಾಯಿತು ಎಂಬ ವಿಷಯಬೇರೆ. ಮೂರು ದಿನಗಳಿಂದ ಚಳವಳಿ ಹೂಡಿದ ವಿದ್ಯಾರ್ಥಿಗಳು ದೇಶದ ಮುಖ್ಯಮಂತ್ರಿಗಳ ಕೈಯಲ್ಲಿ ಎಷ್ಟು ಶಿಸ್ತಿನಿಂದ ಸಂಯಮದಿಂದ ನಡೆದುಕೊಂಡರೆಂಬ ಸರ್ಟಿಫಿಕೇಟ್ ಪಡೆಯಕೊಂಡಂಥವರು, ನಿನ್ನೆ ದಿವಸ ಅವರು ಶಿವಮೊಗ್ಗಕ್ಕೆ ಹೋದಾಗ ಅವರ ಕಾರಿಗೆ ಕಲ್ಲು ಬೀರಿಸಿದ್ದು ನೋಡಿದರೆ ವಿದ್ಯಾರ್ಥಿ ವೃಂದಕ್ಕೇ ಕಳಂಕ ಬಂದಿತೇ ಎಂದು ಇವತ್ತು ಎಲ್ಲರ ಮನಸ್ಸನ್ನೂ ಕಲಕಿದೆ. ಇದು ವಿದ್ಯಾರ್ಥಿಗಳ ಮುಖಕ್ಕೆ ಬಣ್ಣ ಬಳಿದಂತಾಯಿತೇ ಹೊರತು ಇದರಿಂದ ವಿದ್ಯಾರ್ಥಿಗಳ ಗುಂಪಿನಲ್ಲಿ ಸೇರಿದ್ದ ಗೂಂಡಾಗಳಿಗಾಗಲೀ, ಪುಂಡು ಪೋಕರಿಗಳಿಗಾಗಲೀ ಏನೂ ಅವಮಾನವಾಗಲಿಲ್ಲ. ಆದ್ದರಿಂದ ಇಂಥ ಘಟನೆಗೆ ಕಾರಣಗಳೇನೇ ಇರಲಿ, ಸರ್ಕಾರದವರು ಮೊನ್ನೆತಾನೆ ವಿದ್ಯಾರ್ಥಿ ಪ್ರತಿನಿಧಿಗಳನ್ನು ಕುರಿತು ಈ ಬಗ್ಗೆ ತೀವ್ರವಾಗಿ ಯೋಚನೆಮಾಡಿ ಸೂಕ್ತ ಮಾರ್ಗವನ್ನು ಕಂಡುಹಿಡಿಯುತ್ತೇವೆ ಎಂದು ಹೇಳಿದಾಗ, ವಿದ್ಯಾರ್ಥಿಗಳು ಮಂತ್ರಿಗಳು ಕೊಟ್ಟ ಆಶ್ವಾಸನದ ಮೇಲೆ ಮುಷ್ಕರವನ್ನು ನಿಲ್ಲಿಸುವುದಕ್ಕೆ ತೀರ್ಮಾನ ತೆಗೆದುಕೊಂಡಿದ್ದಂಥಾದ್ದನ್ನು, ಶಿವಮೊಗ್ಗದವರು ನೋಡಿಯೋ ಅಥವಾ ನೋಡದೆಯೋ ಮುಷ್ಕರ ನಡೆಸಿದಾಗ, ಮೈಸೂರಿನಲ್ಲಿ ಅತ್ಯಂತ ಗಾಂಭೀರ್ಯದಿಂದ ನಡೆದಿದಂಥ ಮುಷ್ಕರ ಶಿವಮೊಗ್ಗದಲ್ಲಿ ಆದ ಪ್ರಸಂಗ ಮುಂಚೆ ಆಗಿದ್ದ ಸತ್ಪರಿಣಾಮವನ್ನು ಹಾಳುಮಾಡಿತಲ್ಲಾ ಎಂದು ನನ್ನ ಮನಸ್ಸಿಗೆ ನೋವಾಗಿದೆ. ಆದರೂ ಸರ್ಕಾರದವರು ಇದನ್ನು ಮನಸ್ಸಿಗೆ ಹಚ್ಚಿಕೊಳ್ಳಬಾರದು. ಸರ್ಕಾರದವರು ಎಷ್ಟೇ ರೋಚ್ಚಿಗೆದ್ದ ವಿದ್ಯಾರ್ಥಿ ವೃಂದವನ್ನು ಬೊಗ್ಗು ಬಡಿಯುವುದಕ್ಕೆ ಶಕ್ತರಾಗಿದ್ದರೂ, ಜನಾಭಿಪ್ರಾಯಕ್ಕೆ ಮನ್ನಣೆಕೊಟ್ಟು ನಡೆದುಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಆದರೆ ಒಂದು ವಿಚಾರ ಶ್ರೀ ಮಾನ್ ಕಂಠಿಯವರಿಗೆ ನಾನು ಅತಿ ವಿನಯದಿಂದ ಹೇಳಬಯಸುತ್ತೇನೆ. ಅವರು ಸಲಸಲಕ್ಕೂ ಹೇಳಿಕೆ, ಕೊಡುವುದನ್ನು ನಿಲ್ಲಿಸಿದರೆ ಶ್ರೀಮಾನ್ ನಿಜಲಿಂಗಪ್ಪನವರಿಗೆ ಬರುವಂಥ ತಲೆನೋವು ತಪ್ಪುತ್ತದೆ. ಶ್ರೀ ಮಾನ್ ನಿಜಲಿಂಗಪ್ಪನವರು ಇನ್ನೂ ಸ್ವಲ್ಪಕಾಲ ಈ ರಾಜ್ಯದಲ್ಲಿ ಮುಖಂಡತ್ವ ಉಳಿಸಿಕೊಳ್ಳಬೇಕಾದರೆ ನನ್ನ ಅಭಿಪ್ರಾಯದಲ್ಲಿ ಅವರಿದನ್ನು ಮಾಡಬೇಕು. ಅವರಿಗೆ ಬರುವ ಕಷ್ಟಗಳೆಲ್ಲಾ ಈ ಒಬ್ಬರಿಂದ. ಆದ್ದರಿಂದ ದೇಶದಲ್ಲಿ ಜನತೆ ಹೇಳುವುದನ್ನು ಹೇಳುತ್ತಿದ್ದೇನೆ. ನೀವು ಸ್ವಲ್ಪ ವಿರಾಮ ತೆಗೆದುಕೊಳ್ಳುವುದು ಒಳ್ಳೆದು.

ಶ್ರೀ ಎಸ್. ಆರ್. ಕಂಠಿ.—ವಿರಾಮ ಬೇಕಾದರೆ ತೆಗೆದುಕೊಳ್ಳೋಣ; ಬೇಡವೆನ್ನುವುದಿಲ್ಲ. ನಾನು ವಿದ್ಯಾ ಖಾತೆಗೆ ಸಂಬಂಧಸಿದ್ದನ್ನು ಹೇಳುತ್ತಿದ್ದೇನೇ ಹೊರತು, ಊರಿನಲ್ಲಿರುವ ವಿಷಯದ ಮೇಲೆಲ್ಲಾ ಕಾರಬಾರು ಮಾಡುತ್ತಿಲ್ಲ.

ಶ್ರೀ ಸಿ. ಜೆ ಮುಕ್ಕಣ್ಣಪ್ಪ.—ನಾನು ಪ್ರಾರ್ಥನೆ ಮಾಡುವುದೇನೆಂದರೆ, ತಮಗೆ 102 ದಿನ ಮೈಸೂರಿನ ಮುಖ್ಯಮಂತ್ರಿಯಾಗಿದ್ದಿ 'ಗಜ ಸವಾರಿ ಮಾಡುವ ಯೋಗ ತಮಗಿತ್ತು; ಈಗ ಅದು ಹೋಯಿತು. ನಿಜಲಿಂಗಪ್ಪನವರಿಗೆ ರಾಜ್ಯ ಒಪ್ಪಿಸಿದ್ದಾಗಿದೆ. ಇನ್ನು ತಾವು ಹಿಂದೆ ಸಲಹೆ ಕೊಡುವುದನ್ನು ಬಿಟ್ಟು ಅವರನ್ನು ಅವರಷ್ಟಕ್ಕೆ ಬಿಟ್ಟು ಬಿಡಿ. ಏಕೆಂದರೆ ಈಗ ಎಲ್ಲೆಲ್ಲೂ ಗಡಿಬಿಡಿ ಕೋಲಾಹಲ!

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಈ ರೀತಿಯಲ್ಲಿ argument ಮುಂದುವರಿಸುವುದು ಸೂಕ್ತವಲ್ಲ. ಅದು ಬೇಡ.

Mr. SPEAKER.—We are having a discussion for a short duration. Are you diverting to extraneous things ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದನ್ನು ಹೇಳುವುದಿಲ್ಲ. ಈಗ ಫೀಜನ್ನು ಈ ರೀತಿ ಏರಿಸುವುದು ಸರಿಯಲ್ಲ. ಇದು ದೇಶದ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಈ ವಿಚಾರದಲ್ಲಿ ಶ್ರೀ ಮಾರ್ಗ ಅಣ್ಣಾರಾಯರು ಹೇಳಿದ್ದದನ್ನು ನಾನು ಸಂಪೂರ್ಣವಾಗಿ ಸಮರ್ಥನೆ ಮಾಡುತ್ತೇನೆ. ದೇಶದಲ್ಲಿ ತೆರಿಗೆಗಳನ್ನು ಹಾಕಬೇಕು, ನಾವು ದೇಶವನ್ನು ಉತ್ತಮ ಸ್ಥಿತಿಗೆ ತರಬೇಕು ; ಈ ಪ್ಲಾನುಗಳು, ಸ್ಕೀಮುಗಳು ಎಲ್ಲವೂ ಜನತೆಗೆ ಸೇರಿದ್ದು ; ಇಡೀ ದೇಶಕ್ಕೆ ಸೇರಿದ್ದು ಎಂದು ಕಲ್ಕತ್ತಾದಲ್ಲಿ ನಮ್ಮ ಪ್ರಧಾನ ಮಂತ್ರಿ ನೆಹ್ರೂರವರು ಹೇಳುವುದನ್ನು ಎಲ್ಲರೂ ಒಪ್ಪುತ್ತಾರೆ, ಈ ದೇಶದಲ್ಲಿ ಯಾರೂ ಅಭಿವೃದ್ಧಿಕಾರ್ಯಗಳಿಗೆ ಅಡ್ಡಿಬರುವುದಿಲ್ಲ, ಅಡ್ಡಿ ಬರಕೂಡದು ; ಆದ್ದರಿಂದ ಟ್ಯಾಕ್ಸ್ ಹಾಕುತ್ತೇವೆ ಎಂದು ಸರ್ಕಾರದವರು ಹೇಳುತ್ತಿದ್ದಾರೆ. ಆದರೆ ನಾನು ಸರ್ಕಾರವನ್ನು ಕೇಳುವುದು ಇದರಿಂದ ನಿಮಗೆ ಬರುವ ಹಣವಾದರೂ ಎಷ್ಟು ? ಕೇವಲ 4 ಲಕ್ಷದ 83,000 ರೂಪಾಯಿಗಳು ದೇಶದಲ್ಲಿ ಇಂದು law and order ಗಾಗಿ ಖರ್ಚುಮಾಡುವ ಹಣವೆಷ್ಟು ? ಹಾಗೆ ಕೇಳಿದರೆ, ತಾವು ಹೇಳಬಹುದು ದೇಶದಲ್ಲಿ ಯಾವ ಕೆಲಸ ಮಾಡಬೇಕೆಂದರೂ ಒಂದು ಭಾಗವಲ್ಲ ಇನ್ನೊಂದು ಭಾಗದವರು ದಂಗೆ ಏಳುತ್ತಾರಲ್ಲಾ, ಅದಕ್ಕೆ ಬೇಕಾಗುವುದಿಲ್ಲವೇ ಎಂದು. ಆದರೆ, ತಾವು ಅದಕ್ಕೂ ಈ ವಿಷಯಕ್ಕೂ ಸಂಬಂಧ ಕಟ್ಟಬೇಡಿ. ಗಂಭೀರವಾಗಿ ಯೋಚನೆಮಾಡಿ. ಅವಸರ ಅವಸರವಾಗಿ ಮಾಡದೆ, ಕ್ರಮ ಕ್ರಮೇಣ. ಈ ಫೀಜನ್ನು ಜಾಸ್ತಿಮಾಡಬಹುದಾಗಿತ್ತಲ್ಲವೆ? ಹೀಗೆ 4 ವರ್ಷಗಳು ನೀವು ಈ ರಾಜ್ಯಭಾರದಲ್ಲಿರುವಿರಿ. ಇಷ್ಟು ವರ್ಷಗಳಲ್ಲಿ ಸ್ವಲ್ಪ ಸ್ವಲ್ಪವಾಗಿ ಹೆಚ್ಚು ಮಾಡಬಹುದಾಗಿತ್ತು. ಹಾಗೆಮಾಡದೆ, ಗುಲ್ಬರ್ಗದಲ್ಲಿ ಹಾಗೆಮಾಡಿದ್ದೆವು; ಮಂಗಳೂರಿನಲ್ಲಿ ಹೀಗಿತ್ತು ಎಂದು ಹೋರಾಡುವುದು ಸರಿಯಲ್ಲ. ಮಿಕ್ಕ ಎಲ್ಲ ಕಾನೂನುಗಳನ್ನು ಸಮನ್ವಯಮಾಡುವುದಕ್ಕೆ ಇನ್ನೂ ಕಾಲವಿದೆಯೆನ್ನುವವರು ವಿದ್ಯಾರ್ಥಿಗಳ ವಿಷಯದಲ್ಲಿ ಮಾತ್ರ ಇಷ್ಟುಬೇಗ ಹೊರಟು ಅವರನ್ನೇಕೆ ರೊಚ್ಚಿಗೆಬ್ಬಿಸಿದಿರಿ ? ಇದನ್ನು ತಾವು ಸ್ವಲ್ಪ ದೀರ್ಘವಾಗಿ ಆಲೋಚನೆಮಾಡಿ ಮಾಡಬೇಕಾಗಿತ್ತು. ನಾನು ಈಹೊತ್ತು ಏನಾದರೂ ಒಂದು ವಿಷಯ ಮುಚ್ಚುಮರೆಯಿಲ್ಲದೆ ಹೇಳುವುದಾದರೆ, ಇಂದು ಮುಖ್ಯ ಮಂತ್ರಿಯಾಗಿ ಇಲ್ಲಿ ಕುಳಿತಿದ್ದಾರಲ್ಲಾ ಆ ನಿಜಲಿಂಗಪ್ಪನವರೇ ಈ ಬಾಧೆಯಿಲ್ಲದೆ ಮುಂದೆ ಎಂದೆಂದಿಗೂ ಮಂತ್ರಿಗಳಾಗಿರಬೇಕೆಂದು ಹೇಳುವವರಲ್ಲಿ ನಾನೂ ಒಬ್ಬ. ಆದರೆ ನೀರನ್ನು ಕೆಸರು ಮಾಡಿ ಯಾರೂ ಕುಡಿಯುವುದಕ್ಕೆ ಅಯೋಗ್ಯವಾಗಿ ಮಾಡಬಾರದೆಂದು ಮಾತ್ರ ನಾನು ಕೇಳುತ್ತಿರುವುದು. ಆದ್ದರಿಂದ ಶ್ರೀ ಕಂಠಿಯವರಿಗೆ ಈ ಕಷ್ಟಗಳೆಲ್ಲಾ ಬೇಡ ಈ ಹೊತ್ತು ಏನೇನೋ ಕಷ್ಟಗಳು ಬರುತ್ತಿವೆ ನೋಡಿ. ಈ ಅಧಿಕಾರವನ್ನೂ ಅವರಿಗೇ ನೋಡಿಕೊಳ್ಳಿ ಎಂದು ಕೊಟ್ಟುಬಿಡಿ. ಯಾರು ಇಂದು ಕನ್ನಡ ಜನವೆಲ್ಲಾ ಒಂದಾಗಬೇಕೆಂದು ಹೇಳುತ್ತಿದ್ದಾರೋ ಶ್ರೀ ನಿಜಲಿಂಗಪ್ಪನವರು ನಿಜವಾಗಿಯೂ ನಮ್ಮ ಕನ್ನಡದವರೆಲ್ಲಾ ಒಟ್ಟಿಗೆ ಶಾಂತಿಯಿಂದಿರಬೇಕೆಂದಿದ್ದರೆ ಈ ರಾಜ್ಯವನ್ನು ಎರಡು ಮಾಡಿಬಿಡಲಿ, ಒಂದು ಹಳೆಯ ಮೈಸೂರು ಇನ್ನೊಂದು ಮಿಕ್ಕ ಭಾಗ. ಆಗ ರಾಜ್ಯದಲ್ಲಿ ಈರೀತಿ ಹೆಚ್ಚು ಕಡಮೆ ಎನ್ನುವುದು ಹೋಗುತ್ತದೆ. ಅದನ್ನು ಮಾಡುವುದಕ್ಕಾಗಿದ್ದರೆ, ನಾನು ಹೇಳಿದಂತೆ ಹಂತ ಹಂತದಲ್ಲಿ ಜಾಸ್ತಿಮಾಡಲಿ. ಏಕೆಂದರೆ, ಸರ್ಕಾರದವರು ರಾಜ್ಯದಲ್ಲಿ ಏನೇ ಬದಲಾವಣೆಗಳನ್ನು ಮಾಡಬೇಕಾದರೆ ನಿಧಾನವಾಗಿ ಮಾಡಬೇಕು. ಒಂದು ಆರ್ಡರ್ ಹೊರಡಿಸಿದರೆ ಅದರ ಪರಿಣಾಮಗಳು ಏನೆಂಬದನ್ನು ಯೋಚನೆಮಾಡಿ ಮಾಡಬೇಕು. ಆತುರ ಆತುರವಾಗಿ ಏನನ್ನೂ ಮಾಡ ಬೇಡಿ. ಇಂದು ಶಿವಮೊಗ್ಗದಲ್ಲಿ ನಡೆದಿರುವ ಘಟನೆಯಿಂದ ಶ್ರೀಮಾನ್ ನಿಜಲಿಂಗಪ್ಪನವರಿಗೆ ನೋವಾಗಿದ್ದರೂ ಅದನ್ನು ಅವರು ಮನಸ್ಸಿನಲ್ಲಿಟ್ಟುಕೊಳ್ಳಬಾರದು. ಈಗಲೂ ಪರಿಸ್ಥಿತಿ ಮಿರಿಲ್ಲ. ವಿದ್ಯಾರ್ಥಿಗಳಿಗೆ ತಮ್ಮ ಮುಷ್ಕರವನ್ನು withdraw ಮಾಡಿ ಎಂದು ಹೇಳಿ ತಿಳಿಯಾದ ಸನ್ನಿವೇಶದಲ್ಲಿ ಯೋಚನೆಮಾಡಿ ಈಗ ಹಾಕಿರುವ ಫೀಜನ್ನು ಹಂತ ಹಂತದಲ್ಲಿ ಮಾಡಬೇಕೆಂದು ಹೇಳಿ ನಾನು ಸೂಚಿಸಿದಂತೆ ಎರಡು ಕನ್ನಡದ ಪ್ರಾಂತ್ಯಗಳನ್ನು ರಚಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಎಂ. ದೇವ್.—ನಾನು ಒಟ್ಟಿನಲ್ಲಿ ಹೇಳುವುದಿಷ್ಟೆ. ಈ ದಿವಸ ದೇಶದ ಮುಂದಿರುವ ಸಮಸ್ಯೆ ಬಹಳ ಗಂಭೀರವಾದ್ದಾಗಿದೆ. ಅದಕ್ಕೆ ತಕ್ಕಹಾಗೆ ಇದರ ಮೇಲೆ ಮಾತನಾಡಿದ ಮಾನ್ಯ ಸದಸ್ಯರೆಲ್ಲರೂ ಬಹಳ ಜವಾಬ್ದಾರಿಯುತರಾಗಿ ಮಾತನಾಡಿದ್ದಾರೆ. ಮಾನ್ಯ ಸದಸ್ಯರು ಕೆಲವರು ಹೇಳಿದಂತೆ ವಿದ್ಯಾರ್ಥಿಗಳಿಗೆ ಫೀಜನ್ನು ಜಾಸ್ತಿ ಮಾಡದೆ ಇರಬೇಕಾದರೆ, ನಮಗೆ ಬೇಕಾಗಿರುವ ಹಣವನ್ನು ಎಲ್ಲಿಂದಲಾದರೂ ಹೊಂಚಿಯೇ ಹೊಂಚಬೇಕಾಗುತ್ತದೆ. ಇದು ನಮ್ಮ ಮುಂದಿರುವ ಸಮಸ್ಯೆ.

ಈದಿವಸ ತಾವು ಎಷ್ಟು ವಿದ್ಯಾ ಶುಲ್ಕವನ್ನು ಜಾಸ್ತಿಮಾಡಿದ್ದೀರೋ ಅದನ್ನು ಯಾರೂ ಕಡಿಮೆ ಮಾಡಬೇಕೆಂದು ಬಹುಶಃ ಕೇಳುತ್ತಿರಲಿಲ್ಲ. ಕೇಳಕೂಡದಾಗಿತ್ತು. ಆದರೂ ಏಕೆ ಕೇಳುತ್ತಿದ್ದಾರೆಂದರೆ ನೀವು ಯಾವಾಗ ನೋಡಲಿ ಸಮತಾವಾದ ತತ್ವವನ್ನು ಅನುಷ್ಠಾನಕ್ಕೆ ತರುತ್ತೇವೆಂದು ಹೇಳುತ್ತಿದ್ದೀರೇ ಹೊರತು ಕಾಯಾವಾಚಾಮನಸಾ ಆಚರಿಸುತ್ತಿಲ್ಲ. ಕಾಯಾವಾಚಾಮನಸಾ ಪ್ರಪಂಚದಲ್ಲಿ ಯಾವ ಯಾವ ದೇಶದಲ್ಲಿ ಸಮತಾವಾದವನ್ನು ಅನುಸರಿಸುತ್ತಿದ್ದಾರೆಯೋ ಅಲ್ಲಿ ಪರಿಸ್ಥಿತಿ ಯಾವರೀತಿಯದೆಯೆಂಬುದನ್ನು ತಾವು ಸ್ವಲ್ಪ ಕಣ್ಣು ಬಿಟ್ಟು ನೋಡಿ. ಆ ದೇಶಗಳಲ್ಲಿ ಬರಬರುತ್ತಾ ಫೀಜುಗಳು ಇಳಿಯುತ್ತಾ ಬರುತ್ತಿರುತ್ತವೆ. ಹಲವು ವರ್ಷಗಳಲ್ಲೇ ಫೀಜನ್ನು ಪೂರ್ತಿ ಮನ್ನಾ ಮಾಡಿ ವಿದ್ಯಾರ್ಥಿಗಳು ಚೆನ್ನಾಗಿ ಓದಲಿ ಎಂದು ಸ್ಟೈಫಂಡ್ ಕೊಡುವುದಕ್ಕೆ ಶುರು ಮಾಡಿರುತ್ತಾರೆ. ಆದ್ದರಿಂದ ಸಮತಾವಾದ ತತ್ವವನ್ನು ಕಾಯಾವಾಚಾಮನಸಾ ಯಾವ ಯಾವ ದೇಶಗಳು ಕಾರ್ಯತಃ ಪ್ರತಿಪಾದಿಸುತ್ತವೆಯೋ ಅಂಥಾ ದೇಶಗಳಲ್ಲಿ ಫೀಜು ಬರಬರುತ್ತಾ ಇಳಿಮುಖವಾಗುವುದು ಸಹಜ. ಕೊನೆಗೆ ಅಂಥ ದೇಶಗಳಲ್ಲಿ ಯಾವ ಪರಿಸ್ಥಿತಿ ಬರುತ್ತದೆಂದರೆ, ಸದ್ಯ ಹುಡುಗರು ಒಂದು ಓದಿದರೆ ಸಾಕು; ಸ್ಟೈಫಂಡ್ ಬೇಕಾದರೆ ಕೊಡುತ್ತೇವೆ, ಫಸ್ಟ್‌ಕ್ಲಾಸ್ ಹೊಡೆದರೆ ಹುಡುಗರಿಗೆ ಶುಲ್ಕ ಕೂಡ ಕೊಡಲು ಸಿದ್ಧ ಎನ್ನುವ ಸ್ಥಿತಿ ಬರುತ್ತಿದೆ. ಏತಕ್ಕೆಂದರೆ ಆದಾಯ ಮೂಲಗಳಾದ ಕೈಗಾರಿಕೆ ಮತ್ತು ನೀರಾವರಿ ಕೆಲಸಗಳು ಸರ್ಕಾರದ (Public Sector) ಕೈಯಲ್ಲಿರುತ್ತವೆ.

ಇನ್ನು ನಾವು ಹಳೆಯ ಮೈಸೂರಿನ ಸಮಾಜವಾದ ರೀತಿಯ ಆರ್ಥಿಕ ಅಭಿವೃದ್ಧಿಯನ್ನು ನೋಡಿದರೆ

(ಶ್ರೀ ಪಿ. ಎಂ. ದೇವ್)

ಕಾಣುತ್ತದೆ. ಹಿಂದೆ ಬೇಕಾದಷ್ಟು ಕಾಲೇಜುಗಳನ್ನು ಕಟ್ಟಿಸಿದರು. ಹುಡುಗರೇ ಇರಲಿಲ್ಲ. ಬನ್ನಿ. ಸ್ಕಾಲರ್‌ಷಿಪ್ ಕೊಡುತ್ತೇವೆ. ಚೆನ್ನಾಗಿ ವಿದ್ಯಾಭ್ಯಾಸ ಮಾಡಿ ಎಂದು ಹೇಳುತ್ತಿದ್ದರು. ಎಂತಹ ಬಡವನಾದರೂ ಸಹ ಸ್ಕೂಲ್ ಫೀಸನ್ನು ಇಳಿಸಬೇಕೆಂದು ಕೇಳುವುದಕ್ಕೆ ಹೋಗುತ್ತಿರಲಿಲ್ಲ. ಈ ವಿಷಯವನ್ನು ಸರ್ಕಾರದವರು ಮತ್ತು ನಾವು ಬಹಳ ತೀವ್ರವಾಗಿ ಆಲೋಚನೆ ಮಾಡುವುದಲ್ಲದೆ ಬಹಳ ಭಾವಾತ್ಮಕವಾಗಿ ವಿಚಾರ ಮಾಡಬೇಕಾಗಿದೆ. ಇದಕ್ಕೆ ಮುಖ್ಯವಾಗಿ ದುಡ್ಡು ಬೇಕು. ಈಗ ಫೀಸ್ ಇಳಿಸುವುದಕ್ಕೆ ಆಗಲೀ ಅಥವಾ ಏರಿಸುವುದಕ್ಕಾಗಲೀ ಏನು ಮಾಡಬೇಕೆಂಬುದನ್ನು ಸರ್ಕಾರದವರು ಯೋಚಿಸಿ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿ ಪಡಿಸುವುದಕ್ಕೆ ಸರಿಯಾದ ಒಂದು ಪ್ಲಾನನ್ನು ಹಾಕಿಕೊಳ್ಳಬೇಕು. ಅದನ್ನು ಕೂಡಲೇ ಕಾರ್ಯಗತ ಮಾಡಬೇಕು. ಇದರಲ್ಲಿ ನಾನು ಕೊಡುವ ಸಲಹೆ ಇಷ್ಟೆ. ನಾವು ಯಾವುದೇ ಕೆಲಸ ಮಾಡುವಾಗ ಗಾಂಧಿ ನಡೆವಳಿಕೆ ಆಧಾರದಮೇಲೆ ಅದನ್ನು ಮಾಡವಿದ್ದರೆ ಖಂಡಿತವಾಗಿ ನಮಗೆ ಒಳ್ಳೆಯ ಹೆಸರು ಬರುವುದಿಲ್ಲ. ನೆರವೇರುವುದೂ ಇಲ್ಲ. ಆದ್ದರಿಂದ ಈಗ ಏರಿಸಿರತಕ್ಕ ಸ್ಕೂಲ್ ಫೀಸನ್ನು ನಾಳೆ ಯಾರೀತಿಯೇ ಆಗಲೀ ಹೆಚ್ಚಿಗೆ ಮಾಡದೆ ಹಳೆಯ ಫೀಸನ್ನೇ ಇಡಬಹುದು ಎಂದು ನನಗನ್ನಿಸುತ್ತದೆ. ಏಕೆಂದರೆ ನಾನು ನನಗಿಂತಲೂ ಹೆಚ್ಚಾಗಿ ಅನೇಕ ಇಲ್ಲಿನ ಮಾನ್ಯ ಸದಸ್ಯರು ಗಾಂಧೀಜಿಯವರನು ಮಾತನಾಡುವುದರಲ್ಲಿ ಮೀರಿಸುತ್ತಾರೆ. ಸಾಹಿತ್ಯ ಬರೆಯುವುದರಲ್ಲಿಯೂ ಮೀರಿಸುತ್ತಾರೆ. ಆದರೆ ಒಂದು ವಿಷಯದಲ್ಲಿಮಾತ್ರ ಗಾಂಧೀಜಿಯವರನ್ನು ಯಾರೊಬ್ಬರೂ ಮೀರಿಸುವುದಕ್ಕಾಗುವುದಿಲ್ಲ. ಅದು ನುಡಿದಂತೆ ನಡೆಯುವುದು. ಅವರು ಮಾತನಾಡಿದ ರೀತಿ ಕೆಲಸಮಾಡಿ ತೋರಿಸುತ್ತಿದ್ದರು. ಆ ಒಂದು ದೃಷ್ಟಿಯಲ್ಲಿ ನಾವು ಕೆಲಸಮಾಡಬೇಕು ಅದರ ಜೊತೆಗೆ ಸತ್ಯ ಪಿಪಾಸೆ ಮುಖ್ಯ. ಈ ಸಭೆಯಲ್ಲಿ ಆಡಿದ ವಿಚಾರಗಳನ್ನು ನೋಡಿದರೆ ಸರ್ಕಾರದಲ್ಲಿ ನನಗೆ ಯಾವ ಸಂದೇಹವೂ ಇಲ್ಲ. ನನಗೆ ಜ್ಞಾಪಕವಿದೆ. ಶ್ರೀಮಾನ್ ಹುಚ್ಚೇಗೌಡರು ೧೫-೨೦ ಕೋಟಿ ಇದರಲ್ಲಿ ಮಿಗಿಸಬಹುದಾಗಿತ್ತು ಎಂಬುದಾಗಿ ಒಂದು ಮನೆತನಸ್ಥರ ಮಾತನ್ನು ಹೇಳಿ ತೋರಿಸಿಕೊಟ್ಟಿದ್ದಾರೆ. ಹಣ ಅಕ್ರಮವಾಗಿ ಕಾಣೆಯಾಗಿದೆ. ಅದೇನಾದರೂ ರುಜುವಾತಾಗದೆ ತಪ್ಪು ಇದ್ದರೆ ಬೇಕಾದರೆ ನನ್ನಮೇಲೆ ಕ್ರಮ ತೆಗೆದುಕೊಳ್ಳಿ ಎಂದಿದ್ದಾರೆ. ಏಕೆಂದರೆ ಈ ಅಸೆಂಬ್ಲಿ ಬಹಳ ಬಲಿಷ್ಠವಾದದ್ದು, ಏನು ಬೇಕಾದರೂ ಮಾಡಬಹುದು ಎಂದು ಸರ್ಕಾರದವರು ಮಾಡಬಾರದು. ಇದಕ್ಕೂ ಒಂದು ಲಿಮಿಟ್ ಇದೆ. ಆದ್ದರಿಂದ ಎಲ್ಲಿ ಕೆಲಸವಾಗದಿದ್ದರೆ ಇಲ್ಲಿ ಪ್ರತಿಯೊಬ್ಬ ಮಾನ್ಯ ಸದಸ್ಯರು ಜನಗಳ ಹತ್ತಿರಹೋಗಿ ಅಲ್ಲಿಂದ ಒಂದು ನಿಯೋಗ ಬರುವುದು ಈ ಒಂದು ವ್ಯವಸ್ಥೆ ಮಾಡಬೇಕಾಗಿದೆ. ಇದುವರೆಗೂ ಈ ಸಭೆಯಲ್ಲಿ ಚರ್ಚೆಯಾಗಿರುವುದನ್ನು ನೋಡಿದರೆ ಕೋಟ್ಯಾಂತರ ರೂಪಾಯಿಗಳನ್ನು ಈ ಬಾಬಿನಲ್ಲಿ ಮಿಗಿಸುವಂತಹ ಧೋರಣೆಯನ್ನು ಅದರಲ್ಲೂ ವಿರೋಧಪಕ್ಷದವರು ಬಹಳ ಮಂದಿ ಸಲಹೆ ಕೊಟ್ಟಿದ್ದಾರೆ. ಆ ವಿಚಾರದಲ್ಲಿ ಸರ್ಕಾರದವರು ತಕ್ಷಣ ತನಿಖೆಮಾಡಿ ಏನಾದರೂ ಕ್ರಮ ನಡೆಸಿದ್ದೇ ಆದರೆ ಹೆಚ್ಚು ವಿದ್ಯಾಶುಲ್ಕದಿಂದ ಕೇವಲ ನಾಲ್ಕೈದು ಲಕ್ಷ ರೂಪಾಯಿಗಳು ಜುಜುಬಿ ಉಳಿಯುವುದು ಹೋಗಿ ಇದರ ಐವತ್ತರಷ್ಟು ಉಳಿಯುತ್ತದೆ. ಯಾವಾಗಲೂ ಸಾಮಾನ್ಯವಾಗಿ ಒಂದು ದೇಶ ಉಳಿಯಬೇಕಾದರೆ, ಅಥವಾ ಮುಂದುವರಿಯಬೇಕಾದರೆ ನಾಲ್ಕಾರು ಬಾಬುಗಳಪೈಕಿ ಮುಖ್ಯವಾದುದು ವಿದ್ಯಾಭ್ಯಾಸ ಒಂದು. ಇದಕ್ಕೆ ಟಾಪ್ ಪ್ರೈಯಾರಿಟಿ ಸಿಗಬೇಕು. ಅದರಲ್ಲೂ ಇಂಜನಿಯರಿಂಗ್ ಕಾಲೇಜಿನವರು ಹೆಚ್ಚು ವಿದ್ಯಾಭ್ಯಾಸ ಮಾಡುವುದಕ್ಕೆ ಸರ್ಕಾರದವರು ಆದಷ್ಟು ಕುಮ್ಮಕ್ಕು ಕೊಡಬೇಕು. ಈಗ ಅರ್ಧ ಪ್ರೈವೇಟ್ ಸೆಕ್ಟರ್, ಇನ್ನು ಅರ್ಧ ಪಬ್ಲಿಕ್ ಸೆಕ್ಟರ್‌ಗಳನ್ನಾಗಿ ಮಾಡಿದ್ದಾರೆ. ಹೀಗೆ ಎಕಾನಮಿ ಇರುವುದರಿಂದ ನಮ್ಮ ಸರ್ಕಾರದ ಕೈಲಿ ಅರ್ಧ-ಆದಾಯ ಮೂಲಗಳು ಮಾತ್ರ ಇವೆ. ಅವಕ್ಕೋಸ್ಕರವೇ ಶಾಲೆಗಳ ಖರ್ಚಿನಲ್ಲಿ ಅರ್ಧವನ್ನೇ ಖಾಸಗೀಯವರು ಖರ್ಚು ಇಟ್ಟು ನಡೆಸುವಹಾಗೆ ಮಾಡಬೇಕು. ಏಕೆಂದರೆ ಆದಾಯಮೂಲ ಅಲ್ಲಿ ಹೋಗಿದೆ. ಪೂರ್ವದಲ್ಲಿ ಹಳೆಯ ಮೈಸೂರಿನವರಿಗೆ ಕಮ್ಯೂನಿಸ್ಟ್ ಅಥವಾ ಬಂಡವಾಳ ಷಾಹಿಗಳ ತತ್ವಗಳು ಗೊತ್ತಿಲ್ಲದೇ ಇರಬಹುದು. ಆದರೆ ಎಕಾನಮಿ ಪ್ರಶ್ನೆ ಮಾತ್ರ ಸಮತಾವಾದ ಸಮಾಜ ತತ್ವದಲ್ಲಿದ್ದುದರಿಂದ ಕೇವಲ 10–20 ಜನಗಳಿಗೆ ಒಬ್ಬೊಬ್ಬ ಉಪಾಧ್ಯಾಯರನ್ನು ಇಡುವ ಒಂದು ಯೋಗ್ಯತೆ ಇತ್ತು. ಆಗ ಸ್ವಲ್ಪಮಟ್ಟಿಗೆ ಹಣದ ಮೂಲ ಸರ್ಕಾರದಲ್ಲಿಯೇ ಇರುತ್ತಿತ್ತು. ಆದಾಯವನ್ನು ಪಬ್ಲಿಕ್ ಸೆಕ್ಟರ್‌ನಿಂದ ಜಾಸ್ತಿ ಮಾಡಿ. ಹಾಗೆ ಮಾಡಿ ಇವತ್ತು ಸ್ಕೂಲ್ ಫೀಸನ್ನು ಜಾಸ್ತಿಮಾಡದೆ ತಕ್ಷಣ ಕಮ್ಮಿ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಈಗ ೨೦೦ ಕೋಟಿ ರೂಪಾಯಿಗಳು ಸಾಲ ಇರುವುದಕ್ಕೆ ಬದಲಾಗಿ ಅದನ್ನು ಸ್ವಲ್ಪ ಮಟ್ಟಿಗೆ ಕಡಮೆ ಮಾಡುವುದಕ್ಕೆ ದಾರಿಯಾಗುತ್ತದೆ. ಇದನ್ನು ನಾನು ಬಹಳ ಜವಾಬ್ದಾರಿಯುತನಾಗಿ ಮಾತನಾಡಿದ್ದೇನೆ. ಮೂಲ ತತ್ವ ಇದರಲ್ಲಿ ಏನಿದೆ ಎಂಬುದನ್ನು ತಿಳಿದಿದ್ದರೂ ಒಂದು ಪರಿಹಾರವನ್ನು ಕಂಡುಹಿಡಿಯಬೇಕೇ ಹೊರತು ಸುಮ್ಮನೇ ಹಾಗೆಯೇ ಬಿಡುವ ಪ್ರಶ್ನೆಯಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ನಾಗರತ್ನಮ್ಮ ಹಿರೇಮಠ್ (ಗಾಂಧಿನಗರ).—ಸನ್ಮಾನ್ಯ ಅಧ್ಯಕ್ಷರೇ, ಇದುವರೆಗೂ ಅನೇಕ ನಮ್ಮ ಸೋದರರು ಮಾತನಾಡಿದ್ದಾರೆ. ಕೆಲವು ಸದಸ್ಯರು ಶಿವಮೊಗ್ಗಾದಲ್ಲಿ ನಡೆದ ಒಂದು ಘಟನೆಯ ವಿಚಾರವಾಗಿ ಮಾತನಾಡುತ್ತಾ ಅವರ ಮನ ನೊಂದಂತೆ ಕೆಲವು ವಿಷಯಗಳನ್ನು ಹೇಳಿದರು. ಅಲ್ಲಿ ಕೇವಲ ನೂರು ಜನ ವಿದ್ಯಾರ್ಥಿಗಳು ಸೇರಿದ್ದರೆ ಮತ್ತೆ ನೂರಾರು ಸಂಖ್ಯೆಯಲ್ಲಿ ಇತರೇ ಜನಗಳು ಅವರ ಜೊತೆಯಲ್ಲಿ ಸೇರಿಕೊಂಡು ಇಂತಹ ಗಲಭೆಗೆ ಅವಕಾಶ ಮಾಡುತ್ತಿದ್ದಾರೆ. ಅಲ್ಲಿನ ವಿದ್ಯಾರ್ಥಿಗಳ ಬಗ್ಗೆ ಸರ್ಕಾರ ಸಹಾನುಭೂತಿ ತೋರಿಸುತ್ತಿಲ್ಲವಲ್ಲಾ ಎಂಬುದಾಗಿ ಮತ್ತೊಬ್ಬ ಸದಸ್ಯರು ಹೇಳಿದರು. ನಾನು ಕೇಳುವುದಿಷ್ಟೆ. ಇಂತಹ ಪರಿಸ್ಥಿತಿಯನ್ನು ಹೊಂದಿರತಕ್ಕ ಉತ್ತರ ಕರ್ನಾಟಕದಲ್ಲಿರತಕ್ಕ ಮಕ್ಕಳು ಮಕ್ಕಳಲ್ಲವೇ ! ಅಲ್ಲಿಯ ಮಕ್ಕಳಿಗೂಕೂಡ ಇದೇರೀತಿ ಫೀಸನ್ನು ಕಡಮೆ ಮಾಡಬೇಕೆಂದು ಕೇಳುವುದಕ್ಕೆ ಯಾವ ಸದಸ್ಯರಿಗೂ ದಯಬರಲಿಲ್ಲವೇ ಎಂಬುದಾಗಿ ನಾನು ಪ್ರಶ್ನೆ ಮಾಡುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅದನ್ನೂ ಹೇಳಿದ್ದೇವೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಸರ್ಕಾರದವರು ಒಂದು ತೀರ್ಮಾನವನ್ನು ಕೈಗೊಳ್ಳಬೇಕಾದರೆ ಕಾಲ, ಸನ್ನಿವೇಶಗಳಿಗೆ ಹೊಂದಿಕೆಯಾಗಿರಬೇಕು. ದೂರದೃಷ್ಟಿಯಿಂದ ಕೂಡಿರಬೇಕು. ವ್ಯವಹಾರಿಕ ಮತ್ತು ರಾಜಕೀಯವಾಗಿ ಒಪ್ಪಿಕೊಳ್ಳುವಂತಿರಬೇಕು.

ಹೀಗಿದ್ದರೆ ಗೊಂದಲಕ್ಕೆ ಆಸ್ಪದವಿರುವುದಿಲ್ಲ. ಈ ಪ್ರಸಂಗದಲ್ಲಿ ವಿದ್ಯಾರ್ಥಿಗಳ ಶುಲ್ಕವನ್ನು ಪ್ರತ್ಯಕ್ಷ ಹೆಚ್ಚಿಸಿದ್ದು ಸರ್ಕಾರದ ರಾಜಕೀಯ ಜಾಣತನವಲ್ಲ. ಫೀಜು ಇಳಿಸುತ್ತೀರೋ ಇಲ್ಲವೋ ಹಿಂದೆ ಮಾಡಿದಂತೆ ಮಾಡೋಣವೋ ಎಂದು ವಿದ್ಯಾರ್ಥಿಗಳು ಮುಷ್ಕರ ಪ್ರಾರಂಭಿಸಿದ್ದೂ ದುಡುಕಿನ ಪ್ರಸಂಗವೆಂದೇ ಹೇಳಬೇಕಾಗುತ್ತದೆ. . ಒಬ್ಬ ಆಗುಂತಕ ಒಂದು ಮನೆಯ ಹತ್ತಿರ ಬಂದು ನಾಲ್ಕಾಣೆ ಕೊಡುತ್ತೀರೋ ಇಲ್ಲವೇ ಹಿಂದಿನ ಊರಿನಲ್ಲಿ ಮಾಡಿದಂತೆ ಮಾಡಲೋ ಎಂದು ಹೇಳಿದ. ಮನೆಯವರು ಏನುಮಾಡಿದೆ ಎಂದು ವಿಚಾರಿಸದೆ ನಾಲ್ಕಾಣೆ ಕೊಟ್ಟು ಹಿಂದಿನ ಊರಿನಲ್ಲಿ ಏನುಮಾಡಿದ್ದಪ್ಪಾ ಎಂದು ಕೇಳಿದರು. ಮಾಡುವುದೇನು ಬಂತು, ಯಾರೂ ದುಡ್ಡು ಕೊಡಲಿಲ್ಲ, ಉಪವಾಸವಿದ್ದೆ ಎಂದು ಹೇಳಿ ಹೊರಟುಹೋದ. ಈಗಿನ ಪ್ರಶ್ನೆಯಲ್ಲಿ ಸರ್ಕಾರದವರದೂ ಇದೇ ಧೋರಣೆ-ವಿದ್ಯಾರ್ಥಿಗಳದೂ ಇದೇ ಧೋರಣೆಯಾಗಿದೆ. ಈ ಹಿಂದೆ ವಿದ್ಯಾರ್ಥಿಗಳು ಏನು ಮಾಡಿದ್ದರೆಂಬುದೂ, ಸರ್ಕಾರದವರು ಏನು ಮಾಡಿದ್ದರೆಂಬುದೂ ಎಲ್ಲರಿಗೂ ಗೊತ್ತಿರುವ ವಿಚಾರ; ಇದರ ಕಷ್ಟ ನಷ್ಟ ಎಲ್ಲಾ ನಿರಪರಾಧಿಗಳಾದ ಪ್ರಜೆಗಳಿಗೆ ತಟ್ಟುತ್ತದೆ.

ಈಗ ಸರ್ಕಾರದವರು ಶುಲ್ಕ ಏರಿಸಿದ ಪ್ರಶ್ನೆ, ಮತ್ತು ವಿದ್ಯಾರ್ಥಿಗಳ ಮುಷ್ಕರದಪ್ರಶ್ನೆ--ಇವೆರಡೂ ಕುರಿ ತೋಳ ನ್ಯಾಯದಂತಿದೆ. ಸರ್ಕಾರ ಮತ್ತು ವಿದ್ಯಾರ್ಥಿಗಳಿಬ್ಬರೂ ತೋಳಗಳೇ. ತೆರಿಗೆ ಕೊಡುವ ಪ್ರಜೆಗಳು ಅಂದರೆ—ವಿದ್ಯಾರ್ಥಿಗಳ ತಂದೆತಾಯಿಗಳು ಮಾತ್ರ ಕುರಿಗಳು. ಇದರ ಕಷ್ಟನಷ್ಟ ತಟ್ಟುವುದು ಇವರಿಗೇನೇ.

ವಿದ್ಯಾ ಶುಲ್ಕವನ್ನು ಒಂದುವೇಳೆ ಹೆಚ್ಚಿಸುವ ಪ್ರಸಂಗ ಬಂದಾಗ ಪ್ರತ್ಯಕ್ಷವಾಗಿ ಹೆಚ್ಚಿಸಬಾರದು. ಪರೋಕ್ಷವಾಗಿರಬೇಕು. ವರ್ಷವರ್ಷವೂ ಇದನ್ನು ಹಂತಹಂತವಾಗಿ ಹೆಚ್ಚಿಸಿದ್ದರೆ ಸದ್ದಿಲ್ಲದೆ, ಗದ್ದಲವಿಲ್ಲದೆ ಹಣ ಹೆಚ್ಚಿಗೆ ದೊರೆಯುತ್ತಿತ್ತು. ಅಂತಹ ಮಾರ್ಗವನ್ನು ಸರ್ಕಾರದವರು ಕಂಡುಹಿಡಿದಿದ್ದರೆ ಬಹಳ ಚೆನ್ನಾಗಿತ್ತು. ಇಲ್ಲವೇ ಆರ್ಥಿಕ ಮುಗ್ಗಟ್ಟು ಎಂದು ಹೇಳಿ ಫ್ರೀಷಿಪ್ ಮತ್ತು ಸ್ಕಾಲರ್‌ಷಿಪ್‌ಗಳ ಕೊಡುವಿಕೆಯ ಪ್ರಮಾಣವನ್ನು ಕಡಿಮೆ ಮಾಡಬಹುದಾಗಿತ್ತು. ಫ್ರೀಷಿಪ್ ಮತ್ತು ಸ್ಕಾಲರ್‌ಷಿಪ್ ಕೊಡಬೇಕಾದರೆ ತಹಸೀಲ್‌ದಾರರಿಂದ ಇನ್‌ಕಂ ಸರ್ಟಿಫಿಕೇಟ್ ತರಬೇಕೆಂದು ಹೇಳುತ್ತಾರೆ. ನಾನು ಕೂಡ ೧೦-೧೨ ವರ್ಷಗಳಿಂದಲೂ ಆ ಸ್ಕಾಲರ್‌ಷಿಪ್ ಕಮಿಟಿಯಲ್ಲಿ ಇದ್ದೇನೆ. ಅನೇಕ ದೊಡ್ಡದೊಡ್ಡ ಶ್ರೀಮಂತರೇ ಹೋಗಿ ನಮಗೆ ಇಷ್ಟೇ ವರಮಾನವೆಂದು ಹೇಳಿಕೊಂಡು ತಹಸೀಲ್‌ದಾರರಿಂದ ವರಮಾನ ಸರ್ಟಿಫಿಕೇಟನ್ನು ತಂದು ಕಮಿಟಿಗೆ ಕೊಟ್ಟಿರುವುದನ್ನು ನೋಡಿದ್ದೇನೆ. ಅಂತಹವರ ಮಕ್ಕಳಿಗೆ ವಿಶೇಷವಾಗಿ ಸ್ಕಾಲರ್‌ಷಿಪ್ ಹೋಗುತ್ತಿದೆ. ಇದನ್ನು ಕೂಡಲೆ ಕಂಡುಹಿಡಿಯಲು ಸರ್ಕಾರದವರು ಏನಾದರೂ ಪ್ರಯತ್ನ ಮಾಡಬೇಕು. ಈರೀತಿ ಮಾಡದೆ ಪ್ರತ್ಯಕ್ಷ ಶುಲ್ಕ ಏರಿಸಿದ್ದು ಸರ್ಕಾರದ ಜಾಣತನದ ಮತ್ತು ದೂರದೃಷ್ಟಿಯ ಒಂದು ಅಭಾವವೆಂದೇ ಹೇಳಬೇಕಾಗುತ್ತದೆ. ''ಏನಕೇನ ಪ್ರಕಾರೇಣ ಪ್ರಸಿದ್ಧೋ ಪುರುಷೋಭವ'' ಎಂಬಂತೆ ಹೇಗಾದರೂ ಮಾಡಿ ಮುಂದೆ ಬರಬೇಕೆಂದು ಕಾದಿರುವ ಕೆಲವು ರಾಜಕೀಯ ಪಕ್ಷಗಳೂ ಮತ್ತು ಕೆಲವು ಮಹಾಶಯರುಗಳೂ ಇಂತಹ ಪ್ರಸಂಗಗಳನ್ನು ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸಿ ಇಲ್ಲದ ಗೊಂದಲಕ್ಕೆ ಆಸ್ಪದ ಕೊಡುತ್ತಾರೆ. ವಿದ್ಯಾರ್ಥಿಗಳ ವಯೋಮಾನ, ಅವರಿಗಿರುವ ಅನುಭವದ ಪರಿಮಿತಿ. ಇವುಗಳನ್ನು ಕುರಿತು ಹೇಳುವುದಾದರೆ ಅವರದು ಏನೂ ತಪ್ಪಿಲ್ಲ. ಸ್ವಲ್ಪ ದುಡುಕಿದರೆಂದು ಮಾತ್ರ ಹೇಳಬೇಕಾಗಿದೆ. ಹಿಂದೆ ಸ್ವಾತಂತ್ರ ಹೋರಾಟದಲ್ಲಿ ಪರಕೀಯರನ್ನು ಓಡಿಸಲು ನಾವು ಏನು ಕಲಿಸಿದ್ದೆವೋ ಅದನ್ನು ಈಗ ಸ್ವಕೀಯರಾದ ನಮ್ಮ ಮೇಲೆಯೇ ಉಪಯೋಗಿಸುತ್ತಿದ್ದಾರೆ. ಅಕ್ಕಪಕ್ಕದ ರಾಜ್ಯಗಳ ವಿದ್ಯಾ ಶುಲ್ಕಕ್ಕಿಂತಲೂ ನಮ್ಮದು ಪ್ರಮಾಣ ಕಡಿಮೆ ಎಂಬುದಾಗಿ ವಿದ್ಯಾ ಮಂತ್ರಿಗಳು ಈ ಸಂದರ್ಭದಲ್ಲಿ ಇಲ್ಲಿ ಹೇಳುತ್ತಿದ್ದಾರೆ.

4-30 P.M.

ವಿದ್ಯಾ ಮಂತ್ರಿಗಳ ಹೇಳಿಕೆ ಆರ್ಥಿಕ ಪರಿಸ್ಥಿತಿಯ ದೃಷ್ಟಿಯಿಂದ, ಆಡಳಿತದ ದೃಷ್ಟಿಯಿಂದ ಸರಿ ಇರಬಹುದು. ಆದರೆ ವಿದ್ಯಾರ್ಥಿಗಳ ದೃಷ್ಟಿ ಹಾಗಿರುವುದಿಲ್ಲ. ಒಬ್ಬ ಹುಡುಗ ಶಾಲೆಗೆ ಹೊರಟಾಗ ಮನೆಯಲ್ಲಿ ಕರ್ಜಿಕಾಯಿ ಮಾಡುತ್ತಿದ್ದರಂತೆ-ಶಾಲೆಗೆ ಹೋದರೂ ಅವನಿಗೆ ಅದೇ ಧ್ಯಾನ, ಮಾವಿನ ಗಿಡದಲ್ಲಿ ಯಾವ ಕಾಯಿ ಬಿಡುತ್ತದೆಂದು ಉಪಾಧ್ಯಾಯರು ಕೇಳಿದ್ದಕ್ಕೆ ಕರ್ಜಿಕಾಯಿ ಬಿಡುತ್ತದೆ ಸಾರ್–ಎಂದು ಹೇಳಿದನಂತೆ. ಇದರಂತೆ ಈಗ ಯಾವ ವಿದ್ಯಾರ್ಥಿಗಳನ್ನು ಕೇಳಿದರೂ ಶಾಲೆಯಲ್ಲಿ ಏನು ಕಲಿಯುತ್ತಿದ್ದೀರಿ ಎಂದರೆ ಮುಷ್ಕರ ಕಲಿಯುತ್ತಿದ್ದೇವೆ ಎಂದು ಹೇಳಿಬಿಡುತ್ತಾರೆ. ಅವರ ಗುರಿ ಒಂದೆ, ಎಂತೋ-ಹೇಗೋ ಅದೆಲ್ಲಾ ನಮಗೇಕೆ, ಫೀಜು ಕಡಿಮೆ ಆಗಲೇಬೇಕೆಂಬುದೇ ಅವರ ವಾದ ಮತ್ತು ಹಠ. ಸಾಮದಾನ ಭೇದದ ಮಾತು ಅವರಿಗೆ ಬೇಕಿಲ್ಲ ಅದೆಲ್ಲಾ ರಾಜಕೀಯದವರಿಗೆ ನಮಗೇಕೆ ಎಂದು ಹೇಳಿಬಿಡುತ್ತಾರೆ. ಒಂದು ಸಂತೋಷದ ವಿಚಾರ. ಮುಷ್ಕರ ತಾತ್ಕಾಲಿಕವಾಗಿ ನಿಲ್ಲಿಸಿದ್ದು ಅಭಿನಂದನೀಯವಾಗಿದೆ. ಏಕೆಂದರೆ ನಿನ್ನೆ ಶಿವಮೊಗ್ಗದಲ್ಲಿನ ಕಲ್ಲೆಸೆತ ಪೋಲೀಸರ ಬೆತ್ತದ ಪ್ರಹಾರದ ಸುದ್ದಿಗಳನ್ನು ಓದಿ ಮುಷ್ಕರ ಹಿಂಸಾ ಮಾರ್ಗಕ್ಕೆಲ್ಲಿ ತಿರುಗುತ್ತದೋ ಎಂಬ ಭೀತಿ ಇತ್ತು. ನಮ್ಮ ಪುಣ್ಯ-ಮುಷ್ಕರ ನಿಲ್ಲಿಸಿ ಸಂಧಾನಕ್ಕೆ ಅವಕಾಶ ಮಾಡಿಕೊಟ್ಟದ್ದಕ್ಕೆ ವಿದ್ಯಾರ್ಥಿಗಳಿಗೆ ನಮ್ಮೆಲ್ಲರ ಅಭಿನಂದನೆಗಳುಂಟು.

ಈಗ ಸರ್ಕಾರದವರು ಘನತೆಗೆ ಪ್ರಾಶಸ್ತ್ಯ ಕೊಡುವುದಕ್ಕಿಂತ ಶಾಂತಿ, ಶಿಸ್ತುಗಳ ದೃಷ್ಟಿಯಿಂದ ಒಂದು ತೀರ್ಮಾನಕ್ಕೆ ಬರುವುದು ಸೂಕ್ತವಾಗಿದೆ. ಈ ಪ್ರಶ್ನೆಯಲ್ಲಿ ಹುಡುಗರ ಜವಾಬ್ದಾರಿಗಿಂತ ಸರ್ಕಾರದವರ ಜವಾಬ್ದಾರಿ, ಹೊಣೆಗಾರಿಕೆ ತುಂಬಾ ಇದೆ. ಹುಡುಗರು ಹುಡುಗರೇ. ಏನೋ ಹುಡುಗರು ಮಾಡಿದರು. ಸರ್ಕಾರಕ್ಕಾದರೂ ಬುದ್ಧಿ ಬೇಡವೇ, ಎಂದು ಜನ ಸಾಮಾನ್ಯರು ಹೇಳಿಬಿಡುತ್ತಾರೆ. ಕಾರಣ ಸರಕಾರ ಇದಕ್ಕೊಂದು ಪರಿಹಾರವನ್ನು ಯೋಚಿಸಲೇ ಬೇಕು. ಹಿಂದೊಮ್ಮೆ ಪಂಡಿತ ನೆಹರೂಜಿಯವರು ಭರತಪುರದ ಜೈಲಿನಲ್ಲಿದ್ದಾಗ ಒಂದು ದಿನ ಮಳೆ ಬರುತ್ತಿದ್ದಾಗ ವರಾಂಡದಲ್ಲಿ ಕುಳಿತು ಎದುರಾಗಿದ್ದ ಒಂದು ನಾಯಿಯ ಚಲನ ವಲನಗಳನ್ನು ನಿರೀಕ್ಷಿಸುತ್ತಿದ್ದರು. ನಿರೀಕ್ಷಣೆ ಆದಮೇಲೆ ಆ ನಾಯಿ ಬಾಯಿ ಹೇಗೆ ಮುಕ್ಕಳಿಸುತ್ತದೆ ಎಂದು ಯೋಚಿಸುತ್ತಾ ಕುಳಿತು ಬಾಯಿ ಮುಕ್ಕಳಿಸಲಿಕ್ಕೆ ಬರುವುದಿಲ್ಲ ಎಂಬ ತೀರ್ಮಾನ ಮಾಡಿಕೊಂಡು ತಮ್ಮ ಕೋಣೆಗೆ ಹೊರಟು ಹೋದರು. ಹೀಗೆ ಸರ್ಕಾರವೂ ಸಹಾ ಒಂದು ತೀರ್ಮಾನಕ್ಕೆ ಬರಲೇಬೇಕು.

ಯಾರೋ ಒಬ್ಬ ದೊಡ್ಡ ಮನುಷ್ಯರು ಒಂದು ಕಾಲೇಜಿಗೆ ಬಂದರಂತೆ. ಪತ್ರಿಕೆಯವರು ಸುಮ್ಮನಿರುತ್ತಾರೆಯೇ—ಏನು ಸ್ವಾಮಿ, ಈ ಕಾಲೇಜಿನಬಗ್ಗೆ

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ನಿಮ್ಮ ಅಭಿಪ್ರಾಯ ಎಂದು ಕೇಳಿದರಂತೆ. ಕಾಲೇಜನ್ನು ನೋಡದೆ ವಿಷಯ ತಿಳಿದುಕೊಳ್ಳದೇ ಕೂಡಲೇ ಹೇಳಿಕೆ ಕೊಡಲಿಕ್ಕೆ ನಾನೇನು ಮಂತ್ರಿಯೇ ಎಂದು ಆ ದೊಡ್ಡ ಮನುಷ್ಯರು ಉತ್ತರ ಕೊಟ್ಟರಂತೆ. ವಿದ್ಯಾ ಮಂತ್ರಿಗಳು ಒಂದೆರಡು ಹೇಳಿಕೆಗಳು ಆ ದೊಡ್ಡ ಮನುಷ್ಯರು ಹೇಳಿದಂತೆ ಇದ್ದಾವೇನೋ ಎಂಬ ಸಂದೇಹ ನನಗೆ ಬಂದಿದೆ. ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು. ಎಂದ ಬಸವಣ್ಣನವರು ಹೇಳಿದ್ದಾರೆ. ಇದು ಎಲ್ಲರೂ ಅನುಕರಣೆ ಮಾಡುವ ವಿಚಾರವೆಂಬುದನ್ನು ವಿದ್ಯಾ ಮಂತ್ರಿಗಳಿಗೆ ವಿನಯದಿಂದ ಜ್ಞಾಪಿಸುತ್ತೇನೆ.

"ಸಭಾಪತಿಗಳೇ ತೋರಿರಿ ದಯೆಯ
ಮೂರೇ ನಿಮಿಷಕೆ ಮುಗಿಸುವೆನೀಕಥೆಯ."

ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri S. M. KRISHNA (Maddur).—Mr. Speaker, Sir, the special resolution placed before the House by the Leader of the Opposition has found unanimous support from all sections of this House. Congress members including Sri Anna Rao, Sri Appanna and Smt. Nagarathnamma have lent their unqualified support to the resolution placed before the House. We, Sir, on this side are very much grateful to those Congress members. The question before the Government and before the State is not a question of either increasing or decreasing the fees in Mangalore or Hyderabad Karnatak. The question is simple and plain whether the attitude of the Government in right away increasing tuition fees in the various Government colleges by 50 per cent, 60 per cent and in certain cases by even 100 per cent is right or not. It behaves the prestige of this House to find an amicable solution to it. Things have improved in the last twenty-four hours. A strike which threatened to take away tens and thousands of students from the various colleges in the State has been temporarily called off on a statement made by the Chief Minister of this State. It is also tragic that certain ugly demonstrations took place in Shimoga wherein none other than the Chief Minister is involved. We are so very happy that the Chief Minister was unhurt and we congratulate him. Nevertheless let us not take too much cognizence of this small notorious demonstration. By and large it can be said without any hesitation that the demonstration, strike, has been entirely peaceful. It has been the lot of Mysore State to see such student demonstrations in previous years. There were instances wherein firing was resorted to in 1957–58. So all of us must be thankful and the student leaders and student section of Mysore State ought to be congratulated on the way in which they have been conducting this strike. I said earlier that the amount involved in this increase is to the tune of Rs. 5 lakhs. I would make a very sportive offer to the Government of Mysore, if they are so pleased to accept it, to appoint a small committee consisting only of members of the Opposition to make recommendations to the Government as to how well or how easily they could raise Rs. 5 lakhs. Does it stand to reason, does it stand to Dharma to ask these gentlemen to pay the increased tuition fees? The amount involved is so meagre that we can find various methods through indirect taxation or through plugging loopholes in collecting taxes, excise tax, sales tax and what not, the amount required. We can also cut down the expenditure and implement some of the recommendations made by the A.G.R. Committee and thus we will be able to save not Rs. 5 lakhs but even Rs. 5 crores. Just imagine, as Sri Anna Rao pointed out, the case of students whose parents are primary school teachers. How could they make their two ends meet by paying this 40 to 50 per cent increase in tuition fees. There is absolutely no principle involved in it; no prestige either of Government or of any individual Minister is involved in this question. I think the Chief Minister ought to be able to give a bold lead to the entire State. A very heavy and onerous responsibility rests on the Chief Minister. All of us on this side are sincerely hoping that he will be able to come up to the expectations. Some of the arguments of the Education Minister are wholly illogical.

He says that the scholarship amount has been raised, and so we are

increasing the tuition fee. Here, I might quote that great educationist and economist Prof. Galbraith. He said :

> " A dollar or a rupee invested in the intellectual improvement of human beings will often bring a greater increase in national income than a dollar or a rupee devoted to railways, tanks, machine tools or other tangible goods."

We will be wholly on wrong premises if we are to think in terms of raising the tuition fees in order to maintain the expenditure Government is incurring on University Education. It pains us very much that the Government should take a wrong step and still persist in going ahead in that wrong direction. Now, I am pretty sure that the Government is so dumb or deaf as not to take the sentiments expressed in this House as well as outside. Even the partisan parents who met yesterday have also resolved to the effect that this tuition fee rise is wholly unwarranted.

With these few remarks I would make a very earnest appeal to the Government to find a solution for this problem lest the whole situation should take an ugly turn. I do not know what the students are going to decide if the Government were to stick to their proposals. Naturally, there is a good deal of unity in the rank and file of the students by and large. So, it will not help the Government to stand on prestige.

Sri S. NIJALINGAPPA.—You seem to be in very close contact with them.

Sri S. M. KRISHNA.—Not at all. I have said before that I have never met even a single student leader. I am not a parent either. To that extent I lose the right to represent the cause of the parents. But I can really feel the pangs of the students and parents. It is for the Government to find a solution. I close my speech with an earnest desire that they will be able to find a solution to this problem.

(The Speaker then called upon the Education Minister to reply).

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಏನು ಸ್ವಾಮಿ. ಇದು !

Mr. SPEAKER.—Then, how to give 45 minutes to the Education Minister ? This is a particular type of discussion. This cannot be put to vote, nor can the time be extended. If the Minister, is not allowed 45 minutes the reply will not be completed. That is why the time has been reduced to 5 minutes for each member. In a short debate of this kind so many members do not participate. When making remarks, the Hon. Members should kindly bear it in mind. It was so very audible that every body could hear it.

Sri K. LAKKAPPA.—Sir, it is a request.

Mr. SPEAKER.—It is not like that. He is requested not to repeat it in future.

Sri G. VENKATAI GOWDA.—Sir, I have sent an adjournment motion on this subject and you were pleased to entertain it. So, I request you to give me a chance to speak on this motion.

Mr. SPEAKER.—Where is the time ? Two and a half hours are allotted for it and the full two and a half hours have been utilised. The Education Minister is now called upon to reply.

ಶ್ರೀ ಎಸ್. ಆರ್. ಕಂಠಿ.—ಅಧ್ಯಕ್ಷರೆ, ಈ ದಿವಸ ನಾನು ನಿಜವಾಗಿಯೂ ಈ ಚರ್ಚೆಯಲ್ಲಿ ಭಾಗ ವಹಿಸದಂಥಾ ಮಾನ್ಯ ಸದಸ್ಯರುಗಳಿಗೆ ಉಪಕೃತನಾಗಿದ್ದೇನೆ. ನಾನು ಈ ಮನೆಯಲ್ಲಿ ಈಗಾಗಲೇ ಈ ವಿಷಯವಾಗಿ ವಿಷದವಾದ ಒಂದು ಹೇಳಿಕೆಯನ್ನು ಕೊಟ್ಟಿದ್ದೇನೆ. ಆ ಹೇಳಿಕೆಯಲ್ಲಿ ನಾನಾ ತರಹದ ಅಂಶಗಳು ಅಡಕವಾಗಿದ್ದು, ಯಾವ ತರಹದ ಸಂದಿಗ್ಧತೆಯೂ ಅದರಲ್ಲಿ ಇಲ್ಲವೆನ್ನಬಹುದು. ಹಾಗಿದ್ದರೂ ಕೂಡ ಮಾನ್ಯ ಸದಸ್ಯರಾದಂಥ ಮತ್ತು ವಿರೋಧ ಪಕ್ಷದ ನಾಯಕರಾದಂಥ ಶ್ರೀಮಾರ್ ಶಿವಪ್ಪನವರು ಈ ವಿಷಯವಾಗಿ ಎರಡೂವರೆ ಘಂಟೆಗಳ ಕಾಲ ಚರ್ಚೆ ಮಾಡೋಣ ಎಂದು ಹೇಳಿ ಈ ತರಹದ ಚರ್ಚೆಗೆ ಕಾರಣರಾಗಿದ್ದಾರೆ. ನಿಜವಾಗಿಯೂ ನಾನು ಅವರಿಗೆ ಋಣಿಯಾಗಿದ್ದೇನೆ. ಅವರು ಮಾತನಾಡುವವ ಎಂತೆ ಬಹಳ ಭರಾಟೆಯಾಗಿ ಮಾತನಾಡಲಿಕ್ಕೆ, ಒಂದು ಪ್ರಶ್ನೆ ಕೇಳಲಿಕ್ಕೂ ಕೂಡ ಅವಕಾಶ ವಿಲ್ಲದಂತೆ, ಒಂದು ವಿವರಣೆಯನ್ನು ಕೇಳಲಿಕ್ಕೂ ಕೂಡ ಅವಕಾಶ ಕೊಡಲಾರದಷ್ಟು ಜೋರಾಗಿ ಅವರು ಪಂಜಾಬ್ ಮೇಲ್ ಹೊರಟ ಹಾಗೆ ಹೊರಟರು. ಆದ್ದರಿಂದ ನನಗೆ ಒಂದು ಭಾವನೆ ಆಯಿತು ಅವರು ತಪ್ಪು

(ಶ್ರೀ ಎಸ್. ಆರ್. ಕಂಠಿ)

ಕೇಸನ್ನು ಎಲ್ಲಾ ಕಾಲೇಜುಗಳಿಗೂ ಅನ್ವಯಿಸುತ್ತಾ ಇದ್ದಾರೆ ಎಂದು, ಅಷ್ಟು ಭರಾಟೆಯಿಂದ ಹೋಗುತ್ತಾ ಇದ್ದರು. ಅವರು ಅನೇಕ ಪ್ರಶ್ನೆಗಳನ್ನು ಹೇಳಿದರು. ಭಾವೈಕ್ಯತೆಯ ವಿಷಯ ಹೇಳಿದರು ; ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ ಎಂದು ಹೇಳಿದರು ; ಲೆಕ್ಚರರು ಗಳನ್ನು ನೀವು ಹಿಂಬಡತಿ ಮಾಡಿದಿರಿ ಎಂದು ಹೇಳಿದರು; ಫೀಜು ಜಾಸ್ತಿ ಮಾಡದೇ ಟ್ಯಾಕ್ಸ್ ಜಾಸ್ತಿ ಹಾಕ ಬಹುದು ಎಂದು ಹೇಳಿದರು. ಈ ಎಲ್ಲಾ ಮಾತು ಗಳನ್ನು ಹೇಳಿದ ಮೇಲೆ ಅವರು ನಾನು ಕೇಳಿದಂಥಾ ಒಂದು ಪ್ರಶ್ನೆಗೆ ಅತ್ಯಂತ ಪ್ರಾಮಾಣಿಕತೆಯಿಂದ ಉತ್ತರವನ್ನು ಕೊಟ್ಟರು. ಅದರಂತೆ ಸರ್ಕಾರದವರು ನಡೆಯುವುದಕ್ಕೆ ಅವರು ಸಲಹೆ ಕೊಟ್ಟರು ಎಂದು ತಿಳಿದು ಕೊಳ್ಳುತ್ತೇನೆ. ಅದು ಯಾವುದು ಎಂದರೆ, ಫೀಜು ಕಡಮೆ ಮಾಡುವುದು ಇದ್ದರೆ ರಾಜ್ಯದಲ್ಲಿ ಇರುವಂಥ ಎಲ್ಲಾ ವಿದ್ಯಾರ್ಥಿಗಳಿಗೂ ಕಡಮೆ ಮಾಡಿರಿ ಅಂತ ಹೇಳಿದರು ಎಂದು ನಾನು ತಿಳಿದು ಕೊಂಡೆ, ಆದರೆ ಅದಕ್ಕೆ ಕೇಳುತ್ತೇನೆ, ಫೀಜು ಎಲ್ಲಾ ಕಡೆಯೂ ಕಡಮೆ ಮಾಡುವುದರಿಂದ ಸರ್ಕಾರಕ್ಕೆ ಬರುವಂಥ ವೆಚ್ಚದ ವಿಚಾರವನ್ನು ಅವರು ಮಾತ ನಾಡಲಿಲ್ಲ. ಸ್ವಾಮಿ, ಇವತ್ತು ಎಷ್ಟು ಖರ್ಚಾಗು ತ್ತದೆ ಎಂಬ ವಿಚಾರ ಸರ್ವೇ ಸಾಧಾರಣವಾಗಿ ನಾವು ಗಮನದಲ್ಲಿ ತೆಗೆದುಕೊಂಡರೆ ಈಗ ಯೂನಿವರ್ಸಿಟಿ ಶಿಕ್ಷಣಕ್ಕೆ ಒಂದು ಕೋಟಿ 75 ಲಕ್ಷ ರೂಪಾಯಿ ಖರ್ಚು ಮಾಡುವವರು ಮತ್ತೆ 50 ಲಕ್ಷ ರೂಪಾಯಿಗಳಷ್ಟಾದರೂ—ಅದಕ್ಕೆ ಕಡಿಮೆ ಇಲ್ಲದಷ್ಟು ಖರ್ಚು ಮಾಡಬೇಕಾಗುತ್ತದೆ. ಈ ಖರ್ಚು ದಿನೇ ದಿನೇ ಬೆಳೆಯುತ್ತಾ ಹೋಗುತ್ತದೆ. ಆದ್ದರಿಂದ ಇದರ ಬಗ್ಗೆ ಯಾರಿಗೆ ಟ್ಯಾಕ್ಸ್ ಹಾಕಬೇಕು, ಹೇಗೆ ದುಡ್ಡನ್ನು ದೊರಕಿಸಬೇಕು ಎನ್ನುವ ವಿಷಯ ಹೇಳುತ್ತಾ ಮಾನ್ಯ ಸದಸ್ಯರು ಅಲ್ಲಿ ಪ್ಲಾನ್ ಮಾಡಿರಿ ಆ ರೀತಿ ದೊರಕಿಸಿ ಈ ರೀತಿ ದೊರಕಿಸಿ ಎಂದೆಲ್ಲಾ ಏನು ಹೇಳಿದರು ಅದನ್ನು ಮಾಡುತ್ತಾ ಇದ್ದೇವೆ. ಅನೇಕ ರೀತಿಯ ಬೆಳವಣಿಗೆ ಮೈಸೂರು ರಾಜ್ಯದಲ್ಲಿ ಆಗ ಬೇಕಾಗಿದೆ. ಅದಕ್ಕೆ ನಮಗೆ ದುಡ್ಡು ಬೇಕು. ಅದನ್ನು ನಾವು ಮಾಡಿಯೇ ಮಾಡುತ್ತೇವೆ ಎಂದು ಹೇಳುತ್ತೇನೆ. ಒಂದು ಉದಾಹರಣೆಗೆ ಹೇಳ ಬೇಕಾದರೆ ಸೇಲ್ಸ್ ಟ್ಯಾಕ್ಸ್‌ನಲ್ಲಿ ಪ್ಲಾನ್ ಮಾಡಿ ಸ್ಟ್ರಿಂಜಂಟ್ ಮೆಷರ್ಸ್ ತೆಗೆದುಕೊಂಡ ಮೇಲೆ ಈ ವರ್ಷ ಕನಿಷ್ಠ ಒಂದೂವರೆ ಕೋಟಿ ರೂಪಾಯಿ ಗಳು ಸೇಲ್ಸ್ ಟ್ಯಾಕ್ಸ್‌ನಿಂದ ನಮಗೆ ಸಿಕ್ಕುತ್ತದೆ ಎಂಬ ಭಾವನೆ ಇದೆ. ಆ ಕೆಲಸ ಮಾಡಿಯೇ ಮಾಡುತ್ತೇವೆ. ಇದು ಬರೀ ಒಂದು ವಿದ್ಯಾಖಾತೆ ಯಲ್ಲಿ ಹೆಚ್ಚು ಮಾಡಿದ್ದಲ್ಲ. ಒಂದು ಪ್ಲಾನ್ ಇದೆ. ಆ ಪ್ಲಾನ್‌ನಲ್ಲಿ ಇರುವಂಥ ಅನೇಕ ಅಂಶಗಳನ್ನೂ ನಾವು ಕಾರ್ಯರೂಪಕ್ಕೆ ತರಬೇಕಾಗಿದೆ. ಅದಕ್ಕೆ ಎಲ್ಲಾ ಕಡೆಯಿಂದಲೂ ಕೂಡ ಸಹಾಯ ಬೇಕಾಗಿದೆ ಎಂಬುದನ್ನು ನಾನು ಒತ್ತಾಯ ಪಡಿಸುತ್ತೇನೆ. ಸರ್ಕಾರ ಕೆಲವು ಅಂಶಗಳನ್ನು ತಮ್ಮ ಗಮನದಲ್ಲಿಟ್ಟು ಅದರಂತೆ ನಡೆಯುತ್ತಾ ಇದೆ. ಅದು ತಮಗೂ ಗೊತ್ತಿದೆ. ಪ್ರೈಮರಿ ಎಜುಕೇಷನ್ ಕಂಪಲ್ಸರಿ ಮಾಡಿದ್ದೇವೆ. ಅದರಿಂದ ಹಳ್ಳಿ ಹಳ್ಳಿಗಳಲ್ಲಿ, ಗ್ರಾಮಾಂತರಗಳಲ್ಲಿ ಶಾಲೆಗಳನ್ನು ಜಾಸ್ತಿ ಮಾಡ ಬೇಕಾಗುತ್ತದೆ. ಶಿಕ್ಷಕರು, ಶಿಕ್ಷಕಿಯರನ್ನು ಜಾಸ್ತಿ ಮಾಡ ಬೇಕಾಗಿದೆ ಮತ್ತು ಕಟ್ಟಡಗಳನ್ನು ಕಟ್ಟಿಸ ಬೇಕಾಗಿದೆ. ನಾನಾ ತರಹದಬಾಬುಗಳಿಂದ ವಿಶೇಷ ತರಹದ ಖರ್ಚು ಬರುತ್ತದೆ, ಕಾನ್ಸ್ಟಿಟ್ಯೂಷನ ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಇರುವುದರಿಂದ ಅದನ್ನು ತಪ್ಪಿಸಲಿಕ್ಕೆ ಆಗುವುದಿಲ್ಲ. ಮನಃ ಪೂರ್ವಕವಾಗಿ ಮಾಡೋಣ. ಮಾಡುವುದರಲ್ಲಿ ಯಾವ ತರಹದಲ್ಲಿ ದುಡ್ಡು ಖರ್ಚು ಮಾಡ ಬೇಕಾಗುತ್ತದೆ ಎಂಬುದನು ಅವರ ಗಮನಕ್ಕೆ ತರುತ್ತೇನೆ.

ಇನ್ನು ಪಾನ ನಿರೋಧದ ವಿಚಾರವನ್ನು ಪ್ರಸ್ತಾಪಿಸಿದರು. ಎರಡೂವರೆ ಜಿಲ್ಲೆಗಳನ್ನು ಬಿಟ್ಟು ಇಡೀ ರಾಜ್ಯದಲ್ಲಿ ಪಾನನಿರೋಧ ಜಾರಿಯಲ್ಲಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಮಾಡಿದ್ದೇವೆಂಬುದನ್ನು ಎಲ್ಲರೂ ಒಪ್ಪಿಕೊಳ್ಳ ಬೇಕಾಗಿದೆ.

ಇದೇ ಕಾಲದಲ್ಲಿ ಗ್ರಾಮಾಂತರಗಳಲ್ಲಿ ಪ್ರೈಮರಿ ಶಿಕ್ಷಣ ಜಾಸ್ತಿಯಾಗುತ್ತಾ ಹೋಗುತ್ತಿದೆ. ಇದರ ಜೊತೆಗೆ ಎಸ್. ಎಸ್. ಎಲ್. ಸಿ. ವರೆಗೆ ಶಿಕ್ಷಣವನ್ನೂ ಹೆಚ್ಚು ಮಾಡಿಕೊಳ್ಳಬೇಕೆಂಬ ದೃಷ್ಟಿಯಿಂದ ಹಳ್ಳಿ ಗಳಲ್ಲಿ ಹೆಚ್ಚು ಹೆಚ್ಚಾಗಿ ಹೈಸ್ಕೂಲುಗಳನ್ನು ಮಾಡು ತ್ತಿದ್ದೇವೆ. ಈಚೆಗೆ ಎರಡು ವರ್ಷಗಳಲ್ಲಿ ಕೊಟ್ಟಿರುವ ಹೈಸ್ಕೂಲುಗಳ ಸಂಖ್ಯೆಯನ್ನು ನೋಡಿದರೆ ಇದು ವ್ಯಕ್ತವಾಗುತ್ತದೆ. ಹಿಂದಿನ ಮಂತ್ರಿಮಂಡಲದವರೂ ಕೊಟ್ಟಿರುವುದನ್ನು ನೋಡಿದೆ, ಗ್ರಾಮಾಂತರಗಳಲ್ಲಿ ಹೆಚ್ಚು ಹೈಸ್ಕೂಲುಗಳನ್ನು ಕೊಟ್ಟಿದ್ದಾರೆ. ಚುನಾ ವಣೆಗೆ ಹಿಂದಿದ್ದ ಮಂತ್ರಿಮಂಡಲ ವಾರ್ಷಿಕ ಉತ್ಪತ್ತಿ ಅಥವಾ ವರಮಾನವಿದ್ದ ಜನರಿಗೆ ಫೀ ರಿಯಾಯಿತಿ ಯನ್ನು ಕೊಟ್ಟಿತ್ತು. ಹೊಸ ಮಂತ್ರಿಮಂಡಲ ಬಂದ ಮೇಲೆ ಈ ರಿಯಾಯಿತಿಯನ್ನು 2400 ರೂಪಾಯಿವರೆಗೆ ಉತ್ಪತ್ತಿ ಇರುವ ಜನರಿಗೂ ಕೊಟ್ಟದ್ದಾಯಿತು. ಇದರಿಂದ ಸರ್ಕಾರಕ್ಕೆ ಸುಮಾರು ಹದಿನೈದು ಲಕ್ಷ ರೂಪಾಯಿ ಖರ್ಚು ಬೀಳುತ್ತದೆ. ಇದಕ್ಕಿಂತ ಜಾಸ್ತಿ ಬೀಳುವ ಸಂಭವವೂ ಇದೆ. ಯೋಜನೆಯ ಕಾಲದಲ್ಲಿ ಇನ್ನೂ ಇನ್ನೂರು ಹೈಸ್ಕೂಲುಗಳು ಹೆಚ್ಚಾಗುತ್ತವೆ ಯೆಂದು ತಿಳಿಸುಕೊಂಡಿದ್ದೇವೆ. ಈಗಾಗಲೇ ಎರಡು ವರ್ಷಗಳಲ್ಲಿ ಇನ್ನೂರು ಆಗಿವೆ, ಆದುದರಿಂದ ೨,೪೦೦ ರೂಪಾಯಿವರೆಗೆ ವರಮಾನವಿರುವವರ ಮಕ್ಕಳಿಗೆ ಫೀರಿಯಾಯ್ತಿ ಕೊಟ್ಟದ್ದರಿಂದ ಹದಿನೈದು ಲಕ್ಷ ರೂಪಾಯಿ ವೆಚ್ಚವಾಗುತ್ತದೆ ಎನ್ನುವುದು under estimate ಎಂದು ತಿಳಿದು ಕೊಂಡಿದ್ದೇವೆ. ಇತ್ತೀಚೆಗೆ ಸರ್ಕಾರ ಸೆಕೆಂಡರಿ ಏಡೆಡ್ ಸ್ಕೂಲುಗಳಿಗೆ ಇನ್ನೊಂದು ಯೋಜನೆಯನ್ನು ಮಾಡಿದೆ. ಅದೇ ನೆಂದರೆ, triple benefit scheme—ತ್ರಿವಿಧ ಸೌಲಭ್ಯ ಯೋಜನೆ. ಇದರಿಂದ ಸರ್ಕಾರಕ್ಕೆ ಸುಮಾರು ನಲವತ್ತು ಲಕ್ಷ ರೂಪಾಯಿಗೆ ಕಡಮೆ ಯಿಲ್ಲದೆ ಖರ್ಚಾಗುತ್ತದೆ. ಮೂರು ಕಾಲೇಜು ಗಳನ್ನು ಅಪ್‌ಗ್ರೇಡ್ ಮಾಡಿದ್ದೇವೆ. ಕೋಲಾರ, ಮಂಡ್ಯ, ಚಿಕ್ಕಮಗಳೂರು ಕಾಲೇಜುಗಳನ್ನು ಹೀಗೆ ಮಾಡಿದ್ದರಿಂದ ಸರ್ಕಾರಕ್ಕೆ ಮೂವತ್ತು ಲಕ್ಷ ರೂಪಾಯಿ ಖರ್ಚು ಬರುತ್ತದೆ. ಅಲ್ಲದೆ ಹೊಸ ಕಾಲೇಜುಗಳಿಗೆ ಅಪ್ಪಣೆಯನ್ನು ಕೊಡುವುದರಲ್ಲಿದ್ದೇವೆ ತಿಪಟೂರು ಮತ್ತು ಕೆ.ಜಿ.ಎಫ್. ಈ ಎರಡು ಕಡೆ ಈ ಅಪ್ಪಣೆಯನ್ನು ಕೊಡುವವರಿದ್ದೇವೆ. ಅಲ್ಲದೆ ಕೆ.ಜಿ.ಎಫ್. ನಲ್ಲಿ ಈಗ School of Mines ಇರು ವುದನ್ನು ಕಾಲೇಜು ಮಾಡಬೇಕೆಂಬ ವಿಚಾರವನ್ನೂ ಪರಿಶೀಲನೆ ಮಾಡುತ್ತಿದ್ದೇವೆ. ಹೀಗೆಲ್ಲಾ ನಾನಾ ರೀತಿಯ ಖರ್ಚುಗಳಿರುವುದರಿಂದ ಸರ್ಕಾರದವರು ಮುಂದೆ ಯಾವುದೇ ಹೆಜ್ಜೆಯನ್ನಿಡಬೇಕಾದರೂ ಯೋಚನೆಯಿಂದ ಇಡಬೇಕಾಗಿದೆ. ಎಚ್ಚರಿಕೆಯಿಂದ ಮುಂದುವರಿಯಬೇಕಾಗಿದೆ. ಫೀ ಹೆಚ್ಚಿಸಿರುವುದ ರಿಂದ ವಿದ್ಯಾರ್ಥಿಗಳಿಂದ 4,83,000 ರೂಪಾಯಿ

ಬರುತ್ತದೆಂದು ಹೇಳಿದ್ದೇನೆ; ಇದೇನೂ ಮಹತ್ವದ್ದಲ್ಲ. ಇದಕ್ಕಿಂತ ಮೇಲಾಗಿ ಇಡೀ ರಾಜ್ಯದಲ್ಲಿ ಒಂದೇ ರೀತಿಯ ಫೀ ದರವಿರಬೇಕೆಂಬ ತತ್ವವನ್ನು ಜಾರಿಗೆ ತರಬೇಕಾಗಿದೆ. ಇದರ ಬಗ್ಗೆ ಒಂದು ಸಮಿತಿಯನ್ನು ನೇಮಕ ಮಾಡಿದ್ದು ಆ ಸಮಿತಿಯವರು uniformity in fees ಜಾರಿಗೆ ತರಬೇಕೆಂದು ಅಭಿಪ್ರಾಯ ಪಟ್ಟು ವರದಿಯನ್ನು ಕೊಟ್ಟಿದ್ದಾರೆ. ಇದನ್ನು ಸರ್ಕಾರದವರು ಒಪ್ಪಿದ್ದಾರೆ. ಈಗ ಫೀ ಜಾಸ್ತಿ ಮಾಡುವ ವಿಚಾರ ಸರ್ಕಾರಕ್ಕೆ ಇದ್ದಕ್ಕಿದ್ದ ಹಾಗೆ ಆಕಾಶದಿಂದ ಬಂದದ್ದಲ್ಲ. ೧೯೫೭ನೆಯ ಇಸವಿಯಿಂದಲೂ ಈ ಪ್ರಶ್ನೆ ಸರ್ಕಾರದ ಮುಂದಿದೆ ಎಂದು ಶ್ರೀಮಾನ್ ಅಣ್ಣಾರಾಯರೇ ಹೇಳಿದ್ದಾರೆ. ಇದನ್ನು ನೋಡಿದರೆ, ಈ ಪ್ರಶ್ನೆಯನ್ನು ಹೆಚ್ಚು ದಿನ ಮುಂದೆ ಹಾಕುವುದಕ್ಕೆ ಸಾಧ್ಯವಿಲ್ಲವೆಂಬುದು ವ್ಯಕ್ತವಾಗುತ್ತದೆ. ಈ ಸಮಸ್ಯೆಯನ್ನು ಬಗೆ ಹರಿಸುವ ದೃಷ್ಟಿಯಿಂದ ಫೀ ಜಾಸ್ತಿ ಮಾಡಬೇಕಾಗಿದೆ. ಕೆಲವು ಜನ ಶೇಕಡ ನೂರರಷ್ಟು; ೫೦ರಷ್ಟು, ೭೫ರಷ್ಟು, ಹೀಗೆ ಜಾಸ್ತಿ ಮಾಡಿದ್ದಾರೆ, ಇದು ಬಹಳ ಜಾಸ್ತಿ, stages ಅಥವಾ ಘಟ್ಟಗಳಲ್ಲಿ ಮಾಡಬೇಕಾಗಿತ್ತು ಎಂದು ಹೇಳುತ್ತಿದ್ದಾರೆ. ಬೇರೆ ರಾಜ್ಯಗಳಲ್ಲಿ ಫೀ ಎಷ್ಟು ಜಾಸ್ತಿ ಇದೆ ಎನ್ನುವುದು ನನಗೆ ಸ್ವತಃ ಗೊತ್ತಿದೆ, ಅಲ್ಲಿಂದ ಮಾಹಿತಿಯನ್ನು ತರಿಸಿದ್ದೇನೆ. ಗುಲ್ಬರ್ಗದಲ್ಲಿ ಒಮ್ಮೆಲೇ ನೂರಕ್ಕೆ ನೂರರಷ್ಟು ಜಾಸ್ತಿ ಆಯಿತು. ಕೊಲ್ಲಾಪುರ, ಬರೋಡಾ, ಬೊಂಬಾಯಿ ನಲ್ಲಿದ್ದಾಗ ಫೀ ಇರಲಿಲ್ಲ. ನೂರಕ್ಕೆ ನೂರರಷ್ಟು ಹೆಚ್ಚು ಮಾಡಿದರು. ಅಲ್ಲಿ ಚಳವಳಿ ಯಾಗಲಿಲ್ಲ. ಗುಲ್ಬರ್ಗದಲ್ಲಿಯೂ ಆಗಲಿಲ್ಲ. ಈಗ ೩೫, ೫೦, ೭೫ ರೂಪಾಯಿ ಜಾಸ್ತಿಯಾಗಿದೆ ಎಂದು ಚಳವಳಿ ಮಾಡುವುದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಎಸ್. ಶಿವಪ್ಪ.—ನಿಮಗೆ ಯಾವಾಗ ಅರ್ಥವಾಗುತ್ತದೆ?

ಶ್ರೀ ಎಸ್. ಆರ್. ಕಂಠಿ.—ನೀವು ಮಾಡಿ ಕೊಟ್ಟಾಗ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಕಾಶ್ಮೀರದಲ್ಲಿ ಎಷ್ಟು ಶುಲ್ಕ ಹಾಕಿದ್ದಾರೆ?

ಶ್ರೀ ಎಸ್. ಆರ್. ಕಂಠಿ.—ಕಾಶ್ಮೀರದಲ್ಲಿ free education ಕೊಡುತ್ತಾರೆ; ನಾವು ಕಾಶ್ಮೀರದಲ್ಲಿಲ್ಲ.

ಶ್ರೀ ಎಸ್. ಶಿವಪ್ಪ.—ಸಿಲೋನಿನಲ್ಲಿ?

ಶ್ರೀ ಎಸ್. ಆರ್. ಕಂಠಿ.—ಬೇರೆ ದೇಶದ ವಿಚಾರ ಹೇಳಬೇಡಿ.

ಶ್ರೀ ಎಸ್. ಶಿವಪ್ಪ.—ಸಿಲೋನಿನ per capita income ಎಷ್ಟಿದೆ? Ours is the lowest in India.

ಶ್ರೀ ಎಸ್. ಆರ್. ಕಂಠಿ.—ಇಂಡಿಯಾ ದೇಶದ per capita income 245, ಮೈಸೂರಿನದು; 225. Lowest in India ಎಂದರೆ ಯಾರದು? ಬೆಂಗಳೂರಿನಲ್ಲೋ ಅಥವಾ ಹಳ್ಳಿಗಳಲ್ಲೋ? ಪಟ್ಟಣಗಳಲ್ಲಿ ಜಾಸ್ತಿ ಇದೆ, ಹಳ್ಳಿಗಳಲ್ಲಿ ಕಡಮೆ ಇದೆ. ಖಚಿತವಾಗಿ ಹೇಳ ಬೇಕೆಂದರೆ, ಈಗ ನನ್ನಲ್ಲಿ ಈ ಬಗ್ಗೆ ವಿವರಗಳಿಲ್ಲ.

Sri C. J. MUCKANNAPPA.—Then are all these figures false?

ಶ್ರೀ ಎಸ್. ಆರ್. ಕಂಠಿ.—ಯಾವುದು ಅವರಿಗೆ ಅಪ್ರಿಯವಾಗಿರುತ್ತದೆ ಅದಕ್ಕೆ ಹೀಗೆ ಹೇಳುತ್ತಾರೆ. ಬೊಂಬಾಯಿ ರಾಜ್ಯದಲ್ಲಿ ನಾನಿದ್ದಾಗ ಕೊಲ್ಲಾಪುರ ಮತ್ತು ಗುಲ್ಬರ್ಗದಲ್ಲಿ ನೂರಕ್ಕೆ ನೂರರಷ್ಟು ಫೀ ಹೆಚ್ಚಾಯಿತು, ಆದರೆ ಅಲ್ಲಿನ ಜನರು ದೇಶದ ಕಲ್ಯಾಣ ದೃಷ್ಟಿಯಿಂದ ಸಹನೆಯನ್ನು ತೋರಿ ಸುಮ್ಮನಿದ್ದರು.

ಕೆಲವರು ಮದರಾಸು ಕಾಲೇಜಿನ ವಿಚಾರವನ್ನು ಹೇಳಿದರು. ಅಲ್ಲಿ ನಮಗಿಂತ ಹೆಚ್ಚು ಕಾಲೇಜುಗಳಿವೆ, ನಮ್ಮಲ್ಲಿರುವುದೇ ೧೭ ಕಾಲೇಜುಗಳು. ಅವುಗಳಲ್ಲಿ ಮೂರು ಕಾಲೇಜುಗಳು integrated areaದಲ್ಲಿವೆ. ಅಲ್ಲಿ ಜಾಸ್ತಿ ಫೀ ಕೊಡುತ್ತಿದ್ದಾರೆ. ಉಳಿದ ಹದಿನಾಲ್ಕು ಕಾಲೇಜುಗಳು ಮಾತ್ರ ಬೆಂಗಳೂರು, ಶಿವಮೊಗ್ಗ, ಚಿತ್ರದುರ್ಗ ಇತ್ಯಾದಿ ಹಳೇ ಮೈಸೂರು ಪ್ರದೇಶದಲ್ಲಿವೆ. ಈ ಕಾಲೇಜುಗಳ ವಿಷಯದಲ್ಲಿ ಮಾತ್ರ ಈ ಪ್ರಶ್ನೆ ಬಂದಿರುವುದು. ಹೀಗಿದ್ದರೂ ಕೆಲವರು ಏನೋ ದೊಡ್ಡ ಅನಾಹುತವಾಯಿತೆಂದು ತಿಳಿದು ಕೊಂಡಿದ್ದಾರೆ. ಇನ್ನೂ ವಿವರವಾಗಿ ಅಂಕಿ ಅಂಶಗಳನ್ನು ಕೊಡುತ್ತೇನೆ.

ಮೈಸೂರು ವಿಶ್ವವಿದ್ಯಾನಿಲಯದ ಪ್ರದೇಶದ ಕಾಲೇಜುಗಳಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 29,309; ಇವರಲ್ಲಿ 11,559 ಜನ ವಿದ್ಯಾರ್ಥಿಗಳಿಗೆ ಮಾತ್ರ ಈ ಶುಲ್ಕದ ಏರಿಕೆ ಅನ್ವಯವಾಗುವುದು. ಇದರಲ್ಲಿ ವಿದ್ಯಾರ್ಥಿ ವೇತನ ಮತ್ತು ಫೀ ರಿಯಾಯಿತಿ ಪಡೆಯುತ್ತಿರುವವರು ಸೇರಿಲ್ಲವಾದುದರಿಂದ ಸ್ವಲ್ಪ ಜನರು ಮಾತ್ರ affect ಆಗಿದ್ದಾರೆ. ಹದಿನಾಲ್ಕು ಕಾಲೇಜುಗಳಲ್ಲಿರುವ 11,559 ಜನರಲ್ಲಿ ಅನೇಕರಿಗೆ ವಿದ್ಯಾರ್ಥಿ ವೇತನ, ಫೀ ರಿಯಾಯಿತಿಯಿರುವುದರಿಂದ ಅರ್ಧದಷ್ಟು ಹೋಗುತ್ತದೆ. ಹೀಗಿರುವಾಗ ಏನೋ ದೊಡ್ಡ ಅಪಘಾತವಾಗಿದೆ ಎಂದು ಕೆಲವರು ತಿಳಿದು ಕೊಂಡಿದ್ದಾರೆ; ಆದರೆ ನಾನು ಮಾತ್ರ ಹಾಗೆ ತಿಳಿದು ಕೊಳ್ಳುವುದಿಲ್ಲ. ಕೇವಲ ಸ್ವಲ್ಪ ಜನರಿಗೆ ಮಾತ್ರ ಈ ಶುಲ್ಕ ಹೆಚ್ಚಾಗಿರುವುದು ಅನ್ವಯಿಸುತ್ತದೆ.

Total number of students in the Mysore University	...	29,309
Total number of students in Karnatak University	...	9,400
Total	...	38,709

ಈಗ ಶೇಕಡ 30ರಷ್ಟು ಫ್ರೀಷಿಪ್ ಕೊಡುತ್ತಿದೆ, ಶೇಕಡ 20ರಷ್ಟು ವಿದ್ಯಾರ್ಥಿವೇತನ ದೊರೆಯುತ್ತಿದೆ. ಆದುದರಿಂದ ಐದೂವರೆ ಸಾವಿರ ವಿದ್ಯಾರ್ಥಿಗಳಿಗೆ ಮಾತ್ರ ಅಫೆಕ್ಟಾಗಬಹುದು, ಜಾಸ್ತಿ ಮಂದಿಗೆ ತೊಂದರೆಯಾಗುವುದಿಲ್ಲ ಎಂಬುದನ್ನು ಗಮನಿಸಬೇಕು.

5-00 P.M.

ಎರಡನೆಯದಾಗಿ ದಕ್ಷಿಣ ಕನ್ನಡದಲ್ಲಿ ಅಂದರೆ ಮದ್ರಾಸ್ ಏರಿಯಾದಲ್ಲಿ ಫ್ರೀಷಿಪ್ ಶೇಕಡ ಐದರಷ್ಟಿದೆ, ಮುಂಬಯಿ ಭಾಗದಲ್ಲಿ ಶೇಕಡ ಐದರಷ್ಟಿದೆ, ಹೈದರಾಬಾದ್ ಕರ್ಣಾಟಕದಲ್ಲಿ ಶೇಕಡ ನಾಲ್ಕು ಅಥವಾ ಐದು ಇರಬೇಕು, ಬಹಳ ಕಡಮೆ. ವಿದ್ಯಾರ್ಥಿ ವೇತನ ಯೂನಿಫಾರಂ ಆಗಿ ಇರುವಂತೆ ಮಾಡಿದರೆ ನಾಳೆ ದಿವಸ ಗಲಾಟೆ ಏಳಬಹುದು.

Sri S. SIVAPPA.—Is not 11,000 more than the whole strength of Karnatak University?

Sri S. R. KANTHI.—If you deduct 50 per cent out of 11,559, the remaining number of students become less. We give 30 per cent freeship and 20 per cent scholarship. In South Kanara freeships 5 per cent, in Bombay Karnatak area it is 3 per cent and in Hyderabad Karnatak area it may be 4 or 5 per cent. ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸಕ್ಕಾಗಿ ಮೈಸೂರು ಸರ್ಕಾರದವರು ಮದ್ರಾಸು ಸರ್ಕಾರಕ್ಕಿಂತಲೂ ಜಾಸ್ತಿ ಖರ್ಚು ಮಾಡುತ್ತಿದ್ದಾರೆ. ಮದ್ರಾಸ್ ಸರ್ಕಾರದಲ್ಲಿ 5 ಯೂನಿವರ್ಸಿಟಿಗಳಿವೆ. ಅವರು ಒಬ್ಬನಿಗೆ 40 ನಯೇ ಪೈಸೆ ಖರ್ಚು ಮಾಡುತ್ತಿದ್ದಾರೆ. ನಾವು ತಲಾ 75 ನಯೇ ಪೈಸೆ ಖರ್ಚು ಮಾಡುತ್ತಿದ್ದೇವೆ. ಈ ರೀತಿ ದುಬಾರಿ ಖರ್ಚು ಎಲ್ಲ ಸಂದರ್ಭಗಳಲ್ಲೂ ಕೊಡಲು ಸಾಧ್ಯವಿಲ್ಲ, ಯೂನಿಫಾರ್ಮಿಟಿ ಇರಬೇಕು ಎಂದು ಇದಕ್ಕೆ ಸಂಬಂಧಪಟ್ಟ ಸಮಿತಿ ವರದಿ ಮಾಡಿದೆ. ಆದುದರಿಂದ ಸರ್ಕಾರದವರು ಫೀಜನ್ನು ಜಾಸ್ತಿ ಮಾಡಿದ್ದಾರೆ. ಹೀಗೆ ಮಾಡಿದ್ದರಿಂದ 5-6 ಸಾವಿರ ವಿದ್ಯಾರ್ಥಿಗಳಿಗಿಂತ ಹೆಚ್ಚು ಜನರಿಗೆ ಅಫೆಕ್ಟಾಗುವುದಿಲ್ಲ ಎಂಬುದನ್ನು ಸಭೆಯ ಗಮನಕ್ಕೆ ತರುತ್ತೇನೆ.

ಕೆಲವರು ಸ್ಟ್ಯಾಗರಿಂಗ್ ಮಾಡಬೇಕೆಂದು ಹೇಳಿದರು. ಆದರೆ ಎಜಿಟೇಷನ್ ಯಾರು ಮಾಡುತ್ತಿದ್ದಾರೋ ಅವರು ಈ ಮಾತನ್ನು ಹೇಳಲಿಲ್ಲ. ಅಂದೋಳನ ಮಾಡಿದವರು ಸರಕಾರ ಫೀಜನ್ನು ಜಾಸ್ತಿ ಮಾಡಿರುವುದು ಪರಮ ಅನ್ಯಾಯ ಎಂದು ಹೇಳುತ್ತಿದ್ದಾರೆ. ಆದರೆ ಸರ್ಕಾರದವರು ಫೀಜನ್ನು ಕಡಮೆಮಾಡಿದರೆ ಅದು ಮಾತ್ರ ಅನ್ಯಾಯವಲ್ಲವಂತೆ. ನನ್ನನ್ನು ವಿದ್ಯಾರ್ಥಿಗಳು ಮೂರುಸಲ ಕಂಡರು. ಆಗ ನೀವು ಒಂದು ವಾರ ಏಕೆ ಚಳವಳಿ ಮಾಡಬೇಕು, ನಿಮ್ಮ ಅಭಿಪ್ರಾಯ ಒಂದೇ ದಿವಸದಲ್ಲಿ ಹೇಳಿದರೆ ಸಾಕು, ಏಳು ದಿವಸಗಳ ಚಳವಳಿಯೇಕೆ ಮಾಡುತ್ತೀರಿ ಎಂದು ನಾನು ಅವರಿಗೆ ಕೆಲವು ಮಾತು ಹೇಳಿದೆ. ಇದನ್ನು ಟೋಕನ್ ಸ್ಟ್ರೈಕ್ ಎಂದು ನಂಬುವುದಕ್ಕೆ ಸಾಧ್ಯವಿಲ್ಲ, ಜಾಸ್ತಿ ಮಾಡಿದರೆ ಸಬ್‌ಸ್ಟ್ಯಾನ್ಷಿಯಲ್ ಸ್ಟ್ರೈಕ್ ಆಗುತ್ತದೆ, ಏಳು ದಿವಸ ಮಾಡುವ ಕಾರಣವಿಲ್ಲ ಎಂದು ಸಹ ನಾನು ಹೇಳಿದೆ. ಅವರು ಮರುದಿವಸವೂ ನನ್ನ ಹತ್ತಿರ ಬಂದರು. ಒಂದು ದಿವಸ ಚಳವಳಿ ಮಾಡಿದ್ದೀರಿ, ನಿಮ್ಮ ಅಭಿಪ್ರಾಯ ಸರ್ಕಾರಕ್ಕೆ ತಿಳಿದಿದೆ, ನೀವು ಚಳವಳಿಯನ್ನು ಬಿಡಿ, ಶಾಲೆಗೆ ಹೋಗಿ ಎಂದು ನಾನು ಆ ಕಾಲಕ್ಕೆ ಹೇಳಿದೆ. ಆದರೂ ಕೂಡ ಅವರು ಹೋಗಲಿಲ್ಲ. ಮೂರು ದಿವಸಗಳ ಮೇಲೆ ಮತ್ತೆ ಬಂದರು. ಆಗಲೂ ಪುನಃ ಪುನಃ ಫೀಜು ಜಾಸ್ತಿಮಾಡಿ ಅನ್ಯಾಯ ಮಾಡಿದ್ದಾರೆಂದು ಹೇಳಬಾರದು, ಸರ್ಕಾರಕ್ಕೆ ಅಧಿಕಾರವಿದೆ, ಆದುದರಿಂದ ಮತ್ತು ಯೋಗ್ಯವೆಂದು ಕಂಡದ್ದರಿಂದ ಮಾಡಿದೆಯೇ ವಿನಾ ನಿಮ್ಮ ಮೇಲೆ ಜಾಸ್ತಿ ಹಾಕಬೇಕೆಂದು ಮಾಡಿಲ್ಲ ಎಂದು ಹೇಳಿದೆ. ಆಮೇಲೆ ಆಂಧ್ರ, ಮದರಾಸ್, ಮಹಾರಾಷ್ಟ್ರ, ಕರ್ಣಾಟಕ ಯೂನಿವರ್ಸಿಟಿ ಮುಂತಾದ ಕಡೆಗಳಲ್ಲಿರುವ ಅಂಕಿಅಂಶಗಳನ್ನು ಸಹ ಅವರಿಗೆ ಹೇಳಿದೆ. ಅವರು ಜಮ್ಮು-ಕಾಶ್ಮೀರದಲ್ಲಿ ಕಡಮೆಯಿದೆ, ಉದಯಪುರದಲ್ಲಿ, ರಾಜಾಸ್ಥಾನ ಮತ್ತು ಬಂಗಾಳದಲ್ಲಿ ಫೀಜೇ ಇಲ್ಲ ಎಂದು ಹೇಳಿದರು. ಆದರೆ ಜಮ್ಮು-ಕಾಶ್ಮೀರದಲ್ಲಿ ಮಾತ್ರ ಇಲ್ಲ, ಉಳಿದ ಕಡೆ ಇದೆ. ಅವರಿಗೆ ಯಾರು ತಪ್ಪು ತಿಳುವಳಿಕೆ ಕೊಟ್ಟಿದ್ದಾರೋ ತಿಳಿಯದು. ಉದಯಪುರ ಮತ್ತು ಬಂಗಾಳಗಳಲ್ಲಿ ಫೀಜಿಲ್ಲವೆಂದು ಹೇಳುವುದು ಶುದ್ಧ ತಪ್ಪು ಎಂದು ಹೇಳಬೇಕಾಗಿದೆ.

Mr. SPEAKER.—I don't think there should be any disturbance at all. These interruptions take away the effect of the debate that is going on.

Sri S.R. KANTHI.—Now I have got the exact figures. 5,198 students will be benefited by freeship and scholarship. 6,361 students will be affected by higher fee rise. Out of 29,309 students only 6,361 students will be affected.

About the staggering of the fee rise as the hon. member Sri Anna Rao suggested, it is a question which ought to have been taken up a long time back. If the previous Ministry had taken that decision it would have been good. But, I can understand the difficulty. They could not take the decision and somehow the present Government had to take that decision. ಮಾಡಬೇಕಾದ್ದನ್ನು ಮಾಡದಿದ್ದರೆ ನಡೆಯುವುದಿಲ್ಲ ಎಂದು ಮಾಡಿದ್ದೇವೆ. ಈ ಸ್ಟ್ರೈಕ್ ಪ್ರಾರಂಭವಾದ ಮೇಲೆ ದಕ್ಷಿಣ ಕನ್ನಡ, ಕೊಡಗು, ಕರ್ಣಾಟಕದ ಉಳಿದ ಭಾಗಗಳಿಂದ ಟೆಲಿಫೋನ್ ಮತ್ತು ಪತ್ರಗಳು ವಿಶೇಷವಾಗಿ ಬಂದಿವೆ. ಈ ದಿವಸ ರಾಂಗ್‌ಸ್ಟೆಪ್ ತೆಗೆದುಕೊಂಡರೆ ಎರಡು ಮೂರು ಹುಲಗಳನ್ನು ಎದುರಿಸಬೇಕಾಗುತ್ತದೆ ಎಂದು ಬರೆದಿದ್ದಾರೆ.

ಆದಕ್ಕೇ ಅವರು ಬಂದಾಗ್ಗೆ ಒಂದು ಮಾತು ಹೇಳಿದೆ. 'ಮೂರು ದಿವಸ' ಎನ್ನುವುದನ್ನು ಬಿಟ್ಟು ಬಿಡಿ. ಇಲ್ಲದಿದ್ದರೆ, ಈ ಪ್ರಕಾರ ನಡೆಯುತ್ತಿದ್ದರೆ ಎಲ್ಲಿಯಾದರೂ violence ನಡೆಯುವ ಸಂಭವ ಇರುತ್ತೆ. ಯಾವಾಗಲೂ ಶಾಂತರೀತಿಯಿಂದ ನಡೆಯುತ್ತದೆಂದು ಹೇಳುವುದಕ್ಕಾಗುವುದಿಲ್ಲ ಎಂದು ಅವರಿಗೆ ನಾನು ತಿಳಿಸಿದೆ. ಆದ್ದರಿಂದ ಈ ಮಾರ್ಗವನ್ನು ಬಿಟ್ಟು ಈ ಪ್ರಶ್ನೆಯನ್ನು ಸರ್ಕಾರಕ್ಕೆ ಒಪ್ಪಿಸಿ ಎಂದು ಅವರಿಗೆ ತಿಳುವಳಿಕೆ ಹೇಳಿದೆ. ಆದರೆ ಅವರು ಅದಕ್ಕೆ ಒಪ್ಪಲಿಲ್ಲ. ಅವರು ಹೊರಗೆ ಹೋಗಿ ತಾವು ಹೇಳಿದಂತೆಯೇ ನಿರ್ಣಯ ಮಾಡಿದರು. "ಸರ್ಕಾರದವರು ನಾವು ಹೇಳಿದ ತತ್ವವನ್ನು ಒಪ್ಪಿಕೊಂಡರೂ, ಜಾಸ್ತಿ ಮಾಡಿದ್ದು ತಪ್ಪೆಂಬುದನ್ನು ಒಪ್ಪಲಿಲ್ಲ. ಸರ್ಕಾರದವರು ಮಾಡಿರುವುದು ಸರ್ವಥಾ ತಪ್ಪಾಗಿದೆ" ಎಂದು ಹೇಳಿ ವಿದ್ಯಾರ್ಥಿಗಳು ನಿರ್ಣಯ ಮಾಡಿಕೊಂಡರು.

ಆಮೇಲೆ, staggering ಅಂದರೆ ಸ್ವಲ್ಪ ಸ್ವಲ್ಪವಾಗಿ ಜಾಸ್ತಿ ಮಾಡಬೇಕಾಗಿತ್ತು ಎಂಬ ಸೂಚನೆ ಬಂತು. ನಾನು ಎಲ್ಲಾ ಕಡೆಗಳಲ್ಲೂ ವಿಚಾರಮಾಡಿ ತಿಳಿದಿದ್ದೇನೆ. ಯಾವ ಕಡೆಯಲ್ಲೂ ಆರೀತಿ step by step ಆಗಿ ಜಾಸ್ತಿಮಾಡಿರುವುದನ್ನು ಕಂಡಿಲ್ಲ. ಆದ್ದರಿಂದ ಉಳಿದ ರಾಜ್ಯಗಳಲ್ಲಿ ಯಾವರೀತಿಯಲ್ಲಿ ಮಾಡಿದ್ದಾರೋ ಅದೇ ರೀತಿಯಲ್ಲಿ ಇಲ್ಲಿಯೂ ಮಾಡಿದ್ದೇವೆ.

ಇನ್ನೊಂದು ಮಾತು ಶ್ರೀಮಾನ್ ಗೋಪಾಲಗೌಡರು ಹೇಳಿದರು. 'ದೇಶದಲ್ಲಿ ಹಾಗಾಯಿತು, ಹೀಗಾಯಿತು. ನೀವು ರಾಜಿನಾಮೆ ಕೊಡಿ' ಎಂದು ತಿಳಿಸಿದರು. ನಿಜವಾಗಿ ಹೇಳುವುದಾದರೆ, ನಾನು ರಾಜಿನಾಮೆ ಕೊಡುವುದಕ್ಕೆ ಎಂದೂ ಹೆದರುವವನಲ್ಲ, ಅದಕ್ಕೆ ಯಾವಾಗಲೂ ಸಿದ್ಧ. ಬಹುಶಃ ಹಳೆಯ ಮೈಸೂರಿನವರು ನನ್ನನ್ನು ಅಷ್ಟು ಚೆನ್ನಾಗಿ ಅರ್ಥ ಮಾಡಿಕೊಂಡಿಲ್ಲವೆಂದು ಕಾಣುತ್ತೆ. I have the least interest in clinging to office. ಆದರೆ ಒಂದು ಮಾತು ನಿಮಗೆ ಹೇಳುತ್ತೇನೆ. ಆಡಳಿತದ ವಿಚಾರ ಬಂದರೆ, I stand firm like a rock ಆದ್ದರಿಂದ ನನ್ನ ನಿಶ್ಚಯವನ್ನು ಯಾರೂ ತಪ್ಪು ತಿಳಿಯುವುದಕ್ಕೆ ಕಾರಣವಿಲ್ಲ. ಇದು ನಮ್ಮ ಲೀಡರಿಗೂ ಮುಖ್ಯಮಂತ್ರಿಗಳಿಗೂ ಚೆನ್ನಾಗಿ ಗೊತ್ತಿದೆ.

Sri S. NIJALINGAPPA (Chief Minister).—I wish the members will keep quiet and allow the debate to go on. Such interference does not bring credit to anyone.

Sri S. SIVAPPA.—We are not questioning the loyalty.

ಶ್ರೀ ಎಸ್. ಆರ್. ಕಂಠಿ.—There is no questioning loyalty. ಆದ್ದರಿಂದ ರಾಜಿನಾಮೆ ಕೊಡಿ ಎಂದು ಯಾರೋ ಹೇಳಿದರೆಂದು ನಾನು ಕೊಡುವ ಮನುಷ್ಯನೂ ಅಲ್ಲ. ನನ್ನ ಮನಸ್ಸಿಗೆ ರಾಜಿನಾಮೆ ಕೊಡಬೇಕೆಂದು ತೋಚಿದರೆ ಮಂತ್ರಿ ಪದವಿಯನ್ನು ಬಿಟ್ಟು ಕೊಡದ ಮನುಷ್ಯನೂ ಅಲ್ಲ. ಆದ್ದರಿಂದ ಅವರು ಸಲಹೆ ಮಾಡಿದ್ದು ತಪ್ಪು. ಈಗ ಫೀಜು ಏರಿಸಿದಿರಿ, ಅದರಿಂದಾಗಿ ಮಕ್ಕಳ ಚಳವಳಿಗೆ ಅವಕಾಶವಾಯಿತು, ಎಂಬೀ ರೀತಿಯಾಗಿ ಏನೇನೋ ಹೇಳಿ ರಾಜಿನಾಮೆ ಕೊಡಿ ಎಂದು ಶ್ರೀಮಾನ್ ಗೋಪಾಲಗೌಡರಂಥ ನುರಿತ ಪಾರ್ಲಿಮೆಂಟೇರಿಯನ್‌ರವರು ಹೇಗೆ ಹೇಳಿದರೋ ಗೊತ್ತಿಲ್ಲ. ಕಾಂಗ್ರೆಸ್ ಪಾರ್ಟಿಯವರು ಕೆಲವು ತಂದೆ ತಾಯಿಗಳನ್ನು ಕರೆಸಿ ಅವರಿಗೆ ಮಕ್ಕಳಿಗೆ ಬುದ್ಧಿವಾದವನ್ನು ಹೇಳುವಂತೆ ಹೇಳುತ್ತಿದ್ದಾರೆಂದು ಹೇಳಿದರು. ಯಾರಾದರೂ ಯೋಗ್ಯರಾದವರು ಬಂದು ನಮ್ಮೊಡನೆ ಚರ್ಚೆ ಮಾಡಿದರೆ, ಅವರು ಕಾಂಗ್ರೆಸ್ ಸರ್ಕಾರಕ್ಕೆ ಬೆಂಬಲ ಕೊಡುತ್ತಾರೆಂದೇ ? ಆಮೇಲೆ ಕೃಷ್ಣಶೆಟ್ಟರು ಹೇಳಿದ್ದು. ಪಾಪ, ಅವರಿಗೆ ತಮ್ಮ ಜಿಲ್ಲೆಯಲ್ಲಿ ಏನು ನಡೆಯುತ್ತಿದೆಯೆಂಬುದು ಗೊತ್ತಿಲ್ಲ. ಅವರು ಇಲ್ಲಿ ಬಂದು ಬಿಟ್ಟಿದ್ದಾರೆ! ಕ್ಯಾಬಿನೆಟ್ಟು ಈ ವಿಷಯದ ಬಗ್ಗೆ ನಿರ್ಣಯ ಮಾಡುವ ಕಾಲಕ್ಕೆ ಬಹಳ ಹೆಚ್ಚಾಗಿ ಬಂದು ತಕರಾರು ಮಾಡಿದವರೆಂದರೆ ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಯವರು. ಅವರ ಒತ್ತಾಯ ಬಹಳವಾಗಿತ್ತು. ಅಲ್ಲದೆ ಈ ಸಂಬಂಧದಲ್ಲಿ ನಿರ್ಣಯ ತೆಗೆದುಕೊಂಡು ಆರ್ಡರ್ ಮಾಡಿದ್ದು ಈಗ ಮೂರು ತಿಂಗಳ ಹಿಂದೆ. ಆಗ ಮಾಡಿದ್ದನ್ನು ನೋಡಿ ಸುಮ್ಮನೆ ಕುಳಿತಿದ್ದು ಈಗ ಇದ್ದಕ್ಕಿದ್ದ ಹಾಗೆ ಏಕೆ ಹೋರಾಟಕ್ಕೆ ಹೊರಟರೋ ಗೊತ್ತಿಲ್ಲ. ಅಂದರೆ, ಈ ಮಧ್ಯೆ ಏನೋ ಒಂದು 'ಬೆಕ್ಕು' ಅಡ್ಡಾಡುತ್ತಿದೆಯೆಂದು ತೋರುತ್ತೆ. ಮೂರು ತಿಂಗಳು ಸುಮ್ಮನಿದ್ದು ಈಗ ಈ ಪ್ರಶ್ನೆಯನ್ನು ಎತ್ತಿರುವುದು ಚೆನ್ನಾಗಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಈ ವಿಷಯಕ್ಕೆ ಅಷ್ಟು ಗಮನ ಕೊಡುವುದು ತಕ್ಕುದಲ್ಲ. ಶಿವಮೊಗ್ಗದ ಘಟನೆಯಿಂದ ವಿದ್ಯಾರ್ಥಿ ವೃಂದಕ್ಕೇ ಕಳಂಕ ಬಂತೆಂದು ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದರು. ಈ ಪ್ರಕಾರ ಒಂದು ಸಾರಿಯಾದರೂ ಸರ್ಕಾರದ ಪರವಾಗಿ ಬಂದು ಮಾತನಾಡಿ ಕೆಲವು ಮಟ್ಟಿಗೆ ಬೆಂಬಲ ಕೊಟ್ಟಿದ್ದಕ್ಕೆ ನಾನು ಅವರಿಗೆ ತುಂಬ ಋಣಿಯಾಗಿದ್ದೇನೆ. ಕಡೆಯಲ್ಲಿ ಭಾಷಣ ಮುಗಿಸುತ್ತಾ, ಇದೇಕೆ ಇಷ್ಟು ತೊಂದರೆಗಳಿಗೆ ಅವಕಾಶ ಕೊಡುವುದು, ಎರಡು ಕನ್ನಡ ರಾಜ್ಯವನ್ನೇ ಮಾಡಿಬಿಡಿ ಎಂದು ಹೇಳಿದರು. ಇದನ್ನು ಮಾಡುವುದು ಯಾರ ಕೈಯಲ್ಲೂ ಇಲ್ಲ. ಮುಕ್ಕಣ್ಣಪ್ಪನವರ ಕೈಯಲ್ಲೂ ಇಲ್ಲ, ನಮ್ಮ ಕೈಯಲ್ಲೂ ಇಲ್ಲ. ಜನತೆ ಮನಸ್ಸು ಮಾಡಿದರೆ ಆಗುತ್ತದೆ ಅಷ್ಟೆ.

ಅದೇನೇ ಆಗಲಿ, ಅವೆಲ್ಲಾ ಹೊರಗಿನ ವಿಷಯಗಳು. ಎಲ್ಲಿಯೋ ವಿದ್ಯಾರ್ಥಿಗಳು ಮುಷ್ಕರ ಹೂಡಿದರೆಂದು ಹೇಳಿ ಇದೆಲ್ಲಾ ಯೋಚನೆ ಮಾಡುವುದು ಸರಿಯಲ್ಲ. ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು, ಸರ್ಕಾರಕ್ಕೆ ದೂರದೃಷ್ಟಿಯಿಲ್ಲವೆಂದು ಹೇಳಿದರು. ಏನು ಮಾಡೋಣ, ಎಷ್ಟು ದೂರದೃಷ್ಟಿಯಿರಬೇಕೊ ಗೊತ್ತಿಲ್ಲ. ಯಾರಾದರೂ ತಪ್ಪು ಎಂದು ಹೇಳಿಯೇ ಹೇಳುತ್ತಾರೆ. ಸರ್ಕಾರದವರು ಈಗ Triple Benefit Schemeಅನ್ನು ಜಾರಿಗೆ ತಂದರಲ್ಲಾ ಅದಕ್ಕೆ ಯಾರೂ ಒಂದು ಶಹಬಾಸೂ ಹೇಳಲಿಲ್ಲ. ಫೀ ಕನ್‌ಸೆಷನ್ನು 2,400 ರೂಪಾಯಿ ವರಮಾನದವರೆಗಿನವರಿಗೆಲ್ಲಾ ಕೊಟ್ಟೆವು. ಆಗಲೂ ಯಾರೂ ಒಂದು ಒಳ್ಳೆಯ ಮಾತಾಡಲಿಲ್ಲ. ಮೂರು ಕಾಲೇಜುಗಳನ್ನು ಅಫಿಲಿಯೇಟ್ ಮಾಡಿದೆವು. ಆಗಲೂ ಏನೂ ಇಲ್ಲ! ತಿಪಟೂರಿನಲ್ಲಿ ಒಂದು ಕಾಲೇಜು ಮಾಡಿಕೊಡಬೇಕೆಂದು ಹೇಳಿ ರೇವಣಸಿದ್ದಪ್ಪನವರು ಅವರೇ ಸ್ವತಃ ಬಂದು, He pleaded like anything.

ಅಧ್ಯಕ್ಷರು.—ಈ ರೇವಣಸಿದ್ದಪ್ಪನವರೇ ?

ಶ್ರೀ ಎಸ್. ಆರ್. ಕಂಠಿ.—ಹೌದು, ಅವರೇ ಬಂದಿದ್ದರು. ಅವರಿಗೆ ಅಲ್ಲೊಂದು ಕಾಲೇಜು ಕೊಡುವುದಕ್ಕೆ ಅನುಕೂಲ ಮಾಡಿಕೊಟ್ಟೆ. ಕೆ.ಜಿ.ಎಫ್.ನಲ್ಲಿ ಒಂದು ಕಾಲೇಜನ್ನು ತೆರೆಯುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದೇವೆ. ಆದ್ದರಿಂದ ತಮ್ಮ ಅಭಿಪ್ರಾಯದಲ್ಲಿ ಬಹುಶಃ ಮಾಡಿದ್ದೆಲ್ಲಾ ಕರ್ತವ್ಯ; ಮಾಡದ್ದೆಲ್ಲಾ ತಪ್ಪು.

ಅಧ್ಯಕ್ಷರು.—ಸಂಬಳವನ್ನು ಗೊತ್ತುಮಾಡುವುದೂ ಸರ್ಕಾರದ ಕರ್ತವ್ಯವಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಹೌದು; ಹೌದು. ರೇವಣಸಿದ್ದಪ್ಪನವರ ವಿಚಾರ ಹೇಳುವುದಾದರೆ—ನಾನು ವೈಯಕ್ತಿಕವಾಗಿ ಹೇಳುತ್ತಿಲ್ಲ—ಅವರು ಯಾವ ಮಾತುಗಳನ್ನು ಹೇಳುತ್ತಿದ್ದಾರೋ ಅದರಿಂದ ಯಾವ ಸಂಸ್ಥೆಯನ್ನು ಕಟ್ಟಲು ಹೊರಟಿದ್ದಾರೋ ಅದಕ್ಕೇ ವಿರುದ್ಧವಾಗಿ ಮಾಡುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಾನು ಏನೂ ಹೇಳಲಿಲ್ಲ.

ಅಧ್ಯಕ್ಷರು.—ಇವತ್ತುಮಟ್ಟಿಗೆ ಏನೂ ಹೇಳಿಲ್ಲ.

ಶ್ರೀ ಎಸ್. ಆರ್. ಕಂಠಿ.—ಈರೀತಿ ಅನೇಕ ಪ್ರಶ್ನೆಗಳು ಇದರಲ್ಲಿ ಸೇರಿವೆ. ಆದ್ದರಿಂದ ನಾನು ವಿದ್ಯಾರ್ಥಿಗಳಿಗೆ ಹೇಳುವುದಿಷ್ಟೆ. ಈಗ ಅವರು "ಮುಷ್ಕರವನ್ನು suspend ಮಾಡಿದ್ದೇವೆ; ಸರ್ಕಾರದವರು ಏನು ಮಾಡುತ್ತಾರೋ ನೋಡುತ್ತೇವೆ; ಮುಂದೆ ಏನು ಮಾಡಬೇಕೆಂಬುದನ್ನು ಯೋಚನೆ ಮಾಡುತ್ತಿದ್ದೇವೆ; ಈ ಬಗ್ಗೆ ನಮಗಿರುವ ಹಕ್ಕನ್ನು ರಿಜರ್ವ್ ಮಾಡಿಕೊಂಡಿದ್ದೇವೆ" ಎಂದೆಲ್ಲಾ ಮಾತಾಡುತ್ತಿದ್ದಾರೆ. ಇದೆಲ್ಲಾ ಸರಿಯಲ್ಲ. ಈ ಪ್ರಕಾರ ಸರ್ಕಾರ

(ಶ್ರೀ ಎಸ್. ಆರ್. ಕಂಠಿ)

ದವರಿಗೆ ಪಿಸ್ತೂಲ್ ತೋರಿಸಿದ್ದಾರೆ. ಇಂಥದಕ್ಕೆ ಯಾರೂ ಒಪ್ಪುವುದಿಲ್ಲ. ಸಣ್ಣವರಾಗಲೀ, ದೊಡ್ಡವರಾಗಲೀ, ತಿಳಿದವರಾಗಲೀ ತಿಳಿಯದವರಾಗಲೀ ಪಿಸ್ತೂಲು ಯಾರ ಕೈಯಲ್ಲಿದ್ದರೂ ಪಿಸ್ತೂಲೇ. ಆದ್ದರಿಂದ ನಾನು ಅವರಿಗೆ ತಿಳಿಸುವುದಿಷ್ಟೆ. "ಬೇಷರತ್ತಿನಿಂದ ಅವರು ಈ ಚಳವಳಿಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಇವೆಲ್ಲಾ ಅವರಿಗೆ ತರವಲ್ಲ. ಈಗ ಶಾಂತರೀತಿಯಲ್ಲಿ ಚಳವಳಿ ಮಾಡಿದ್ದಾರೆ ಎಂದು ಶಹಬಾಸ್ ಪಡೆದಿದ್ದಾರೆ. ಆದರೆ ಇದನ್ನೇ ಬಹಳ ದಿವಸ ಮುಂದುವರಿಸಿದರೆ ಅಕಸ್ಮಾತ್ ಘಟನೆಗಳು ಆಗಬಹುದು. ಅವರು ಹುಲಿಯ ಮೇಲೆ ಸವಾರಿ ಮಾಡುತ್ತಿದ್ದಾರೆ. ಇದನ್ನು ಅರಿತುಕೊಳ್ಳದೇ ಇದ್ದರೆ ಮುಂದೆ ದುಃಖಕ್ಕೆ ಈಡಾಗುತ್ತಾರೆ ಎಂದು ತಿಳಿಸಿದೆ. ನಾನು ಹೇಳಿದಂತೆಯೇ ಶಿವಮೊಗ್ಗದಲ್ಲಿ ನಡೆಯಿತು.

ಆದ್ದರಿಂದ, ಇಂದೂ ನಾನು ಅವರಿಗೆ ಅದನ್ನೇ ಮತ್ತೆ ವಿನಂತಿ ಮಾಡಿಕೊಳ್ಳುತ್ತೇನೆ. ಬೇಷರತ್ತಿನ ಮೇಲೆ ಈ ಚಳವಳಿಯನ್ನು ವಾಪಸ್ಸು ತೆಗೆದುಕೊಳ್ಳಬೇಕು. ಈ ಬಗ್ಗೆ ಮಾನ್ಯ ಸದಸ್ಯರು—ಆ ಕಡೆಯವರೂ ಸಹ—ಅವರಿಗೆ ಯೋಗ್ಯವಾದ ಸಲಹೆಯನ್ನು ಕೊಡಬೇಕೆಂದು ಬೇಡಿಕೊಳ್ಳುತ್ತೇನೆ.

ಅವರೆ ಯುಕ್ತವಾದ ಸಲಹೆಗಳನ್ನು ಕೊಡಲಿ ಎಂದು ನಾನು ಬೇಡುತ್ತಿದ್ದೇನೆ.

ಇನ್ನು ಎರಡನೆಯ ಮಾತು. ಅದನ್ನು ಕೆಲವರು ಒಂದು ರೀತಿಯಲ್ಲಿ ಹೇಳಿದ್ದು ಸರಿಯಲ್ಲ ಫೀ ಏನು ಹೆಚ್ಚುಮಾಡಿದ್ದಾರೆ ಅದು ಸರಿಯಲ್ಲ, ಸರ್ಕಾರದವರು ತಪ್ಪುಮಾಡಿದ್ದಾರೆ, ಅನ್ಯಾಯಮಾಡಿದ್ದಾರೆ ಎಂಬುದಾಗಿ ಒಂದು ಹೇಳಿಕೆಯನ್ನು ಈ ಸಭೆಯಲ್ಲಿ ಕೊಟ್ಟು ಸರ್ಕಾರದವರು ತಮ್ಮ ಆಜ್ಞೆಯನ್ನು ಪುನಃ ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ಹೇಳಿದರು. ಅದೇ ಕಾಲಕ್ಕೆ ನಿಮಗೇನಾದರೂ ಸರ್ಕಾರದಿಂದ ಈ ಬಗ್ಗೆ ರಿಯಾಯಿತಿ ಬೇಕಾದರೆ ನೀವು ರೆಪ್ರಸೆಂಟೇಷನ್ ಮಾಡಿ—ಈ ರೀತಿ ಕೆಲವು ಮಾತುಗಳನ್ನು ಅವರಿಗೆ ಹೇಳಿದೆ. ನಾನು ಈ ರೀತಿ ಹೇಳುವುದಕ್ಕೆ ಮುಂಚೆ ಎಷ್ಟೋ ಜನರು ಆ ಕಾಲಕ್ಕೆ ನನ್ನಲ್ಲಿ ಬಂದು ಈ ಬಗ್ಗೆ ವಿಚಾರಿಸಿದ್ದರು. ಆದರೆ ಅದೇ ಸಂಜೆಯಲ್ಲಿ ಆದ ನಿರ್ಣಯಕ್ಕೆ ಯಾರೂ ಒಪ್ಪಲಿಲ್ಲ. ಒಂದು ರೀತಿಯ ಕೆಟ್ಟವಾತಾವರಣ ವಿದ್ಯಾರ್ಥಿಗಳು ಇಟ್ಟಿದ್ದು ಸರಿಯಾದ ಮಾರ್ಗವಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಈ ವಿಷಯದಲ್ಲಿ ನಾನು ಈ ಮನೆಯಲ್ಲಿರತಕ್ಕಂಥ ಮಾನ್ಯಸದಸ್ಯರಿಗೂ ಮತ್ತು ಹೊರಗೆ ಇರುವಂತಹ ಜನರೆಲ್ಲರಿಗೂ ಒಂದು ವಿನಂತಿಯನ್ನು ಮಾಡುತ್ತಿದ್ದೇನೆ. ಈ ಪ್ರಶ್ನೆಯನ್ನು ನೀವು ಒಂದು ಸಣ್ಣ ವಿಚಾರವೆಂದು ಪರಿಗಣಿಸಿನೋಡುವುದಾದರೆ ಎಲ್ಲವೂ ಅರ್ಥವಾಗುತ್ತದೆ. ಆದರೆ ಕೇವಲ ಕೆಲವೇ ವಿದ್ಯಾರ್ಥಿಗಳ ದೃಷ್ಟಿಯಿಂದ ಇಂತಹ ಪ್ರಚೋದನೆಗೆ ಯಾರೂ ಅವಕಾಶ ಮಾಡಿಕೊಡಬಾರದು. ಎಲ್ಲಾ ವಿದ್ಯಾರ್ಥಿಗಳ ಸಮಾಜ ದೃಷ್ಟಿಯಿಂದ ಇದನ್ನು ಬಗೆ ಹರಿಸಬೇಕಾಗಿದೆ. ಈ ರಾಜ್ಯದಲ್ಲಿ ಯಾರೇ ಎಲ್ಲೇ ಇರಲಿ ವಿದ್ಯಾರ್ಥಿಗಳ ಸಮಾಜ ಏನಿದೆ, ವಿಶ್ವವಿದ್ಯಾನಿಲಯ ಸಮಾಜ ಏನಿದೆ ಎಂಬುದನ್ನು ತಮ್ಮ ಒಂದು ದೃಷ್ಟಿಯಲ್ಲಿಟ್ಟುಕೊಂಡು ನೋಡಬೇಕು. ಆಗ ಸರ್ಕಾರ ಮಾಡಿದ್ದು ಸರಿ ಮತ್ತು ಯೋಗ್ಯವೆಂದು ಅವರಿಗೇ ಕಾಣುತ್ತದೆಂಬುದಾಗಿ ನಾನು ಈ ಸಂದರ್ಭದಲ್ಲಿ ಒತ್ತಿ ಹೇಳಬೇಕಾಗಿದೆ. ನಾನು ಏನೇನು ಈ ಸಂದರ್ಭದಲ್ಲಿ ಹೇಳಬೇಕೋ ಎಲ್ಲವನ್ನೂ ಹೇಳಿದ್ದೇನೆ. ಅಧ್ಯಕ್ಷರು ನನಗೆ ಈ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಈ ಸಭೆಯಲ್ಲಿ ಅವಕಾಶಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ಮಾನ್ಯಸದಸ್ಯರೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ವಿದ್ಯಾ ಮಂತ್ರಿಗಳು ಈ ಚಳುವಳಿ ಬಗ್ಗೆ ಬಹಳ ಗಾಂಭೀರ್ಯವಾಗಿ ವಿದ್ಯಾರ್ಥಿಗಳು ಮುಷ್ಕರ ಮಾಡಿದ್ದಾರೆಂಬುದಾಗಿ ಒಂದು ರೀತಿಯ ವಾಣಿಯಿಂದ ಹೇಳಿದರು. ಹಾಗಾದರೆ ಅವರ ಒಂದು ಗಾಂಭೀರ್ಯದ ಮುಷ್ಕರದಿಂದಲಾದರೂ ತಾವು ಈ ಆರ್ಡರನ್ನು ವಾಪಸ್ಸು ತೆಗೆದುಕೊಳ್ಳುತ್ತೀರಾ? ಅವರಮೇಲೆ ಒಂದು ದುರಂತವಾಣಿ ಉಪಯೋಗಿಸಿದ್ದು ಸರಿಯೇ?—ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ.

ಶ್ರೀ ಎಸ್. ಆರ್. ಕಂಠಿ.—ನಾನು ಹೇಳಿದ್ದು ಇಷ್ಟೆ. ಇದು ಹುಲಿಯ ಮೇಲೆ ಸವಾರಿ ಮಾಡಿದಂತಾಗುತ್ತದೆ, ಆದ್ದರಿಂದ ನಿಮ್ಮ ಮುಷ್ಕರವನ್ನು ವಾಪಸ್ಸು ತೆಗೆದುಕೊಳ್ಳಬೇಕು, ಇದು ನಮ್ಮ ಪ್ರಜಾಪ್ರಭುತ್ವದ ತತ್ವದ ಅಭಿಪ್ರಾಯವೆಂದು ನಾನು ವಿದ್ಯಾರ್ಥಿಗಳಿಗೆ ಹೇಳಿದೆ. ವಿದ್ಯಾರ್ಥಿಗಳೂ ಸಹ ಹಾಗೆಯೇ ಶಾಂತಿಯುತವಾದ ಚಳುವಳಿನಡೆಸಿದ್ದಾರೆ, ಬಹಳ ಗಾಂಭೀರ್ಯವಾದ ಚಳುವಳಿನಡೆಸಿದ್ದಾರೆ. ಕೆಲವು ಕಡೆ ಮಾತ್ರ ಅವರೂ ಸಹ ಶಸ್ತ್ರಗಳನ್ನು ಉಪಯೋಗಿಸಿದ್ದಾರೆ. ಎಂಬುದಾಗಿ ತಿಳಿದು ಬಂದಿದೆ. ಒಟ್ಟಿನಲ್ಲಿ ಶಾಂತಿರೀತಿಯಿಂದ ಚಳುವಳಿನಡೆಸಿ ಮುಷ್ಕರ ನಿಲ್ಲಿಸುವವರಾಗುವುದರಲ್ಲಿ ನನಗೆ ನಂಬಿಕೆ ಇದೆಯೆಂದು ಹೇಳುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಒಂದು ಕ್ಲಾರಿಫಿಕೇಷನ್.

Mr. SPEAKER.—What clarification that the member is asking? He cannot preface it by a speech.

Sri K. LAKKAPPA.—I am only substantiating my point of clarification.

Mr. SPEAKER.—The Chair has said more than once that there is not going to be a speech at the time of seeking clarification. Because the hon. member did not get a chance earlier, he cannot preface his clarification by a speech. If he is doing that, he will not be allowed to ask for the clarification.

Sri S. NIJALINGAPPA.—May I say a word about the Shimoga incident?

Mr. SPEAKER.—Yes.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಅಧ್ಯಕ್ಷರೇ, ಶಿವಮೊಗ್ಗದಲ್ಲಿ ಒಂದು ಘಟನೆ ನಡೆಯಿತು ಎಂಬುದಾಗಿ ಮಾನ್ಯಸದಸ್ಯರು ಕೆಲವರು, ಹೇಳಿದ್ದರಿಂದ ನಾನು ಆ ವಿಷಯವನ್ನು ಸ್ವಲ್ಪ ವಿವರವಾಗಿ ಈಗ ಈ ಸಭೆಯಲ್ಲಿ ಹೇಳಬೇಕಾಗಿ ಬಂದಿದೆ. ಅವರು ಸುಮ್ಮನೆ ಇದ್ದಿದ್ದರೆ ನಾನೂ ಸಹ ಸುಮ್ಮನೆ ಇರುತ್ತಿದ್ದೆ. ನಿನ್ನೆ ವರ್ತಮಾನ ಪತ್ರಿಕೆಯಲ್ಲಿಯೂ ಈ ವಿಷಯ ಬಂದಿದೆ. ಆದ್ದರಿಂದ ಎಲ್ಲರಿಗೂ ಸ್ವಲ್ಪ ಮಟ್ಟಿಗೆ ಈ ವಿಷಯ ತಿಳಿದೇ ಇರಬಹುದು. ನಾನು ಅಲ್ಲಿಗೆ ಯಾವುದೋ ಒಂದು ಕಾರಣದಿಂದ ಹೋಗಿದ್ದುದರಿಂದ ಆ ಘಟನೆ ವಿಷಯ ಸಾರಾಂಶವಾಗಿಯಾದರೂ ತಿಳಿಸಬೇಕಾಗಿದೆ. ನಿನ್ನೆದಿನ ಶಿವಮೊಗ್ಗಾ ಮುನಿಸಿಪಾಲಿಟಿಯ ಒಂದು ಮುನಿಸಿಪಲ್ ಮಾರ್ಕೆಟ್ ಕಟ್ಟಡದ ಶಂಕುಸ್ಥಾಪನೆ ಹಾಕು

ವುದಕ್ಕೋಸ್ಕರ ನಾನು ಬಹಳ ದಿವಸಗಳ ಕೆಳಗೆ ಒಪ್ಪಿದ್ದರಿಂದ ಶಿವಮೊಗ್ಗಾಕ್ಕೆ ಹೋಗಬೇಕಾಗಿ ಬಂತು. ಆ ಸಂದರ್ಭದಲ್ಲಿ ವಿದ್ಯಾರ್ಥಿಗಳು ವಿದ್ಯಾರ್ಥಿನಿಯರು ಬಂದಿದ್ದರು. ಆ ಸಂದರ್ಭದಲ್ಲಿ ಕೆಲವಾರು ವಿದ್ಯಾರ್ಥಿಗಳು ವಿದ್ಯಾಶುಲ್ಕವನ್ನು ಏರಿಸದೆ ಕಮ್ಮಿ ಮಾಡಬೇಕೆಂದು ಹೇಳಿದರು. ನಾನು ನಿಮಗೆ ಅದರಿಂದ ಇರತಕ್ಕ ತೊಂದರೆಗಳನ್ನು ಹೇಳಿ ಸುಮ್ಮನೆ ಗಲಾಟೆಗೆ ಅವಕಾಶಕೊಡುವುದು ಸಾಧುವಲ್ಲ. ಯೋಗ್ಯರೀತಿಯಿಂದ ಇದು ನಡೆಯಬೇಕು ಎಂದು ಹೇಳಿದೆ. ಆ ವಿಚಾರ ಮಾತ್ರ ನನಗೆ ಹೇಳಿ ಸಾಕು, ತಮ್ಮಲ್ಲಿ ನನಗೆ ಹೆಚ್ಚಿನ ಮಟ್ಟಿಗೆ ಸಹಾನುಭೂತಿ ಇದೆಯೆಂದು ಹೇಳಿದೆ. ಆಗ ಅದಕ್ಕೆ ಸಂಬಂಧಪಟ್ಟವರನ್ನು ಕರೆತನ್ನಿ ಎಂದು ಹುಡುಗ ಹುಡುಗಿಯರಿಗೆ ಹೇಳಿಕಳುಹಿಸಿದೆ. ಆಗ ಸಹಸ್ರಾರು ಜನ ಯುವಕರು, ವಿದ್ಯಾರ್ಥಿಗಳು ಕೂಗಾಡುವುದಕ್ಕೆಷುರು ಮಾಡಿ, ಹೆಚ್ಚು ಗಲಾಟೆ ಮಾಡಿ ನನ್ನ ಕಾರಿನ ಮೇಲೆ ಕಲ್ಲುಗಳನ್ನು ಹಾಕಿದರು. ಆದರೆ ನನಗೇನೂ ಆಗಲಿಲ್ಲ. ಇಂಥಾದ್ದು ಎಷ್ಟೋ ಸಾರಿ ಆಗಿದೆ. ಹೀಗೆಯೇ ಶಂಕುಸ್ಥಾಪನಾಸಭೆ ನಡೆಯುತ್ತಿರುವಾಗಲೇ ಹೊರಗಡೆ ಈ ಮಂತ್ರಿಮಂಡಲಕ್ಕೆ ಧಿಕಾರ ಎಂಬುದಾಗಿ ಕೂಗುತ್ತಾ ಇದ್ದರು. ಆದರೆ ಶ್ರೀಮಾರ್ ಕಂಠಿಯವರಿಗೆ ಬಹಳವಾಗಿ ಬೈದರು. ಅದಾದನಂತರ ಹೊರಗೆ ಬರುವಾಗ ಬಹಳ ಗಲಾಟೆಮಾಡಿ ವಿಶೇಷ ದಾಂಧಲೆ ಎಬ್ಬಿಸಿ ಕಲ್ಲುಗಳನ್ನು ತೂರಿದರು. ಬಹಳ ಕಷ್ಟದಿಂದ ಪ್ರಯಾಸ ಪಟ್ಟು ಪೋಲೀಸಿನವರು ಮುಖ್ಯ ಮಂತ್ರಿಗಳು ಬರುತ್ತಾರೆಂದು ಪ್ರೊಟೆಕ್ಷನ್ ಏನೋ ಕೊಟ್ಟರು. ಹೊರಗೆ ಬಂದ ಕೂಡಲೆ ಕಲ್ಲಿನ ಸುರಿಮಳೆಯಿಂದ ಕಾರಿನ ಗಾಜು ಸಹ ಒಡೆದು ಹೋಯಿತು. ಕೆಲವರಿಗೆ ಗಾಯಗಳಾದುವು. ಆದಾಗ್ಯೂ ಅವರ ಇಂತಹ ಚಳುವಳಿಯಿಂದ ನನ್ನ ಮನಸ್ಸಿನ ಮೇಲೆ ಯಾವ ರೀತಿಯ ವಿರೋಧ ಪರಿಣಾಮವಾಗಲಿಲ್ಲವೆಂಬುದಾಗಿ ನಾನು ಇಲ್ಲಿ ಸ್ಪಷ್ಟ ಪಡಿಸುತ್ತೇನೆ. ಏಕೆಂದರೆ ವಿದ್ಯಾರ್ಥಿಗಳು ಖಂಡಿತ ಆ ರೀತಿ ಮಾಡಿಲ್ಲ. ಅವರ ಜೊತೆಗೆ ಕೆಲವರು ಗೂಂಡಾಗಳು ಸೇರಿದ್ದರು ಎಂದು ನನಗನ್ನಿಸುತ್ತದೆ. ಯಾವುದೋ ಒಂದು ಸಂದರ್ಭವನ್ನು ಉಪಯೋಗಿಸಿಕೊಂಡು ಆಂಟಿ ಸೋಷಿಯಲ್ ಎಲಿಮೆಂಟ್ಸ್ ರೂಪವಾಗಿ ಸಮಾಜ ಘಾತುಕ ವ್ಯಕ್ತಿಗಳು ಸಾಧಾರಣವಾಗಿ ಇಂತಹ ಸಂದರ್ಭಗಳನ್ನೇ ಉಪಯೋಗಿಸಿಕೊಂಡು ಅನೇಕ ದುರಂತಗಳಿಗೆ ಈಡುಮಾಡುವ ಪ್ರಸಂಗಗಳಿರುತ್ತವೆ; ಹಾಗೆ ಕೆಲವರು ಇದ್ದರೆಂದು ನನಗೆ ಭಾಸವಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳ ಮನಸ್ಸನ್ನು ಕಲಕಿಸುವ ಮತ್ತು ಕೆಡಿಸುವ ಜನರೂ ಸಹ ಕೆಲವರು ಅಲ್ಲಿ ಇದ್ದಾರೆ. ಆದ್ದರಿಂದ ಶಿವಮೊಗ್ಗಾದಲ್ಲಿ ನಡೆದಂಥ ಘಟನೆಗೆ ವಿದ್ಯಾರ್ಥಿಗಳೇ ಪೂರ್ತಿಯಾಗಿ ಜವಾಬ್ದಾರರು ಎಂದು ಹೇಳುವುದಕ್ಕೆ ನಾನು ಸಿದ್ಧನಾಗಿಲ್ಲ. ಈ ರೀತಿ ಯಾಗಿ ವಿದ್ಯಾರ್ಥಿಗಳ ಮನಸ್ಸನ್ನು ಕೆಡಿಸುತ್ತಾರಲ್ಲಾ ಎಂದು ನಾನು ಬಹಳ ವ್ಯಸನ ಪಡುತ್ತಿದ್ದೇನೆ. ವಿದ್ಯಾರ್ಥಿಗಳು ಬುದ್ಧಿವಂತರೇನೋ ಹೌದು. ಕಾಲೇಜಿನಲ್ಲಿ ಒದುತ್ತಿರುವುದರಿಂದ ಅವರು ತಮ್ಮ ಜವಾಬ್ದಾರಿ ಏನು ಎಂಬುದನ್ನು ತಕ್ಕ ಮಟ್ಟಿಗೆ ಅರಿತಿರುವವರು, ಆದರೂ ಶಿವಮೊಗ್ಗದ ಕೆಲವು ಜನ ಅಯೋಗ್ಯರ ಮಾತಿಗೆ ಎಡೆ ಕೊಟ್ಟರಲ್ಲಾ ಎಂದು ನನಗೆ ಬಹಳ ವ್ಯಸನವಾಗುತ್ತದೆ. ಅವರಿಗೆ ಚಿಕ್ಕವಯಸ್ಸಿನಲ್ಲಿ ವ್ಯವಹಾರ ಜ್ಞಾನ ಕಡಮೆಯಾಗಿರುವುದರಿಂದ ಅವರು ಈ ರೀತಿ ಮಾಡಿದ್ದಾರೆ. ಆದರೆ ಬೆಂಗಳೂರಿನ ವಿದ್ಯಾರ್ಥಿಗಳು ಬಹಳ ಶಾಂತಿಯುತವಾಗಿ ಮುಷ್ಕರ ಚಳುವಳಿಯನ್ನು ಮಾಡಿ ಒಂದು ತೀರ್ಮಾನವನ್ನು ನಿನ್ನೆಯ ದಿವಸ ಮಾಡಿದ್ದಾರೆ. ಇನ್ನು ಎರಡು ದಿವಸಗಳಲ್ಲಿ ನಾವು ಇದನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಅದನ್ನು ಅಬೆಯನ್ಸ್‌ನಲ್ಲಿಟ್ಟು ಆಜ್ಞೆಯನ್ನು ಸ್ವಾಗತ ಮಾಡುತ್ತೇವೆಂದು ಹೇಳಿದರು. ಇದಕ್ಕೆ ಬದಲಾಗಿ ಈಗಲೇ ಪೂರ್ತಿಯಾಗಿ ನಮ್ಮ ಚಳವಳಿಯನ್ನು ವಿತ್‌ಡ್ರಾ ಮಾಡುತ್ತೇವೆಂದು ವಿದ್ಯಾರ್ಥಿಗಳು ಹೇಳಿದ್ದರೆ ಅದು ಅವರ ಬುದ್ಧಿವಂತಿಕೆಯನ್ನು ಸೂಚಿಸುತ್ತಿತ್ತು, ಆ ರೀತಿ ಜಾಗ್ರತೆ ಯಾಗಿ ಮಾಡಲಿ ಎಂದು ನನ್ನ ಅಪೇಕ್ಷೆ. ಸರ್ಕಾರ ಎಂದೂ ವಿದ್ಯಾರ್ಥಿಗಳಿಗೆ ವಿರೋಧವಿಲ್ಲ. ಈಗ ಕಾಲೇಜುಫೀದರ ಜಾಸ್ತಿ ಮಾಡಬೇಕೆಂದು ಸಂಬಂಧಪಟ್ಟ ಮಂತ್ರಿಗಳು ಹೇಳಿದ್ದಾರೆ. ಈ ವಿಚಾರದಲ್ಲಿ ನನ್ನನ್ನು ಅನೇಕರು ಬಂದು ಕಂಡು ಹೋದಾಗ್ಗೆ ನಾನು ಅದನ್ನು ಇಳಿಸಬಹುದೇ ಎಂಬುದಾಗಿ ಮನಸ್ಸು ಮಾಡಿದುದೇ ನನ್ನಲ್ಲಿರತಕ್ಕ ಒಂದು weakness. ಆದರೂ ಅದನ್ನು ಉಪಯೋಗ ಮಾಡುವುದಕ್ಕೆ ಪ್ರಯತ್ನ ಪಡುತ್ತೇನೆ. ಕೆಲವು ಸಂದರ್ಭಗಳಲ್ಲಿ ಅನೇಕ ವಿಚಾರಗಳನ್ನು ಮೀರಬೇಕಾಗುತ್ತದೆ. ಈ ಬಗ್ಗೆ ನನ್ನ ಅಂತಃಕರಣ ಏನು ಇದ್ದರೂ ಸರ್ಕಾರದ ಆಡಳಿತವನ್ನು ನಡೆಸಬೇಕಾಗಿರುವುದರಿಂದ ಸರ್ಕಾರ ಏನೇನು ಕ್ರಮಗಳನ್ನು ಅನುಸರಿಸಬೇಕು ಮತ್ತು ರಾಜ್ಯದ ಆಡಳಿತ ಸುಗಮವಾಗಿ ನಡೆಯಬೇಕಾದರೆ ಯಾವ್ಯಾವ ವ್ಯವಸ್ಥೆಗಳನ್ನು ಸರಕಾರದವರು ಕೂಡಲೆ ಮಾಡಬೇಕೆಂಬುದು ಮುಖ್ಯ. ಎಲ್ಲಕ್ಕಿಂತಲೂ ಮುಖ್ಯವಾಗಿ ನನ್ನ ಸಹೋದ್ಯೋಗಿಗಳ ಸಹಕಾರದಿಂದ ಮಾತ್ರ ನಾನು ಈ ಸರ್ಕಾರದ ಆಡಳಿತವನ್ನು ನಡೆಸಿಕೊಂಡು ಹೋಗುತ್ತೇನೆ. ಹಿಂದೆ ಸರ್ಕಾರದವರು ಯಾವ ರೀತಿ ಗಡಿಯೋಜನೆ ತೀರ್ಮಾನಕ್ಕೆ ಬಂದಾಗ ಹಿಂದು ಮುಂದುನೋಡಿ ಒಂದು ಅಂತ್ಯ ತೀರ್ಮಾನವನ್ನು ಕೈಗೊಂಡರೋ ಅದನ್ನು ಈಗ ಗಮನಕ್ಕೆ ತಂದುಕೊಳ್ಳಬೇಕಾಗಿದೆ. ಆದರೆ ಈ ವಿಚಾರಗಳಲ್ಲಿ ಅಂತಃಕರಣ ಏನು ಇದ್ದರೂ, ಇದು ರಾಜಕೀಯ ಕೆಲಸ. ಸರ್ಕಾರದ ಆಡಳಿತ ಸುಗಮವಾಗಿ ನಡೆಯಬೇಕಾಗಿದ್ದರೆ, ಸ್ವಲ್ಪ ಮಟ್ಟಿಗಾದರೂ ಆಡಳಿತದಲ್ಲಿ ಬಿಗಿಯಿರಬೇಕು. ಅಂತಹ ಒಂದು ಅವಕಾಶಕ್ಕೆ ದಾರಿ ಮಾಡಿಕೊಡಲು ವಿದ್ಯಾರ್ಥಿಗಳಿಂದಿದ್ದು ಆ ವಿದ್ಯಾರ್ಥಿಗಳನ್ನು ಯಾವುದೇ ರೀತಿಯಲ್ಲಾದರೂ ಮುಂದೆ ತರುವ ಕಾರ್ಯದಲ್ಲಿ ನಿರತರಾಗುವ ಜನಗಳು ಸ್ಪಷ್ಟವಾಗಿ ತಿಳಿದುಕೊಳ್ಳಲಿ ಎಂದು ನಾನು ಹೇಳುತ್ತೇನೆ, ಈ ರೀತಿಯಾಗಿ ಶಿವಮೊಗ್ಗದಲ್ಲಿ ವಿದ್ಯಾರ್ಥಿಗಳು ಒಂದು ಘಟನೆಯನ್ನು ನಡೆಸಿದರು. ಆದರೆ ಅದರಿಂದ ನನಗೆ ಯಾವ ರೀತಿಯಾದ ಪರಿಣಾಮವೂ ಉಂಟಾಗಲಿಲ್ಲವೆಂದು ನಾನು ಹೇಳುತ್ತೇನೆ.

5-30 P.M.

NON-OFFICIAL RESOLUTIONS

Steps to supply good and adequate drinking water to the Bangalore City from the river Cauvery alone to serve the needs of the City.

ಶ್ರೀ ಟಿ. ಮಾದಯ್ಯಗೌಡ (ರಾಮನಗರ).—ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನಲ್ಲಿರತಕ್ಕ ಈ ಕೆಳಗಿನ